# ಶ್ರೀ ಚೈತನ್ಯ ಮಹಾಪ್ರಭುಗಳು

## !!!ಅವರ ಜೀವನ ಮತ್ತು ಬೋಧನೆಗಳು



ಶ್ರೀ ಭಕ್ತಿವಿನೋದ ಠಾಕೂರ

# ಶ್ರೀ ಚೈತನ್ಯ ಮಹಾಪ್ರಭುಗಳು

## ಅವರ ಜೀವನ ಮತ್ತು ಬೋಧನೆಗಳು

ಶ್ರೀ ಭಕ್ತಿವಿನೋದ ಠಾಕೂರ

**ಶ್ರೀ ಚೈತನ್ಯ ಮಹಾಪ್ರಭುಗಳು – ಅವರ ಜೀವನ ಮತ್ತು ಬೋಧನೆಗಳು**
**ಕನ್ನಡ ಅನುವಾದ**

| | |
|---|---|
| ಆಂಗ್ಲ ಮೂಲ | – ಶ್ರೀಚೈತನ್ಯ ಮಹಾಪ್ರಭು–ಹಿಸ್ ಲೈಫ್ ಅಂಡ್ ಪ್ರೆಸೆಪ್ಟ್ಸ್ |
| ಗ್ರಂಥ ಕರ್ತರು | – ಶ್ರೀ ಭಕ್ತಿವಿನೋದ ಠಾಕೂರ |
| ಪ್ರಕಾಶಕರು | – ಗೋಸಾಯಿ ಪಬ್ಲಿಷರ್ಸ್ |

**ಶ್ರೀ ನರಸಿಂಫ ಚೈತನ್ಯ ಮಠ, ದೊಡ್ಡಗೋಸಾಯಿ ಘಟ್ಟ,**
**ಗಂಜಾಮ್, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ – ೫೭೧೪೩೮**

ಈ ಪುಸ್ತಕದ ವಿಷಯದಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆಯಲಿಚ್ಛಿಸುವವರು ಮೇಲ್ಕಂಡ ವಿಳಾಸದಲ್ಲಿ ಕಾರ್ಯದರ್ಶಿಗಳನ್ನು ಸಂಪರ್ಕಿಸಬಹುದು.

ಅನುವಾದಕರು
ಚೈತನ್ಯದಾಸ
ಶ್ಯಾಮಸುಂದರದಾಸ

# <u>ಪರಿವಿಡಿ</u>


ಶ್ರೀ ಭಕ್ತಿವಿನೋದ ಠಾಕೂರರ ಸಂಕ್ಷಿಪ್ತ ಜೀವನಚರಿತ್ರೆ.................. I
ಪ್ರಸ್ತಾವನೆ.................................................................. VI

ಭಾಗ ಒಂದು
**ಶ್ರೀ ಚೈತನ್ಯ ಮಹಾಪ್ರಭುಗಳ ಜೀವನ................................ ೧**

ಭಾಗ ಎರಡು
**ಶ್ರೀ ಚೈತನ್ಯ ಮಹಾಪ್ರಭುಗಳ ಬೋಧನೆಗಳು........................ ೧೫**



# ಶ್ರೀ ಭಕ್ತಿವಿನೋದ ಠಾಕೂರ

# ಶ್ರೀ ಭಕ್ತಿವಿನೋದ ಠಾಕೂರರ ಸಂಕ್ಷಿಪ್ತ ಜೀವನಚರಿತ್ರೆ

**ವಂದೇ ಭಕ್ತಿ ವಿನೋದಂ**
**ಶ್ರೀ ಗೌರ ಶಕ್ತಿ ಸ್ವರೂಪಕಂ**
**ಭಕ್ತಿ ಶಾಸ್ತ್ರಜ್ಞ ಸಂರಾಜಂ**
**ರಾಧಾ ರಸ ಸುಧಾ ನಿಧಿಂ**

"ಶ್ರೀ ಚೈತನ್ಯಮಹಾಪ್ರಭುಗಳ ಶಕ್ತಿಯ ಮೂರ್ತಿಯಾಗಿರುವ, ಭಕ್ತಿಮಾರ್ಗದ ಶಾಸ್ತ್ರಗಳನ್ನು ಅರಿತಿರುವವರೆಲ್ಲರ ರಾಜರಾಗಿರುವ ಮತ್ತು ರಾಧಾರಾಣಿಯವರ ಭಕ್ತಿಯೆಂಬ ಅಮೃತದ ನಿಧಿಯಾಗಿರುವ ಶ್ರೀ ಭಕ್ತಿವಿನೋದ ಠಾಕೂರರಿಗೆ ವಂದನೆಗಳು"

ಶ್ರೀ ಕೇದಾರನಾಥ ದತ್ತ ಭಕ್ತಿವಿನೋದ ಠಾಕೂರರು ೧೮೩೮ ರಲ್ಲಿ ಬಂಗಾಲದ ಬೀರನಗರದಲ್ಲಿ ಜನಿಸಿದರು. ಜಮೀನುದಾರರಾಗಿದ್ದ ರಾಜಾ ಕೃಷ್ಣಾನಂದ ದತ್ತರ ವಂಶದಲ್ಲಿ ಅವರು ಜನಿಸಿದರು. ಕೇದಾರನಾಥ ದತ್ತರು ತಮ್ಮ ಶೈಶವಾವಸ್ಥೆ ಮತ್ತು ಬಾಲ್ಯಾವಸ್ಥೆಯನ್ನು ಬೀರನಗರ(ಉಲಾಗ್ರಾಮ) ದಲ್ಲಿ, ತಮ್ಮ ತಾಯಿಯ ತಂದೆಯವರಾದ ಮುಸ್ತೌಫಿ ಮಹಾಶಯರ ಅಪಾರ ಸಂಪದ್ಭರಿತ ದೊಡ್ಡ ಭವನದಲ್ಲಿ ಕಳೆದರು.

ಭಕ್ತಿವಿನೋದರು ೧೧ ವರುಷ ವಯಸ್ಸಿನವರಾಗಿದ್ದಾಗ ಅವರ ತಂದೆ ತೀರಿಕೊಂಡರು ಮತ್ತು ಇದಾದನಂತರ ಶೀಘ್ರವೇ ಅವರ ಸಂಸಾರ ಬಹಳ ಸಂಕಷ್ಟಕ್ಕೀಡಾಯಿತು. ೧೮೫೦ ರಲ್ಲಿ ಅವರ ಮಾವ ಕಾಶಿಪ್ರಸಾದ ಘೋಷರು ಬೀರನಗರಕ್ಕೆ ಬಂದು ಕಲ್ಕತ್ತಾದಲ್ಲಿನ ತಮ್ಮ ಮನೆಗೆ ಬಂದುಳಿದು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಲು ಬಾಲಕ ಭಕ್ತಿವಿನೋದರನ್ನು ಆಹ್ವಾನಿಸಿದರು. ಭಕ್ತಿವಿನೋದರು ತಮ್ಮ ತಾಯಿ ಹಾಗೂ ತಂಗಿಯನ್ನು ಬೀರನಗರದಲ್ಲಿ ಬಿಟ್ಟು ಕಲ್ಕತ್ತಾದಲ್ಲಿನ ತಮ್ಮ ಮಾವನ ಮನೆಗೆ ಹೋದರು. ಆ ಕಾಲದಲ್ಲಿ ಕಾಶಿಪ್ರಸಾದರು ಸಾಹಿತಿಕ ಕ್ಷೇತ್ರದಲ್ಲಿ ಹೆಸರಾಂತ ವ್ಯಕ್ತಿಯಾಗಿದ್ದರು ಮತ್ತು "ದಿ ಹಿಂದು ಇಂಟೆಲಿಜೆನ್ಸರ್" ಎಂಬ ಒಂದು ನಿಯತಕಾಲಿಕದ ಸಂಪಾದಕರಾಗಿದ್ದರು. ಅಲ್ಪ ಸಮಯದಲ್ಲೇ ಭಕ್ತಿವಿನೋದರು ಕಾಶಿಪ್ರಸಾದರ ಗ್ರಂಥಾಲಯದಲ್ಲಿನ ಎಲ್ಲ ಪುಸ್ತಕಗಳನ್ನು ಓದಿ ಮುಗಿಸಿದರು ಮತ್ತು ಬಹುಬೇಗನೇ ಆಂಗ್ಲ ಭಾಷೆಯನ್ನು ಓದುವುದರಲ್ಲಿ, ಬರೆಯುವುದರಲ್ಲಿ ಮತ್ತು ಮಾತನಾಡುವುದರಲ್ಲಿ ಪ್ರವೀಣರಾದರು.

ಕಲ್ಕತ್ತಾದ ಉಪ್ಪು ನೀರಿನ ಕಾರಣ ಬಹಳ ಅಸ್ವಸ್ಥರಾದ ಭಕ್ತಿವಿನೋದರು ಬೀರನಗರಕ್ಕೆ ಹಿಂದಿರುಗಬೇಕಾಯಿತು. ಅಲ್ಲಿ ಅವರು ಒಬ್ಬ ಮುಸಲ್ಮಾನ ಫಕೀರನಿಂದ ಔಷಧಿಯನ್ನು ಪಡೆದು ಗುಣಮುಖರಾದರು. ಅತಿ ಶೀಘ್ರದಲ್ಲೇ ಬೀರನಗರ ಗ್ರಾಮವು ಪ್ಲೇಗ್ ಕಾಯಿಲೆಯಿಂದ ಪೀಡಿತವಾಗಿ ಎಲ್ಲವು ನಾಶವಾಗುವುದೆಂದು ಅದೇ ಸಮಯದಲ್ಲಿ ಆ ಫಕೀರನು ಭವಿಷ್ಯ ನುಡಿದಿದ್ದನು. ಅಷ್ಟೇಅಲ್ಲದೆ ಕೇದಾರನಾಥರು ಭವಿಷ್ಯದಲ್ಲಿ ಶ್ರೀ ಕೃಷ್ಣನ ಮಹಾನ್ ಭಕ್ತರಾಗಿ ಗುರುತಿಸಲ್ಪಡುವರೆಂದು ಕೂಡಾ ಹೇಳಿದ್ದನು.

೧೮೫೭ರಲ್ಲಿ ತಮ್ಮ ೧೮ನೇ ವರುಷ ವಯಸ್ಸಿನಲ್ಲಿ ಭಕ್ತಿವಿನೋದರು ಕಲ್ಕತ್ತಾದಲ್ಲಿ ತಮ್ಮ ಕಾಲೇಜಿನ ಮೊದಲನೆಯ ವರುಷ ಪ್ರಾರಂಭಿಸಿದರು. ಈ ಸಮಯದಲ್ಲಿ ಅವರು ಅನೇಕ ಚಿಕ್ಕ ಲೇಖನಗಳು ಮತ್ತು ಪ್ರಬಂಧಗಳನ್ನು ಬರೆದು ಅನೇಕ ಆಂಗ್ಲ ಮತ್ತು ಬಂಗಾಲಿ ಪತ್ರಿಕೆಗಳಲ್ಲಿ ಪ್ರಕಟಿಸಿದರು ಅಲ್ಲದೆ ಅಂಗ್ಲ ಮತ್ತು ಬಂಗಾಲಿ ಭಾಷೆಗಳಲ್ಲಿ ಹಲವಾರು ಪ್ರವಚನಗಳನ್ನು ನೀಡಿದರು. ಆ ಸಮಯದಲ್ಲಿ ರಬೀಂದ್ರನಾಥ ಠಾಗೋರರ ಸಹೋದರನಾದ ದ್ವಿಜೇಂದ್ರನಾಥರು ಭಕ್ತಿವಿನೋದರ ಆತ್ಮೀಯ ಸ್ನೇಹಿತರಾಗಿದ್ದರು. ಪ್ರೀತಿಯಿಂದ ಭಕ್ತಿವಿನೋದರು ದ್ವಿಜೇಂದ್ರನಾಥರನ್ನು 'ಬರೊ ದಾದ' (ಹಿರಿಯ ಸಹೋದರ) ಎಂದು ಸಂಬೋಧಿಸುತ್ತಿದ್ದರು. ಅವರ ಸಹಾಯದಿಂದ ಭಕ್ತಿವಿನೋದರು ಎಲ್ಲ ಪಾಶ್ಚಿಮಾತ್ಯ ಧಾರ್ಮಿಕ ಪುಸ್ತಕಗಳನ್ನು ಲಕ್ಷ್ಯಪೂರ್ವಕವಾಗಿ ಓದಿದರು. ಅವರು ವಿವಿಧ ಪಾಶ್ಚಾತ್ಯ ಸಂಸ್ಕೃತಿಗಳ ತತ್ತ್ವಜ್ಞಾನವನ್ನು ಮತ್ತು ಅನೇಕ ಇನ್ನಿತರ ಧಾರ್ಮಿಕವ್ಯವಸ್ಥೆಗಳ ವಿಚಾರಗಳನ್ನು ಓದಿದ ಕಾರಣ, ಸಾಮಾನ್ಯ ಜನರು ಅವರ ಅಲೌಕಿಕ ಗುಣಲಕ್ಷಣವನ್ನು ಅರ್ಥಮಾಡಿಕೊಳ್ಳಲಾಗದೇ ಅವರನ್ನು ಕೇವಲ ಒಬ್ಬ ಲೌಕಿಕ ವಿದ್ವಾಂಸ ಅಥವಾ ಒಬ್ಬ ತರ್ಕಿಯೆಂದು ಪರಿಗಣಿಸಿದರು.

೧೮೫೮ ವರುಷದ ಕೊನೆಯಲ್ಲಿ ಭಕ್ತಿವಿನೋದರು ತಮ್ಮ ತಾಯಿಯನ್ನು ಭೇಟಿಯಾಗಲು ಕಲ್ಕತ್ತಾದಿಂದ ಬೀರನಗರಕ್ಕೆ ಪ್ರಯಾಣ ಬೆಳೆಸಿದರು. ಒಂದು ಕಾಲದಲ್ಲಿ ಸಂಪತ್ಭರಿತವಾಗಿದ್ದ ಮತ್ತು ಜನರಿಂದ ತುಂಬಿದ್ದ ಅವರ ಜನ್ಮಸ್ಥಳವಾದ ಬೀರನಗರ ಗ್ರಾಮದ ಬದಲಾದ ಪರಿಸ್ಥಿತಿಯನ್ನು ನೋಡಿ ಬಹಳ ದುಃಖಿತರಾದರು. ಮುಸಲ್ಮಾನ ಫಕೀರನ ಭವಿಷ್ಯ ನುಡಿಯಂತೆ, ಬೀರನಗರ ಪ್ಲೇಗ್ ರೋಗದಿಂದ ಪೀಡಿತವಾಗಿ ಪಾಳುಬಿದ್ದಂತಾಗಿತ್ತು. ಅನೇಕ ನಿವಾಸಿಗಳು ಸತ್ತು ಹೋಗಿದ್ದರು ಅಥವಾ ನಗರವನ್ನು ಬಿಟ್ಟು ಹೋಗಿದ್ದರು ಮತ್ತು ಒಂದು ಕಾಲದಲ್ಲಿ ಅಷ್ಟೊಂದು ಪ್ರಚಲಿತವಾಗಿದ್ದ ಅದರ ಸಂಪತ್ತು ಮತ್ತು ಭವ್ಯತೆ ಈಗ, ಕಳೆದು ಹೋದ ಘಟನೆಯಾಗಿ ತೋರಿತು.

ಭಕ್ತಿವಿನೋದರು ತಮ್ಮ ತಾಯಿಯನ್ನು ಮತ್ತು ತಮ್ಮ ತಂದೆಯ ತಾಯಿಯನ್ನು ಕರೆದುಕೊಂಡು ಕಲ್ಕತ್ತಾಕ್ಕೆ ಹಿಂದಿರುಗಿದರು. ಕಲ್ಕತ್ತಾಕ್ಕೆ ಹಿಂದಿರುಗಿದ ಸ್ವಲ್ಪ ಸಮಯದಲ್ಲೇ ಅವರು ತಮ್ಮ ತಂದೆಯವರ ತಂದೆಯ ಕೊನೆಗಾಲದಲ್ಲಿ ಜೊತೆಯಿರಲು ಒರಿಸ್ಸಾಗೆ ತೆರಳಬೇಕಾಯಿತು. ಒಂದು ಕಾಲದಲ್ಲಿ ಕಲ್ಕತ್ತಾದ ಒಬ್ಬ ಗಣ್ಯ ವ್ಯಕ್ತಿಯಾಗಿದ್ದ ಭಕ್ತಿವಿನೋದರ ಅಜ್ಜರಾದ ರಾಜವಲ್ಲಭ ದತ್ತ ಒರಿಸ್ಸಾದ ಗ್ರಾಮಾಂತರ ಪ್ರದೇಶದಲ್ಲಿ ಸಂತರಾಗಿದ್ದರು. ಅವರು ಭವಿಷ್ಯವನ್ನು ನುಡಿಯುತ್ತಿದ್ದರು

ಮತ್ತು ಈ ಪ್ರಪಂಚದಲ್ಲಿನ ತಮ್ಮ ಸಮಯ ಬಹಳ ಬೇಗ ಕೊನೆಯಾಗುವುದೆಂದು ತಿಳಿದಿದ್ದರು. ಇದನ್ನು ತಿಳಿದ ಅವರು ತಮ್ಮ ಪ್ರೀತಿಯ ಮೊಮ್ಮಗನನ್ನು ತಮ್ಮೊಂದಿಗಿರಲು ಒರಿಸ್ಸಾಗೆ ಬರಲು ಕೋರಿದರು. ೧೮೫೯ ರ ಪ್ರಾರಂಭದಲ್ಲಿ ಭಕ್ತಿವಿನೋದರು ೨೧ ವರುಷ ವಯಸ್ಸಿನವರಾಗಿದ್ದಾಗ ತಮ್ಮ ಅಜ್ಜ ಇಹಲೋಕ ತ್ಯಜಿಸಿದರು. ಈ ಪ್ರಪಂಚದಿಂದ ತೆರಳುವ ಮುನ್ನ ಅವರು ಭಕ್ತಿವಿನೋದರಿಗೆ ಹೀಗೆಂದು ಹೇಳಿದರು, "ನಿನ್ನ ೨೭ ನೇ ವರುಷ ವಯಸ್ಸಿನಲ್ಲಿ ನೀನು ಯಾವ ಕೆಲಸ ಮಾಡಿತ್ತಿಯೋ ಅದು ನಿನ್ನ ಮುಖ್ಯ ವೃತ್ತಿಯಾಗುತ್ತದೆ." ಇದನ್ನು ಹೇಳಿದಾಕ್ಷಣ ಒಬ್ಬ ಯೋಗಿಯಂತೆ ಬ್ರಹ್ಮ ರಂಧ್ರವನ್ನು ಭೇದಿಸಿಕೊಂಡು ಅವರ ಜೀವ ಹಾರಿಹೋಯಿತು.

ಮೇದಿನಾಪುರದ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಸಮಯದಲ್ಲಿ, ಭಕ್ತಿವಿನೋದರಿಗೆ ಅನೇಕ ಧಾರ್ಮಿಕ ಸಮುದಾಯಗಳ ಸದಸ್ಯರುಗಳೊಂದಿಗೆ ಆಧ್ಯಾತ್ಮಿಕ ಚರ್ಚೆಯಲ್ಲಿ ವಿವಿಧ ಮತಗಳ ಧಾರ್ಮಿಕ ಕರ್ತವ್ಯಗಳ ಅನೇಕ ವರ್ಣನೆಗಳನ್ನು ಪರೀಕ್ಷಿಸುವ ಅವಕಾಶ ದೊರಕಿತು. ತಮ್ಮ ಪರಿಶೋಧನೆ ಮತ್ತು ತನಿಖೆಯ ಮೂಲಕ ಬಂಗಾಲದಲ್ಲಿ ವಾಸ್ತವವಾಗಿ ಭಕ್ತಿಮಾರ್ಗದ ಧರ್ಮವನ್ನು ಯಥಾರ್ಥವಾಗಿ ಪ್ರಚಾರ ಮಾಡಿರುವುದು ಶ್ರೀ ಚೈತನ್ಯ ಮಹಾಪ್ರಭುಗಳೊಬ್ಬರೇ ಎಂಬುದನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಭಕ್ತಿವಿನೋದರು ಸಫಲರಾದರು. ಭಕ್ತಿವಿನೋದರು ಶ್ರೀ ಚೈತನ್ಯರ ಬಗ್ಗೆ ಹೆಚ್ಚು ತಿಳಿಯಲು ಬಯಸಿ ಶ್ರೀಲ ಕೃಷ್ಣ ದಾಸ ಕವಿರಾಜ ಗೋಸ್ವಾಮಿಗಳಿಂದ ರಚಿಸಲ್ಪಟ್ಟ ಶ್ರೀ ಚೈತನ್ಯ ಚರಿತಾಮೃತ ಎಂಬ ಮಹಾಪ್ರಭುಗಳ ಜೀವನ ಚರಿತ್ರೆಯನ್ನು ಅಧ್ಯಯನ ಮಾಡಲು ಆಶಿಸಿದರು. ಆದರೆ ಅದನ್ನು ಹುಡುಕುವಲ್ಲಿ ಅವರು ಎಷ್ಟೇ ಶ್ರಮ ವಹಿಸಿದರೂ ಅದರ ಒಂದೇ ಒಂದು ಪ್ರತಿ ಕೂಡಾ ಅವರಿಗೆ ದೊರಕಲಿಲ್ಲ.

ಕೊನೆಗೂ, ಭಕ್ತಿವಿನೋದರು ದಿನಾಜ್‌ಪುರದಲ್ಲಿ ಜಿಲ್ಲಾ ನ್ಯಾಯಾಧಿಕಾರಿಯಾಗಿ ವಾಸವಾಗಿದ್ದ ಸಮಯದಲ್ಲಿ ಚೈತನ್ಯ ಚರಿತಾಮೃತದ ಒಂದು ಪ್ರತಿ ಅವರಿಗೆ ದೊರಕಿತು. ವೈಷ್ಣವ ಸಿದ್ಧಾಂತಕ್ಕೆ ಆಕರ್ಷಿತರಾಗುತ್ತ ಭಕ್ತಿವಿನೋದರು ಚೈತನ್ಯ ಚರಿತಾಮೃತವನ್ನು ಪದೇ ಪದೇ ಓದುತ್ತ ಚೈತನ್ಯ ಮಹಾಪ್ರಭುಗಳ ಮೇಲೆ ಮಹತ್ತರವಾದ ಶ್ರದ್ಧೆ ಮತ್ತು ಗೌರವವನ್ನು ಮೈಗೂಡಿಸಿಕೊಡರು. ಹೀಗೆ ಅವರು ತಮ್ಮ ಮನಸ್ಸನ್ನು ಸೋದ್ದೇಶವಾಗಿ ವೈಷ್ಣವ ಸಿದ್ಧಾಂತ ಅಧ್ಯಯನ ಮಾಡಲು ಬಳಸಿದರು. ತಮ್ಮ ಆತ್ಮಚರಿತ್ರೆಯಲ್ಲಿ ಅವರು ಹೀಗೆ ಬರೆದಿದ್ದಾರೆ:–

> "ಈ ಸಮಯದಿಂದ ಶ್ರೀ ಚೈತನ್ಯದೇವರ ಮೇಲೆ ನನಗೆ ಗೌರವ ಮತ್ತು ಭಕ್ತಿ ಹುಟ್ಟಿದ್ದು, ನನ್ನ ಹೃದಯದೊಳಗೆ ಬಿತ್ತಿದ ಆ ಶ್ರದ್ಧೆಯ ಬೀಜವು ಬೇಗನೆ ಚಿಗುರಿತು. ಈಗ ನನಗೆ ಕೃಷ್ಣನ ಬಗೆಗಿನ ಶಾಸ್ತ್ರಗಳನ್ನು ಹಗಲು ರಾತ್ರಿ ಓದುವ ಒಲವು ಉಂಟಾಗಿದೆ".

ಸರ್ಕಾರವು ಅವರನ್ನು ಪುರಿಗೆ ವರ್ಗಾಯಿಸಿದಾಗ ಅವರನ್ನು ಅಲ್ಲಿಯ ಜಿಲ್ಲಾ ನ್ಯಾಯಾಧೀಶರಾಗಿ ಮತ್ತು ಪ್ರಸಿದ್ಧ ಜಗನ್ನಾಥ ದೇವಸ್ಥಾನದ ಕಾರ್ಯ ನಿರ್ವಾಹಕರನ್ನಾಗಿ ನೇಮಿಸಿತು. ಮೂರ್ತಿ

ಪೂಜೆಯಲ್ಲಿ ಒಂದು ಕ್ರಮವನ್ನು ಸ್ಥಾಪಿಸಲು ತಮ್ಮ ಸರ್ಕಾರಿ ಅಧಿಕಾರವನ್ನು ಬಳಸಿದರು. ಜಗನ್ನಾಥ ಪುರಿ ದೇವಸ್ಥಾನದ ಪ್ರಾಂಗಣದಲ್ಲಿ ಒಂದು 'ಭಕ್ತಿ ಮಂಟಪ'ವನ್ನು ಸ್ಥಾಪಿಸಿ ಪ್ರತಿನಿತ್ಯವು ಶ್ರೀಮದ್ ಭಾಗವತದ ಪ್ರವಚನಗಳನ್ನು ಏರ್ಪಡಿಸಲಾಯಿತು. ಪುರಿಯಲ್ಲೇ ಅವರ ಪತ್ನಿಯಾದ ಭಗವತಿ ದೇವಿಯವರು ೧೮೭೪ ರಲ್ಲಿ ಒಂದು ಗಂಡು ಮಗುವಿಗೆ ಜನ್ಮವಿತ್ತರು. ಮುಂದೆ ತ್ರಿದಂಡಿ ಸ್ವಾಮಿ ಶ್ರೀ ಭಕ್ತಿಸಿದ್ಧಾಂತ ಸರಸ್ವತಿ ಠಾಕುರ ಪ್ರಭುಪಾದ ಎಂಬ ಹೆಸರಿನಿಂದ ಗೌಡೀಯ ಮಠದ ಸ್ಥಾಪನಾಚಾರ್ಯರೆಂದು ಪ್ರಸಿದ್ಧರಾದ, ಈ ದಿವ್ಯ ಶಿಶುವನ್ನು ವಿಮಲಾ ಪ್ರಸಾದ ಎಂದು ಹೆಸರಿಸಲಾಯಿತು.

೧೮೮೧ ರಲ್ಲಿ ಮಹಾಪ್ರಭುಗಳ ಭಕ್ತಿ ಆಂದೋಲನವನ್ನು ಪ್ರಚಾರ ಮಾಡಲೆಂದು "ಸಜ್ಜನ ತೋಶಿಣಿ" ಎಂಬ ಒಂದು ಮಾಸಿಕ ಪತ್ರಿಕೆಯನ್ನು ಮುದ್ರಿಸಲಾರಂಭಿಸಿದರು. ೧೮೮೭ ರಲ್ಲಿ ಅವರನ್ನು ಪುನಃ ಬಂಗಾಲದ ಕೃಷ್ಣಾನಗರಕ್ಕೆ ವರ್ಗಾಯಿಸಲಾಯಿತು. ಇಲ್ಲಿಯೇ ಅವರು ಗೌಡಿಯ ವೈಷ್ಣವ ಸಿದ್ಧಾಂತಕ್ಕೆ ಅತಿ ಪ್ರಮುಖ ಕಾಣಿಕೆಯನ್ನು ನೀಡಲಿದ್ದರು. ನವದ್ವೀಪದ ಒಂದು ಧರ್ಮಶಾಲೆಯಲ್ಲಿ ಉಳಿದುಕೊಂಡು ಒಂದು ರಾತ್ರಿ ಭಕ್ತಿವಿನೋದರು ಜಲಾಂಗಿ ನದಿಯಿಂದಾಚೆ ತಮ್ಮ ದೃಷ್ಟಿ ಹಾಯಿಸಿದಾಗ ಒಂದು ಅದ್ಭುತ ಮಂದಿರದ ದೃಶ್ಯವನ್ನು ಕಂಡರು. ಮಾರನೆಯ ದಿನ ಬೆಳಿಗ್ಗೆ ನದಿಯನ್ನು ದಾಟಿ ಅವರು ಆ ದೃಶ್ಯವನ್ನು ಕಂಡ ಸ್ಥಳವನ್ನು ಸಮೀಕ್ಷೆ ಮಾಡಿದಾಗ ಅವರು ಒಂದು ತುಳಸಿ ಪೊದೆ ಬೆಳೆಯುತ್ತಿರುವ ದಿಬ್ಬವನ್ನು ಕಂಡರು. ಆ ಸ್ಥಳವನ್ನು ಮಾಯಾಪುರವೆಂದು ಕರೆಯುತ್ತಿದ್ದರು ಮತ್ತು ಅಲ್ಲಿನ ನಿವಾಸಿಗಳು ಅದು ಸ್ವತಃ ಶ್ರೀ ಚೈತನ್ಯರ ಜನ್ಮಸ್ಥಳವೆಂದು ಹೇಳಿದರು. ಈ ದರ್ಶನದ ನಂತರ ಭಕ್ತಿವಿನೋದರು ದಿನದ ಪ್ರತಿಯೊಂದು ಕ್ಷಣವನ್ನು ಆ ಸ್ಥಳದ ಹಳೆಯ ನಕ್ಷೆಗಳನ್ನು ಅಧ್ಯಯನ ಮಾಡುತ್ತ ಶ್ರೀ ಚೈತನ್ಯದೇವರ ಜನ್ಮಸ್ಥಳ ಕುರಿತು ಹೆಚ್ಚು ಮಾಹಿತಿಯನ್ನು ಕಂಡುಕೊಳ್ಳಲು ಹಳೆಯ ಶಾಸ್ತ್ರಗಳು ಮತ್ತು ಹಸ್ತಪ್ರತಿಗಳನ್ನೂ ಅಧ್ಯಯನ ಮಾಡಿದರು. ಅನೇಕ ತಿಂಗಳುಗಳ ತೀವ್ರ ಸಂಶೋಧನೆ ಮತ್ತು ಅಧ್ಯಯನದ ನಂತರ ನಿಶ್ಚಯವಾಗಿಯೂ ಇದೇ ಶ್ರೀ ಚೈತನ್ಯ ಮಹಾಪ್ರಭುಗಳ ಜನ್ಮಸ್ಥಳವೆಂದು ನಿರ್ಣಯಿಸಿದರು. ತಮ್ಮ ಸಂಶೋಧನೆಗಳನ್ನು ದೃಢಪಡಿಸಲು ಭಕ್ತಿವಿನೋದರು ಗೌರವಾನ್ವಿತ ವೈಷ್ಣವ ಸಂತರಾದ ಜಗನ್ನಾಥ ದಾಸ ಬಾಬಾಜಿಯವರನ್ನು ಆ ಸ್ಥಳಕ್ಕೆ ಬರಲು ಕೋರಿದರು. ಆ ಸಮಯದಲ್ಲಿ ಜಗನ್ನಾಥ ದಾಸ ಬಾಬಾಜಿಯವರಿಗೆ ಸುಮಾರು ೧೨೦ ವರುಷ ವಯಸ್ಸಾಗಿತ್ತು ಮತ್ತು ತಮಗೆ ವಯಸ್ಸಾದ ಕಾರಣ ಅವರನ್ನು ಒಂದು ಬುಟ್ಟಿಯಲ್ಲಿ ಒಬ್ಬ ಸೇವಕನ ನೆರವಿನಿಂದ ಕರೆತರಬೇಕಾಗಿತ್ತು. ಜಗನ್ನಾಥ ದಾಸರು ಭಕ್ತಿವಿನೋದರು ಕಂಡುಹಿಡಿದ ಸ್ಥಳಕ್ಕೆ ಬಂದ ಕೂಡಲೇ ಬುಟ್ಟಿಯಿಂದ ಜಿಗಿದು ಆನಂದದಿಂದ ಕುಣಿಯುತ್ತ, "ಇದೇ! ಇದೇ ಮಹಾಪ್ರಭುಗಳ ಜನ್ಮಸ್ಥಳ" ಎಂದು ಗಟ್ಟಿಯಾಗಿ ಕೂಗತೊಡಗಿರು.

ನವದ್ವೀಪದಲ್ಲಿನ ಜಲಾಂಗಿ ನದಿಯಿಂದಾಚೆ, ಜಾತಿ ಬ್ರಾಹ್ಮಣರು ಮತ್ತು ಜಾತಿ ಗೋಸ್ವಾಮಿಗಳು ಭಕ್ತಿವಿನೋದರ ಮೇಲೆ ಅತೀವ ನಿರಾಶೆಗೊಂಡರು. ಅವರು ನವದ್ವೀಪದಲ್ಲಿ ಶ್ರೀ ಚೈತನ್ಯರ ತಮ್ಮದೇ ಆದ ಜನ್ಮಸ್ಥಳವನ್ನು ಸೃಷ್ಟಿಸಿದ್ದರು ಮತ್ತು ಈಗ ಭಕ್ತಿವಿನೋದರ ಹೊಸ ಶೋಧನೆಯು ಮುಗ್ಧ ಯಾತ್ರಿಗಳಿಂದ ಹಣ ಸಂಪಾದಿಸುವ ಅವರ ಲಾಭಕರ ವ್ಯವಹಾರವನ್ನು ನಾಶಪಡಿಸಿತು.

ಭಕ್ತಿವಿನೋದರಿಗೆ ಕಿರುಕುಳವನ್ನು ಕೊಡಲು ಪ್ರಯತ್ನಿಸಿ ವಿಫಲವಾದರು. ನಿಧಾನವಾಗಿಯಾದರೂ ಸುಳ್ಳಾಗಿ ಸೃಷ್ಟಿಸಿದ ಜನ್ಮಸ್ಥಳದ ಜನಪ್ರಿಯತೆ ಕ್ಷೀಣವಾಗಿ ಮಾಯಾಪುರವು ಶ್ರೀ ಚೈತನ್ಯದೇವರ ನಿಜವಾದ ಜನ್ಮಸ್ಥಳವೆಂದು ಎಲ್ಲರಿಂದಲೂ ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು.

ಕೃಷ್ಣನ ದಿವ್ಯ ನಾಮಗಳನ್ನು ಹಾಡುತ್ತ ಮತ್ತು ಜನರಿಗೆ ಶ್ರೀ ಚೈತನ್ಯರ ಧರ್ಮ ಪ್ರಚಾರ ಕಾರ್ಯವನ್ನು ಸ್ವೀಕರಿಸಲು ಉತ್ತೇಜಿಸುವ ಪ್ರವಚನಗಳನ್ನು ನೀಡುತ್ತ ಭಕ್ತಿವಿನೋದರ ಅನುಯಾಯಿಗಳು ಕೆಲವು ಸಲ ಹಳ್ಳಿಯಿಂದ ಹಳ್ಳಿಗೆ ಮತ್ತು ನಗರದಿಂದ ನಗರಕ್ಕೆ ಸಂಚರಿಸುತ್ತಿದ್ದರು. ಭಕ್ತಿವಿನೋದರು ಭಕ್ತಿಯ ಪ್ರಕ್ರಿಯೆಯನ್ನು ವಿವರಿಸುತ್ತ ಶ್ರೀ ಚೈತನ್ಯ ಮತ್ತು ಶ್ರೀ ಶ್ರೀ ರಾಧಾ–ಕೃಷ್ಣರನ್ನು ಗುಣಗಾನ ಮಾಡುವಂತಹ ನೂರಾರು ಹಾಡುಗಳನ್ನು ಬರೆದರು.

ಭಕ್ತಿವಿನೋದರು ಸುಮಾರು ೭೬ ಪುಸ್ತಕಗಳನ್ನು ಬರೆದರು ಮತ್ತು ಭಕ್ತಿಯ ತತ್ತ್ವವನ್ನು ವಿವರಿಸುವ ನೂರಾರು ಲೇಖನಗಳನ್ನು ಬರೆದರು. ಅವರು ಬಂಗಾಲಿ, ಸಂಸ್ಕೃತ, ಹಿಂದಿ, ಒರಿಯಾ, ಆಂಗ್ಲ, ಅರಬ್ಬೀ, ಪಾರ್ಸಿ ಮತ್ತು ಉರ್ದು ಭಾಷೆಗಳಲ್ಲಿ ಪರಿಣಿತರಾಗಿದ್ದರು.

೧೯೦೮ರಲ್ಲಿ ಭಕ್ತಿವಿನೋದರು ವೈರಾಗ್ಯದ ಜೀವನವನ್ನು ಸ್ವೀಕರಿಸಿ ನಿರಂತರವಾಗಿ ಹರಿನಾಮ ಜಪವನ್ನು ಮಾಡುತ್ತಾ ಭಕ್ರಿಮಾರ್ಗದ ತೀವ್ರ ಸಾಧನೆಯಲ್ಲಿ ನಿರತರಾಗಿ ಏಕಾಂತದ ಜೀವನವನ್ನು ನಡೆಸಿದರು. ೧೯೧೪ರ ಜೂನ್ ತಿಂಗಳ ೨೩ನೇ ತಾರೀಕು ಅಮಾವಾಸ್ಯೆಯ ದಿನದಂದು ಭಕ್ತಿವಿನೋದ ಠಾಕೂರರು ಭಗವಂತನ ನಿತ್ಯ ಲೀಲೆಯಲ್ಲಿ ಅವನ ಜೊತೆಗೂಡಲು ಇಹಲೋಕವನ್ನು ತ್ಯಜಿಸಿದರು.

ಹೇಗಿದ್ದರೂ, ಅವರ ದಿವ್ಯ ಸಂಕಲ್ಪವನ್ನು, ಅವರ ಸುಪುತ್ರರಾದ ಶ್ರೀಮದ್ ಭಕ್ತಿಸಿದ್ಧಾಂತ ಸರಸ್ವತಿ ಠಾಕೂರ ಪ್ರಭುಪಾದರು, ಶ್ರೀ ಚೈತನ್ಯ ಮಹಾಪ್ರಭುಗಳ ಬೋಧನೆಗಳನ್ನು ಭಾರತಾದ್ಯಂತ ಪ್ರಚಾರ ಮಾಡುತ್ತ ವೈಷ್ಣವ ಧರ್ಮವನ್ನು ಪ್ರಪಂಚಾದ್ಯಂತ ಪ್ರಚಾರ ಮಾಡಲು ತಮ್ಮ ಶಿಷ್ಯರುಗಳನ್ನು ಉತ್ತೇಜಿಸುವ ಮೂಲಕ ಯಶಸ್ವಿಯಾಗಿ ಮುಂದುವರೆಸಿಕೊಂಡು ಬಂದರು.

# ಪ್ರಸ್ತಾವನೆ

ನಮ್ಮ ಗುರುಗಳಾದ, ಓಂ ವಿಷ್ಣುಪಾದ ಪರಮಹಂಸ ಶ್ರೀ ಶ್ರೀಮದ್ ಭಕ್ತಿ ಗೌರವ ನರಸಿಂಘ ಮಹಾರಾಜರ ಹಾಗೂ ನಮ್ಮ ಸಂಪ್ರದಾಯದ ಪೂರ್ವಾಚಾರ್ಯರುಗಳ ಕೃಪೆಯಿಂದ, ಗೋಸಾಯಿ ಪ್ರಕಾಶನವು ಆಧ್ಯಾತ್ಮಿಕ ತತ್ತ್ವದಲ್ಲಿ ನಿಷ್ಠೆಯುಳ್ಳ ಪರಾತ್ಪರ ಸತ್ಯದ ಅನ್ವೇಷಕರ ಪ್ರಯೋಜನಕ್ಕಾಗಿ ಮೊಟ್ಟಮೊದಲ ಬಾರಿಗೆ "ಶ್ರೀಚೈತನ್ಯ ಮಹಾಪ್ರಭು–ಹಿಸ್ ಲೈಫ್ ಅಂಡ್ ಪ್ರೆಸೆಪ್ಟ್ಸ್" ಎಂಬ ಪುಸ್ತಕವನ್ನು ಕನ್ನಡದಲ್ಲಿ ಮುದ್ರಿಸಿದೆ.

ಮೂಲತಃ ೧೮೯೬ರಲ್ಲಿ ಶ್ರೀಲ ಭಕ್ತಿವಿನೋದ ಠಾಕೂರರಿಂದ ಬರೆಯಲ್ಪಟ್ಟ ಈ ಪುಸ್ತಕವು ಸಂಕ್ಷಿಪ್ತವಾಗಿ ಶ್ರೀ ಚೈತನ್ಯದೇವರ ಜೀವನಚರಿತ್ರೆಯನ್ನಲ್ಲದೇ ಅಚಿಂತ್ಯ ಭೇದಾಭೇದ ಸಿದ್ಧಾಂತವೆಂದು ಕರೆಯಲ್ಪಡುವ ಅವರ ಪ್ರಮುಖ ಬೋಧನೆಗಳ ಸಮಗ್ರ ಸಾರಾಂಶವನ್ನು ಕೂಡಾ ಒಳಗೊಂಡಿದೆ.

ಕೆಲವರು ಶ್ರೀ ಚೈತನ್ಯರನ್ನು ಅವರು ಒಬ್ಬ ಸಂತಅಷ್ಟೇ ಎಂದು ಅಭಿಪ್ರಾಯ ಪಟ್ಟಿದ್ದಾರೆ, ಇನ್ನಿತರರು ಅವರನ್ನು ಒಬ್ಬ ಸಾಮಾಜ ಸುಧಾರಕನೆಂದು ಸಾರಿದರೆ ಮತ್ತೆ ಕೆಲವರು ಅವರನ್ನು ಕೃಷ್ಣನ ಪರಮ ಭಕ್ತನೆಂದು ಹೇಳುತ್ತಾರೆ. ಈ ಅಭಿಪ್ರಾಯಗಳಲ್ಲಿ ಸ್ವಲ್ಪಮಟ್ಟಿನ ಸತ್ಯಾಂಶವಿದ್ದರೂ ಅಂತಿಮವಾಗಿ ಈ ಎಲ್ಲ ಹೇಳಿಕೆಗಳು ತಪ್ಪು ಮತ್ತು ದಾರಿ ತಪ್ಪಿಸುವಂತಹದಾಗಿರುತ್ತವೆ. ಶಾಸ್ತ್ರಗಳ ಪ್ರಕಾರ ಶ್ರೀ ಚೈತನ್ಯ ಮಹಾಪ್ರಭುಗಳು ಕೇವಲ ಒಬ್ಬ ಸಂತನಾಗಲೀ, ಒಬ್ಬ ಸಮಾಜ ಸುಧಾರಕನಾಗಲೀ ಅಥವಾ ಒಬ್ಬ ಭಕ್ತ ಮಾತ್ರವಲ್ಲದೇ, ಮಹಾಪ್ರಭುಗಳು ಚನ್ನಾವತಾರ ಅಥವಾ ಕಲಿ ಯುಗದಲ್ಲಿ ಪ್ರಕಟನಾದ ಶ್ರೀ ಕೃಷ್ಣನ ಗುಪ್ತ ಅವತಾರ ಎಂದು ಹೇಳಲಾಗಿದೆ.

ದುರದೃಷ್ಟವಶಾತ್, ಧನ, ಸ್ತ್ರೀ, ಪ್ರತಿಷ್ಠೆ ಹಾಗೂ ಅನುಯಾಯಿಗಳನ್ನು ಹೊಂದುವ ಸಲುವಾಗಿ ತಾವು ಭಗವಂತನ ಅವತಾರ ಎಂದು ಹೇಳಿಕೊಂಡು ಸಾಮಾನ್ಯ ಜನರನ್ನು ಮೋಸಗೊಳಿಸುತ್ತಾ ಅಧಿಕಾರ ಚಲಾಯಿಸುತ್ತಿರುವ ಅನೇಕ ವಂಚಕರಿಂದ ಕೂಡಿದ ಅತಿಯಾದ ಅಂಧಕಾರದಿಂದ ಆವೃತವಾದ ಕಾಲದಲ್ಲಿ ಜೀವಿಸುತ್ತಿದ್ದೇವೆ. ಚೈತನ್ಯ ಮಹಾಪ್ರಭುಗಳು ಸ್ವಯಂ ಶ್ರೀ ಕೃಷ್ಣನೇ ಆಗಿರುವರೆಂಬ ನಂಬಿಕೆ ಒಂದು ಸ್ವನಿರ್ಮಿತ ಕುಚೇಷ್ಠೆಯಲ್ಲ ಅಥವಾ ತಾವು ಆರಾಧಿಸುವುದಕ್ಕೋಸ್ಕರ ಶಾಸ್ತ್ರಗಳನ್ನು ತಪ್ಪಾಗಿ ವ್ಯಾಖ್ಯಾನಿಸುವ ಮೂಲಕ ಕೆಲವು ಧರ್ಮಾಂಧಭಾವುಕರ ಕಲ್ಪನೆಯ ಸೃಷ್ಟಿಯೂ ಅಲ್ಲ. ಮಹಾಪ್ರಭುಗಳ ದೈವತ್ತ್ವವನ್ನು ಬೆಂಬಲಿಸುವ ಅನೇಕ ಶಾಸ್ತ್ರೀಯ ಅಧಾರಗಳಿವೆ. ಶ್ರೀಮದ್ ಭಾಗವತ, ಮಹಾಭಾರತ, ವಾಯು

ಪುರಾಣ, ಭವಿಷ್ಯ ಪುರಾಣ ಮತ್ತು ಇನ್ನಿತರ ಶಾಸ್ತ್ರಗಳಲ್ಲಿ ಇದನ್ನು ಸಿದ್ಧಪಡಿಸುವ ಪುರಾವೆಗಳನ್ನು ಕಾಣಬಹುದು. ಸ್ವತಃ ಮಹಾಪ್ರಭುಗಳು ಇದ್ದ ಕಾಲದಲ್ಲೇ, ಶಂಕರ ಪರಂಪರೆಯ ಪ್ರಸಿದ್ಧ ಸನ್ಯಾಸಿಯಾದ ಕಾಶಿಯ ಪ್ರಕಾಶಾನಂದ ಸರಸ್ವತಿ, ಪ್ರಸಿದ್ಧ ನ್ಯಾಯಿಕ ಮತ್ತು "ಅನುಮಾನ–ಮಣಿ ಪರೀಕ್ಷಾ" ಕರ್ತೃವಾದ ವಾಸುದೇವ ಸಾರ್ವಭೌಮ ಭಟ್ಟಾಚಾರ್ಯ ಕೂಡಾ, ಒರಿಸ್ಸಾದ ರಾಜಾಸ್ಥಾನ ಪಂಡಿತನಾದ ಕಾಶಿ ಮಿಶ್ರರಂತಹ ಅನೇಕ ಶ್ರೇಷ್ಠ ವಿದ್ವಾಂಸರು ಮಹಾಪ್ರಭುಗಳನ್ನು ಭಗವಂತನಾದ ಗೋಪಾಲ ಕೃಷ್ಣನ ದಿವ್ಯ ಅವತಾರವೆಂದು ಒಪ್ಪಿಕೊಂಡಿದ್ದರು. ಮಹಾಪ್ರಭುಗಳ ಅನುಯಾಯಿಗಳಲ್ಲಿ ಪ್ರಸಿದ್ಧ ವಿದ್ವಾಂಸರುಗಳಲ್ಲದೆ ಶ್ರೇಷ್ಠ ವ್ಯಕ್ತಿಗಳಾದ ಒರಿಸ್ಸಾದ ರಾಜನಾದ ಮಹಾರಾಜ ಪ್ರತಾಪರುದ್ರ, ಬಂಗಾಲದ ನವಾಬ್ ಹುಸೇನ ಶಾಹನ ಪ್ರಧಾನ ಮಂತ್ರಿ ಮತ್ತು ಹಣಕಾಸು ಮಂತ್ರಿಗಳು(ಮುಂದೆ ಅವರ ಮುಖ್ಯ ಅನುಯಾಯಿಗಳಾದ ರೂಪ ಗೋಸ್ವಾಮಿ ಮತ್ತು ಸನಾತನ ಗೋಸ್ವಾಮಿ) ಕೂಡಾ ಒಬ್ಬರಾಗಿದ್ದರು. ಪ್ರತ್ಯೇಕವಾಗಿ ಹೇಳುವುದಾದರೆ ಮಹಾಪ್ರಭುಗಳ ದೈವತ್ವವು ಅಜ್ಞಾನಿಗಳ ಸಮುದಾಯದ ಒಂದು ಸಾಮಾನ್ಯ ಸೃಷ್ಟಿಯಾಗಿರಲಿಲ್ಲ.

ಕಲಿಯುಗದಲ್ಲಿ ಚೈತನ್ಯ ಮಹಾಪ್ರಭುಗಳ ಅವತಾರದಲ್ಲಿ ಯುಗ ಧರ್ಮವಾದ ಸಂಕೀರ್ತನ ಆಂದೋಳನವನ್ನು ಪ್ರಚಾರಮಾಡುವುದು ಶ್ರೀ ಕೃಷ್ಣನ ಉದ್ದೇಶಗಳಲ್ಲಿ ಒಂದಾಗಿತ್ತು. ಸಂಬಂಧ, ಅಭಿಧೇಯ ಮತ್ತು ಪ್ರಯೋಜನಗಳೆಂಬ ಮೂರು ತತ್ತ್ವಗಳನ್ನು (ಈಶ್ವರನೊಂದಿಗೆ ನಮ್ಮ ಸಂಬಂಧದ ಜ್ಞಾನ, ಆ ಸಂಬಂಧವನ್ನು ಸಾಧಿಸುವ ಜ್ಞಾನ ಮತ್ತು ಜೀವನದ ಅಂತಿಮ ಗುರಿಯ ಜ್ಞಾನ) ಈ ಪ್ರಪಂಚದ ಬದ್ಧಾತ್ಮಗಳಿಗೆ ಬೋಧಿಸಲೆಂದೇ ಮಹಾಪ್ರಭು ತಮ್ಮ ಆಚಾರ್ಯಲೀಲೆಯನ್ನು ಪ್ರದರ್ಶಿಸಿದರು. ಶ್ರೀ ಕೃಷ್ಣನನ್ನು ಆರಾಧಿಸುವ ಬಗೆ, ವೈಷ್ಣವರನ್ನು ಸೇವಿಸುವ ಮತ್ತು ಅವರೊಂದಿಗೆ ಸಂಘ ಮಾಡುವ ಬಗೆ, ಮತ್ತು ಹರಿ ನಾಮ ಸಂಕೀರ್ತನೆಯ ಮೂಲಕ ಪರಿಪೂರ್ಣತೆಯನ್ನು ಪಡೆಯುವ ಬಗೆಯನ್ನು ಮಹಾಪ್ರಭುಗಳು ತಮ್ಮ ಅನುಯಾಯಿಗಳಿಗೆ ಬೋಧಿಸಿದರು.

ಕಲಿಯುಗದಲ್ಲಿ ಆಧ್ಯಾತ್ಮಿಕ ಪರಿಪೂರ್ಣತೆಯನ್ನು ಪಡೆಯಲು ಹರಿ ನಾಮ ಸಂಕೀರ್ತನೆಯೊಂದೇ ಯುಕ್ತ ಮಾರ್ಗವಾಗಿರುವುದು. ಪೂರ್ವದಲ್ಲಿ, ಇನ್ನಿತರ ಯುಗಗಳಲ್ಲಿ ಸಾಧನೆಯ ಇನ್ನಿತರ ಪ್ರಕ್ರಿಯೆಗಳು ಪ್ರಚಲಿತವಾಗಿದ್ದವು. ಇದನ್ನು ಶ್ರೀಮದ್ ಭಾಗವತದ ೧೨ನೆಯ ಸ್ಕಂಧದಲ್ಲಿ ವಿವರಿಸಲಾಗಿದೆ:

ಕೃತೇಯರ್ದ್ ಧ್ಯಾಯತೊ ವಿಷ್ಣುಮ್
ತ್ರೇತಾಯಮ್ ಯಜತೊ ಮಖೈಃ
ದ್ವಾಪರೆ ಪರಿಚರ್ಯಾಯಾಮ್
ಕಲೌ ತದ್ ಹರಿ–ಕೀರ್ತನಾತ್

"ಕೃತ ಯುಗದಲ್ಲಿ ಧ್ಯಾನದ ಮೂಲಕ, ತ್ರೇತಾ ಯುಗದಲ್ಲಿ ಯಜ್ಞ ಯಾಗಾದಿಗಳ ಮೂಲಕ ಮತ್ತು ದ್ವಾಪರ ಯುಗದಲ್ಲಿ ಮೂರ್ತಿ ಪೂಜೆಯ ಮೂಲಕ ಏನನ್ನು ಸಾಧಿಸಿರುವರೊ ಅದನ್ನು

ಕಲಿಯುಗದಲ್ಲಿ ಕೇವಲ ಹರಿ ನಾಮ ಸಂಕೀರ್ತನೆಯ ಮೂಲಕ ಸಾಧಿಸಬಹುದು.'' (ಶ್ರೀಮದ್ ಭಾಗವತಮ್ ೧೨.೩.೫೨)

ಕಲಿ ಯುಗದಲ್ಲಿ ಹರಿ ನಾಮ ಸಂಕೀರ್ತನೆಗೆ ಸಮನಾದ ಆಧ್ಯಾತ್ಮಿಕ ಪ್ರಕ್ರಿಯೆ ಇನ್ಯಾವುದಿಲ್ಲವೆಂದು ಮಹಾಪ್ರಭುಗಳು ಬೋಧಿಸಿರುವರು. ಎಷ್ಟೋ ಹೋಮಗಳು, ಪೂಜೆಗಳು, ತಪಸ್ಸು, ದಾನ ಇತ್ಯಾದಿಗಳನ್ನು ಕೈಗೊಂಡರೂ ಶ್ರೀ ಕೃಷ್ಣನ ನಾಮಗಳ ಸಂಕೀರ್ತನೆಗೆ ಹೋಲಿಸಲಾಗುವುದಿಲ್ಲ.

ಹರೇರ್ ನಾಮ ಹರೇರ್ ನಾಮ
ಹರೇರ್ ನಾಮೈವ ಕೇವಲಮ್
ಕಲೌ ನಾಸ್ತ್ಯೇವ ನಾಸ್ತ್ಯೇವ
ನಾಸ್ತ್ಯೇವ ಗತಿರನ್ಯಥಾ

''ಕಲಹ ಮತ್ತು ಕಪಟದ ಈ ಯುಗದಲ್ಲಿ ಹರಿಯ ಪವಿತ್ರ ನಾಮ ಸಂಕೀರ್ತನೆಯೊಂದೇ ಉದ್ಧಾರದ ಮಾರ್ಗ. ಬೇರೆ ಮಾರ್ಗವೇ ಇಲ್ಲ. ಬೇರೆ ಮಾರ್ಗವೇ ಇಲ್ಲ. ಬೇರೆ ಮಾರ್ಗವೇ ಇಲ್ಲ.''(ಬೃಹನ್ನಾರದೀಯ ಪುರಾಣ)

ಮಾನವ ಕುಲಕ್ಕೆ ಶ್ರೀ ಚೈತನ್ಯದೇವರ ಸಂದೇಶ ಉದಾತ್ತವಾಗಿಯೂ ಮತ್ತು ಅನುಸರಿಸಲು ಸರಳವಾಗಿಯೂ ಇರುವುದು. ಇದನ್ನು ಅರಿಯಲು ಒಬ್ಬ ವೇದ, ಉಪನಿಷತ್ತು ಮತ್ತು ಧರ್ಮ ಶಾಸ್ತ್ರಗಳಲ್ಲಿ ನುರಿತ ಪಂಡಿತನಾಗಿರಬೇಕಾದ ಅವಶ್ಯಕತೆಯೇನೂ ಇಲ್ಲ. ಸಂಸ್ಕೃತ ವಿದ್ವಾಂಸ ಅಥವಾ ನ್ಯಾಯ ಮತ್ತು ತರ್ಕಗಳಲ್ಲಿ ಪ್ರವೀಣನಾಗಿರಬೇಕಾದ ಅವಶ್ಯಕತೆಯೂ ಇಲ್ಲ. ಹಾಗೆಂದು, ಸರಳವಾದ ಪ್ರಕ್ರಿಯೆ ಎಂದ ಮಾತ್ರಕ್ಕೆ ಮಹಾಪ್ರಭುಗಳ ಈ ಸಂದೇಶವು ಕೇವಲ ಮೂರ್ಖರಿಗೆ, ಅಲ್ಪಬುದ್ಧಿಯವರಿಗೆ, ಅನಕ್ಷರಸ್ಥರಿಗೆ, ಸಮಾಜದ ಕೆಳ ಜಾತಿವರ್ಗದವರಿಗೆ ಅಥವಾ ವೈದಿಕ ಶಾಸ್ತ್ರಕ್ಕೆ ನೇರವಾದ ಪ್ರವೇಶವಿಲ್ಲದ ವಿದೇಶಿಯರಿಗೆ ಎಂದು ಒಬ್ಬ ಯೋಚಿಸಲು ಮುಂದಾಗಬಾರದು. ಇದು ಎಲ್ಲ ವರ್ಗದ ಜನರುಗಳಿಗೆ, ಎಲ್ಲ ಸಾಮಾಜಿಕ ವ್ಯವಸ್ಥೆಗಳ ಮತ್ತು ಎಲ್ಲ ಜಾತಿ ಮತ್ತು ರಾಷ್ಟ್ರೀಯತೆಗಳಿಗೆ ಅನ್ವಯಿಸುತ್ತದೆ. ಶ್ರೀ ಚೈತನ್ಯ ಮಹಾಪ್ರಭುಗಳು ಬೋಧಿಸಿದ ಹಾಗೆ ಹರಿಯ ದಿವ್ಯ ನಾಮದ ಸ್ಮರಣೆ ಎಲ್ಲ ವೇದಗಳ, ಉಪನಿಷತ್ತುಗಳ, ಇತಿಹಾಸ ಮತ್ತು ವೇದಾಂತದ ಸಾರವಾಗಿದೆ.

ಸ್ಮರ್ತವ್ಯಃ ಸತತಂ ವಿಷ್ಣುರ್
ವಿಸ್ಮರ್ತವ್ಯೋ ನ ಜಾತುಚಿತ್
ಸರ್ವೇ ವಿಧಿ ನಿಷೇಧಃಸ್ಯುರ್
ಎತಯೋರೇವ ಕಿಂಕರಃ

> “ವಿಷ್ಣುವನ್ನು ಸದಾ ಸ್ಮರಿಸಬೇಕು ಮತ್ತು ಎಂದೆಂದಿಗೂ ಮರೆಯಬಾರದು. ಶಾಸ್ತ್ರಗಳಲ್ಲಿ ಹೇಳಿರುವ ಎಲ್ಲ ನಿಯಮಗಳು ಮತ್ತು ನಿಷೇಧಗಳು ಈ ಎರಡು ತತ್ತ್ವಗಳಿಗೆ ಅಡಿಯಾಳುಗಳಾಗಿರಬೇಕು”. (ಪದ್ಮ ಪುರಾಣ)

“ಶ್ರೀ ಚೈತನ್ಯ ಮಹಾಪ್ರಭು–ಅವರ ಜೀವನ ಮತ್ತು ಬೋಧನೆಗಳು” ಈ ಪುಸ್ತಕದ ಕರ್ತೃಗಳಾದ ಶ್ರೀಮದ್ ಭಕ್ತಿವಿನೋದ ಠಾಕೂರರನ್ನು ಶ್ರೀ ಶ್ರೀ ರಾಧಾ–ಗೋವಿಂದರ ಆತ್ಮೀಯ ಸಂಗಾತಿಯಾಗಿ ಗುರುತಿಸಲಾಗಿದೆ. ಭಕ್ತಿವಿನೋದ ಠಾಕೂರರು ಈ ಪುಸ್ತಕವನ್ನು ೧೮೯೬ರಲ್ಲಿ ಬರೆದರು ಮತ್ತು ಅಂದಿನ ಪಾಶ್ಚಾತ್ಯ ಜಗತ್ತಿನ ಅನೇಕ ವಿಶ್ವವಿದ್ಯಾಲಯಗಳ ವಿದ್ವಾಂಸರನ್ನು ಮಹಾಪ್ರಭುಗಳ ಸಂದೇಶಗಳಿಗೆ ಪರಿಚಯಿಸುವ ಉದ್ದೇಶದಿಂದ ಇದರ ಪ್ರತಿಗಳನ್ನು ಹೊರದೇಶಗಳಿಗೆ ಕಳುಹಿಸಿದರು. ಶ್ರೀ ಚೈತನ್ಯದೇವರ ಆಂದೋಳನವು ಮುಂದೆ ಪ್ರಪಂಚದ ಮೂಲೆಮೂಲೆಗೂ ಹರಡುವುದೆಂದು ಭವಿಷ್ಯ ನುಡಿಯುತ್ತ ೧೮೮೫ ರಲ್ಲಿ ಹೀಗೆಂದು ಬರೆದರು:

> “ಓಹ್! ಆಂಗ್ಲರು, ಫ್ರೆಂಚರು, ರಷ್ಯನ್ನರು, ಜರ್ಮನರು ಮತ್ತು ಅಮೇರಿಕನರು ಬಾವುಟ, ಮೃದಂಗ ಮತ್ತು ಕರತಾಳಗಳನ್ನು ಹಿಡಿದು ತಮ್ಮ ನಗರದ ಬೀದಿಗಳಲ್ಲಿ ಸಂಕೀರ್ತನೆ ಮಾಡುವ ಆ ಸುದಿನ ಯಾವಾಗ ಬಂದೀತು! ಆ ದಿನ ಎಂದು ಬರುತ್ತದೆ? ಓಹ್! ಯಾವಾಗ ಬಿಳಿತೊಗಲಿನ ಜನರು “ಜಯ ಶಚಿನಂದನ, ಜಯ ಶಚಿನಂದನ ಕಿ ಜಯ್!” (ಶಚಿ ಮಾತೆಯ ಮಗನಾದ ಶ್ರೀ ಚೈತನ್ಯರಿಗೆ ಜಯವಾಗಲಿ) ಎಂದು ತಮ್ಮ ಕಡೆಯಿಂದ ಸಂಕೀರ್ತನೆ ಮಾಡುತ್ತ ಭಾರತೀಯ ಭಕ್ತರೊಂದಿಗೆ ಜೊತೆಗೂಡುವರು?. ಆ ದಿನ ಯಾವಾಗ ಬರಬಹುದು? ಆ ದಿವ್ಯ ಹರ್ಷೋನ್ಮಾದದ ದಿನವು ವೈಷ್ಣವ ಧರ್ಮವು ಜಗತ್ತಿನ ಏಕೈಕ ಪವಿತ್ರ ಧರ್ಮವೆನ್ನುವುದಕ್ಕೆ ಸಾಕ್ಷಿಯಾಗುತ್ತದೆ, ಮತ್ತು ಎಲ್ಲ ಇತರ ಮತಗಳು ಮತ್ತು ಧರ್ಮಗಳು ವೈಷ್ಣವ ಧರ್ಮದ ಸಾಗರಕ್ಕೆ ನದಿಗಳಾಗಿ ಹರಿಯುತ್ತವೆ”.

ವರ್ತಮಾನದಲ್ಲಿ ಶ್ರೀ ಭಕ್ತಿವಿನೋದ ಠಾಕೂರರ ಉಪದೇಶಗಳನ್ನು ಅನುಸರಿಸಿದ ಶ್ರೀ ಭಕ್ತಿವೇದಾಂತ ಸ್ವಾಮಿ ಪ್ರಭುಪಾದ, ಶ್ರೀ ಭಕ್ತಿರಕ್ಷಕ ಶ್ರೀಧರ ದೇವ ಗೋಸ್ವಾಮಿ ಮಹಾರಾಜ, ಶ್ರೀ ಭಕ್ತಿ ಪ್ರಮೋದ ಪುರಿ ಗೋಸ್ವಾಮಿ ಮಹಾರಾಜ ಮತ್ತು ಅವರ ಪ್ರಾಮಾಣಿಕ ಅನುಯಾಯಿಗಳ ಅವಿಶ್ರಾಂತ ಪ್ರಚಾರ ಕಾರ್ಯದಿಂದ ಈ ಭವಿಷ್ಯವಾಣಿಯು ನಿಜವಾಗಿ ಮುಂದುವರೆಯುತ್ತಿರುವುದನ್ನು ನೋಡುತ್ತಿದ್ದೇವೆ. ವಿದೇಶಿಯರು ಶ್ರೀ ಕೃಷ್ಣ ನಾಮವನ್ನು ಜಪಿಸುವರೆಂದು ಮತ್ತು ವೈಷ್ಣವ ಧರ್ಮವನ್ನು ಪೂರ್ಣವಾಗಿ ಅಳವಡಿಸಿಕೊಳ್ಳುವರೆಂಬುದನ್ನು ಭಕ್ತಿವಿನೋದರ ಕಾಲದಲ್ಲಿ ಊಹಿಸುವುದೂ ಅಸಾಧ್ಯವಾಗಿತ್ತು.

ಶ್ರೀ ಗುರುದೇವರು ಮತ್ತು ನಮ್ಮ ವೈಷ್ಣವ ಸಂಗದ ಪರವಾಗಿ, ಈ ಪುಸ್ತಕದ ಪ್ರಕಟಣೆಗೆ ಶ್ರಮಿಸಿದ ಎಲ್ಲ ಭಕ್ತರಿಗೆ, ವಿಶೇಷವಾಗಿ, ಮೊದಲಿಗೆ ಈ ಪುಸ್ತಕವನ್ನು ಆಂಗ್ಲ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದ ಶ್ರೀಮಾನ್ ಶ್ಯಾಮಸುಂದರದಾಸ ಬ್ರಹ್ಮಚಾರಿ, ತಿದ್ದುಪಡಿ ಮಾಡಿ

ಪ್ರಕಟಣೆಗೆ ಸಿದ್ಧಪಡಿಸಲು ಸಹಾಯ ಮಾಡಿದ ಶ್ರೀಮಾನ್ ಚೈತನ್ಯ ದಾಸ ಅಧಿಕಾರಿ ಮತ್ತು ಪುಸ್ತಕದ ಮುಖಪುಟ ವಿನ್ಯಾಸವನ್ನು ತಯಾರಿಸಿ ಒಳಪುಟಗಳ ಜೋಡಣೆಗೆ ಸಹಾಯ ಮಾಡಿದ ಶ್ರೀಮಾನ್ ರಸಿಕಾನಂದ ದಾಸ ಬ್ರಹ್ಮಚಾರಿ ಇವರುಗಳಿಗೆ ಕೃತಜ್ಞತೆ ಸಲ್ಲಿಸಲು ಬಯಸುತ್ತೇವೆ. ಇವರೆಲ್ಲರಿಗೂ ತಮ್ಮ ಆಶೀರ್ವಾದಗಳನ್ನು ದಯಪಾಲಿಸಲು ನಮ್ಮ ಪೂಜನೀಯ ಮೂರ್ತಿಗಳಾದ ಶ್ರೀ ಶ್ರೀ ರಾಧಾ ಮಾಧವ, ಶ್ರೀ ಚೈತನ್ಯ ಮಹಾಪ್ರಭು ಮತ್ತು ಶ್ರೀ ಭಕ್ತಿವಿನೋದ ಠಾಕೂರರಲ್ಲಿ ನಮ್ರತೆಯಿಂದ ಬೇಡುತ್ತೇವೆ.

ಹರಿ ಗುರು ವೈಷ್ಣವ ಕಿಂಕರಾಭಾಸಃ
ಸ್ವಾಮಿ ಭಕ್ತಿ ವಿಜ್ಞಾನ ಗಿರಿ

(ಶ್ರೀಲ ಭಕ್ತಿವಿನೋದ ಠಾಕೂರರ ತಿರೋಭಾವದ ದಿನ, ಜುಲೈ ೧೧, ೨೦೧೦)

ಭಾಗ ಒಂದು

# ಶ್ರೀ ಚೈತನ್ಯ ಮಹಾಪ್ರಭುಗಳ ಜೀವನ

ಶ್ರೀ ಚೈತನ್ಯ ಮಹಾಪ್ರಭುಗಳ ಪವಿತ್ರ ಜೀವನ ಮತ್ತು ಅವರ ಬೋಧನೆಗಳನ್ನು ಧರ್ಮಶ್ರದ್ಧೆಯುಳ್ಳ ವಿದ್ಯಾವಂತ ಜನರ ಗಮನಕ್ಕೆ ತರುವುದೇ ಈ ಸಣ್ಣ ಪುಸ್ತಕದ ಉದ್ದೇಶ. ಈ ವಿಷಯಗಳನ್ನು ಕುರಿತು ವಿವರಿಸುವ ಅನೇಕ ಪುಸ್ತಕಗಳು ಬಹುಮಟ್ಟಿಗೆ ಬಂಗಾಲಿ ಭಾಷೆಯಲ್ಲಿ ಮುದ್ರಣಗೊಂಡಿದ್ದು ಶ್ರೀ ಚೈತನ್ಯ ಮಹಾಪ್ರಭುಗಳ ಜೀವನ ಮತ್ತು ಅವರ ಬೋಧನೆಗಳು ಅಪರೂಪವಾಗಿ ಬಂಗಾಲದ ಗಡಿಯನ್ನು ದಾಟಿವೆ. ಆದ್ದರಿಂದ ಒಂದು ಪುಸ್ತಕವನ್ನು ಭಾರತದೆಲ್ಲೆಡೆ ಪ್ರಸರಣಕ್ಕಾಗಿ ಸಂಸ್ಕೃತ ಭಾಷೆಯಲ್ಲಿ ಮುದ್ರಿಸಲಾಯಿತು. ಯುರೋಪ್ ಮತ್ತು ಅಮೆರಿಕಾ ದೇಶದ ನಮ್ಮ ಸುಶಿಕ್ಷಿತ ಸಹೋದರರು ಇತ್ತೀಚೆಗಷ್ಟೆ ಸಂಸ್ಕೃತ ಭಾಷೆಯ ಅಧ್ಯಯನವನ್ನು ಪ್ರಾರಂಭಿಸಿದ್ದು, ಆಂಗ್ಲ ಭಾಷೆಯ ಈ ಪ್ರಕಟಣೆಯು ಅತಿ ಶೀಘ್ರದಲ್ಲೆ ಅವರ ಕೈ ಸೇರುವುದೆಂದು ನಮ್ಮ ನಂಬಿಕೆ. ಈ ಪುಸ್ತಕವು ಸಮೃದ್ಧವಾದ ವ್ಯಾಖ್ಯಾನಗಳೊಂದಿಗೆ ೧೦೪ ಶ್ಲೋಕಗಳನ್ನೊಳಗೊಂಡಿದೆ. ಈ ಪುಸ್ತಕವು ಕೃಷ್ಣದಾಸ ಕವಿರಾಜ ಗೋಸ್ವಾಮಿಗಳ ಪ್ರಸಿದ್ಧ ಪುಸ್ತಕವಾದ ಚೈತನ್ಯ ಚರಿತಾಮೃತದಲ್ಲಿ ಹೇಳಿರುವ ಹಾಗೆ ಶ್ರೀ ಚೈತನ್ಯ ಮಹಾಪ್ರಭುಗಳ ಜೀವನದ ಎಲ್ಲ ಘಟನಾ ವಿವರಗಳನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ೭೫ ರಿಂದ ೮೬ರ ವರೆಗಿನ ಶ್ಲೋಕಗಳು ಆ ಮಹಾನ್ ವ್ಯಕ್ತಿಯಾದ ಶ್ರೀ ಚೈತನ್ಯ ಮಹಾಪ್ರಭುಗಳ ಬೋಧನೆಗಳ ಮುಖ್ಯ ಅಂಶಗಳನ್ನು ತಿಳಿಸುತ್ತವೆ. ನಮ್ಮ ಆಂಗ್ಲ ಓದುಗರಿಗೆ ಓದಲು ಸಹಾಯವಾಗುವ ದೃಷ್ಟಿಯಿಂದ ಆಂಗ್ಲ ಭಾಷೆಯ ಈ ಪ್ರಕಟಣೆಯಲ್ಲಿ ಸಂಸ್ಕೃತ ಪುಸ್ತಕದ ತಾತ್ಪರ್ಯವನ್ನು ಸಂಕ್ಷಿಪ್ತವಾಗಿ ಸಾದರಪಡಿಸಿದ್ದೇವೆ.

## ಅವರ ಆವಿರ್ಭಾವ

ಶ್ರೀ ಚೈತನ್ಯ ಮಹಾಪ್ರಭುಗಳು ೧೪೦೭ನೇ ಶಕಾಬ್ದ ಫಾಲ್ಗುಣ ಮಾಸದ ೨೩ನೇ ದಿನ, ಕ್ರೈಸ್ತ ಕಾಲಮಾನದ ಪ್ರಕಾರ ೧೪೮೬ನೇ ಫೆಬ್ರವರಿ ತಿಂಗಳು ೧೮ರ ಸಂಜೆ ಸೂರ್ಯಾಸ್ತದ ಸ್ವಲ್ಪ ಸಮಯದ ನಂತರ ನದಿಯಾ ನಗರದ ಮಾಯಾಪುರದಲ್ಲಿ ಜನಿಸಿದರು. ಅವರ ಜನನದ ಸಮಯದಲ್ಲಿ ಚಂದ್ರ ಗ್ರಹಣವಾಗಿತ್ತು ಮತ್ತು ನದಿಯಾದ ಜನರು ಎಂದಿನಂತೆ ಈ ಸಂದರ್ಭದಲ್ಲಿ ಉಲ್ಲಾಸದಿಂದ ಇತರರನ್ನೂ ಹುರಿದುಂಬಿಸುವ ಹಾಗೆ "ಹರಿಬೋಲ್" ಎಂದು ಹೇಳುತ್ತಾ ಭಾಗಿರಥಿ (ಗಂಗಾ) ನದಿಯಲ್ಲಿ ಸ್ನಾನಮಾಡತೊಡಗಿದರು. ಶ್ರೀ ಚೈತನ್ಯರ ತಂದೆ ಜಗನ್ನಾಥ ಮಿಶ್ರರು ವೈದಿಕ ವರ್ಗದ ಒಬ್ಬ ಬಡ ಬ್ರಾಹ್ಮಣ ಪುರೋಹಿತರಾಗಿದ್ದರುಮತ್ತು ಅವರ

ತಾಯಿ ಶಚಿದೇವಿ ಸದ್ಗುಣವಂತ ಆದರ್ಶ ಗೃಹಿಣಿಯಾಗಿದ್ದರು. ಬ್ರಾಹ್ಮಣ ಕುಟುಂಬದವರಾದ ಇವರಿಬ್ಬರೂ ಮೂಲತಃ ಸಿಲ್ಹೆಟ್ ಎಂಬ ಊರಿನ ನಿವಾಸಿಗಳಾಗಿದ್ದರು. ಶ್ರೀ ಚೈತನ್ಯರು ಎಳೆಮಗುವಾಗಿದ್ದಾಗಿನಿಂದ ಬಹಳ ಸುಂದರವಾಗಿದ್ದರು ಮತ್ತು ನಗರದ ಹೆಂಗಸರೆಲ್ಲರು ಅವರಿಗೆ ಅನೇಕ ಉಡುಗೊರೆಗಳನ್ನು ಕೊಡಲು ಬರುತ್ತಿದ್ದರು. ಅವರ ತಾಯಿಯ ತಂದೆ ಪ್ರಸಿದ್ಧ ಜ್ಯೋತಿಷಿಗಳಾದ ಪಂಡಿತ್ ನೀಲಾಂಬರ ಚಕ್ರವರ್ತಿಗಳು, ಭವಿಷ್ಯದಲ್ಲಿ ಮಗುವು ಒಬ್ಬ ಪ್ರಖ್ಯಾತ ವ್ಯಕ್ತಿಯಾಗುವನೆಂದು ಭವಿಷ್ಯ ನುಡಿದು ಅವರಿಗೆ ವಿಶ್ವಂಭರನೆಂದು ನಾಮಕರಣ ಮಾಡಿದರು. ಅವರ ಮೈ ಬಣ್ಣವು ಬಂಗಾರದ ಬಣ್ಣವನ್ನು ಹೋಲುತ್ತಿದ್ದುದರಿಂದ ನೆರೆಹೊರೆಯ ಮಹಿಳೆಯರು ಅವರನ್ನು ಗೌರಹರಿ ಎಂದು ಕರೆಯುತ್ತಿದ್ದರು ಮತ್ತು ಅವರು ಹುಟ್ಟಿದ ಸ್ಥಳದ ಹತ್ತಿರ ಒಂದು ಬೇವಿನ (ನೀಮ್) ಮರವಿದ್ದ ಕಾರಣ ಅವರ ತಾಯಿ ಅವರನ್ನು ನಿಮಾಯ್ ಎಂದು ಕರೆಯುತ್ತಿದ್ದರು. ಪುಟ್ಟ ಹುಡುಗ ನಿಮಾಯ್ ನೋಡಲು ಬಹಳ ಸುಂದರವಾಗಿದ್ದನು ಮತ್ತು ಎಲ್ಲರು ಅವನನ್ನು ಪ್ರತಿ ದಿನ ನೋಡಲು ಬಯಸುತ್ತಿದ್ದರು. ಅವನು ಬೆಳೆಯುತ್ತಿದ್ದ ಹಾಗೆ ಒಬ್ಬ ಕ್ರೀಡಾಸಕ್ತ ತುಂಟ ಹುಡುಗನಾದನು. ಅವನಿಗೆ ಐದು ವರುಷ ತುಂಬಿದಾಗ ಅವನನ್ನು ಒಂದು ಶಾಲೆಗೆ ಸೇರಿಸಲಾಯಿತು ಮತ್ತು ಕೇವಲ ಅಲ್ಪ ಸಮಯದಲ್ಲೇ ಅವನು ಬಂಗಾಲಿ ಭಾಷೆಯ ಮೇಲೆ ಪ್ರಭುತ್ತ್ವವನ್ನು ಪಡೆದನು.

ಶ್ರೀ ಚೈತನ್ಯರ ಜೀವನ ಚರಿತ್ರೆಯನ್ನು ಬರೆದ ಅವರ ಸಮಕಾಲೀನ ಅನೇಕ ಬರಹಗಾರರು ವಿವರಿಸಿದ ಅವರ ಬಗೆಗಿನ ನಿರ್ದಿಷ್ಟ ಬಾಲ್ಯಕಥಾನಕಗಳು, ಶ್ರೀ ಚೈತನ್ಯರು ತಮ್ಮ ಬಾಲ್ಯದಲ್ಲಿ ಮೆರೆದ ಅನೇಕ ಚಮತ್ಕಾರಗಳ ಸಮಾನ್ಯ ದಾಖಲೆಗಳಾಗಿವೆ. ಅವರು ತಮ್ಮ ತಾಯಿಯ ತೋಳಲ್ಲಿ ಮಗುವಾಗಿದ್ದಾಗ ನಿಲ್ಲಿಸದೆ ಸತತವಾಗಿ ಅಳುತ್ತಿದ್ದು ನೆರೆಹೊರೆಯ ಹೆಂಗಸರು ಮತ್ತು ಅವರ ತಾಯಿಯು ''ಹರಿಬೋಲ್'' ಎಂದು ಉಚ್ಚರಿಸುತ್ತಿದ್ದಂತೆ ಅವರು ಅಳುವುದನ್ನು ನಿಲ್ಲಿಸುತ್ತಿದ್ದರು ಎಂದು ಹೇಳಲಾಗಿದೆ. ಹೀಗೆ ಅವರ ಮನೆಯಲ್ಲಿ ಸತತವಾಗಿ ''ಹರಿಬೋಲ್'' ನ ಜಪವಾಗುತ್ತಲೇ, ಭಗವಂತನ ಭವಿಷ್ಯದ ಕಾರ್ಯ ಚಟುವಟಿಕೆಯ ಭವಿಷ್ಯನುಡಿದಂತಾಯಿತು. ಒಂದು ಬಾರಿ ಅವರ ತಾಯಿ ಅವರಿಗೆ ಸಿಹಿ ಭಕ್ಷ್ಯವನ್ನು ತಿನ್ನಲು ಕೊಟ್ಟಿದ್ದು, ಅವರು ಜೇಡಿಮಣ್ಣನ್ನು ಸೇವಿಸಿದ್ದರು. ಅವರ ತಾಯಿ ಕಾರಣ ಕೇಳಿದರೆ, ಪ್ರತಿಯೊಂದು ಸಿಹಿ ಭಕ್ಷ್ಯವು ಜೇಡಿ ಮಣ್ಣಿನಿಂದ ಪರಿವರ್ತಿತಗೊಂಡಿರುವುದರಿಂದ ಜೇಡಿ ಮಣ್ಣನ್ನೇ ತಿನ್ನಬಹುದಲ್ಲವೆಂದು ಉತ್ತರಿಸುತ್ತಿದರು ಎಂದು ಕೂಡಾ ಹೇಳಲಾಗಿದೆ. ಪ್ರತಿಯೊಂದು ಮೂಲಧಾತುವೂ ಒಂದು ನಿರ್ದಿಷ್ಟ ಸ್ಥಿತಿಯಲ್ಲಿ ಒಂದು ವಿಶೇಷವಾದ ಉಪಯೋಗಕ್ಕೆ ಬಳಕೆಯಾಗುತ್ತದೆ. ಜೇಡಿಮಣ್ಣು ಒಂದು ಪಾತ್ರೆಯ ಸ್ಥಿತಿಯಲ್ಲಿರುವಾಗ ನೀರಿನ ತಂಬಿಗೆಯಾಗಿ ಬಳಸಲ್ಪಡುತ್ತದೆ, ಆದರೆ ಅದು ಒಂದು ಇಟ್ಟಿಗೆಯ ರೂಪದಲ್ಲಿರುವಾಗ ಹಾಗೆ ಬಳಸಲು ಸಾಧ್ಯವಿಲ್ಲ. ಹಾಗಾಗಿ, ಜೇಡಿಮಣ್ಣು ಸಿಹಿಭಕ್ಷ್ಯದ ರೂಪದಲ್ಲಿದ್ದಾಗ ಮಾತ್ರ ಅದನ್ನು ಆಹಾರವಾಗಿ ಉಪಯೋಗಿಸಬಹುದೇ ಹೊರತು ಅದು ತನ್ನ ಇನ್ನಿತರ ಅವಸ್ಥೆಗಳಲಿದ್ದಾಗ ಅಲ್ಲ ಎಂದು ಒಬ್ಬ ನುರಿತ ಪಂಡಿತನ ಪತ್ನಿಯಾದ ಅವರ ತಾಯಿ ಶಚಿದೇವಿ ವಿವರಿಸಿದರು. ತನ್ನ ತಾಯಿಯು ನೀಡಿದ ವಿವರಣೆಯು ಮನದಟ್ಟಾದಾಗ ಬಾಲಕ ನಿಮಾಯಿಯು ಜೇಡಿ ಮಣ್ಣನ್ನು ಸಿಹಿಭಕ್ಷ್ಯದಂತೆ ತಿನ್ನುವ ತನ್ನ ಮೂರ್ಖತನವನ್ನು ಒಪ್ಪಿಕೊಂಡು ಇನ್ನು ಮುಂದೆ ಈ ತಪ್ಪನ್ನು ಪುನಃ ಮಾಡುವುದಿಲ್ಲವೆಂದು ಸಮ್ಮತಿಸಿದನು.

## ಅವರ ಬಾಲ್ಯ ಲೀಲೆಗಳು

ಇನ್ನೊಂದು ಚಮತ್ಕಾರಭರಿತ ಘಟನೆಯನ್ನು ತಿಳಿಸಲಾಗಿದೆ. ಒಬ್ಬ ಬ್ರಾಹ್ಮಣನು ತೀರ್ಥಯಾತ್ರೆಗೆ ಹೋಗುವಾಗ ಜಗನ್ನಾಥ ಮಿಶ್ರರ ಮನೆ ಅತಿಥಿಯಾದನು. ಬ್ರಾಹ್ಮಣನು ತಾನು ಮಾಡಿದ ಅಡಿಗೆಯನ್ನು ಕೃಷ್ಣನಿಗೆ ಅರ್ಪಿಸುತ್ತ ಧ್ಯಾನಮಗ್ನನಾಗಿದ್ದನು. ಅಷ್ಟರಲ್ಲಿ ನಿಮಾಯಿಯು ಬಂದು ಮಾಡಿದ ಅನ್ನವನ್ನೆಲ್ಲ ಸೇವಿಸಿದನು. ಹುಡುಗನ ಕೃತ್ಯದಿಂದ ಚಕಿತಗೊಂಡ ಬ್ರಾಹ್ಮಣನು, ಜಗನ್ನಾಥ ಮಿಶ್ರರ ಪ್ರಾರ್ಥನೆಯ ಮೇರೆಗೆ ಪುನಃ ಅಡಿಗೆ ಮಾಡಿದನು. ಬ್ರಾಹ್ಮಣನು ಧ್ಯಾನಿಸುತ್ತ ಕೃಷ್ಣನಿಗೆ ಅನ್ನವನ್ನು ಅರ್ಪಿಸುತ್ತಿರುವಾಗ ನಿಮಾಯಿಯು ಪುನಃ ಅನ್ನವನ್ನು ಸೇವಿಸಿದನು. ಬ್ರಾಹ್ಮಣನಿಗೆ ಮೂರನೇ ಬಾರಿ ಅಡಿಗೆ ಮಾಡುವಂತೆ ಮನವೊಪ್ಪಿಸಲಾಯಿತು. ಈ ಬಾರಿ ಮನೆಯ ನಿವಾಸಿಗಳೆಲ್ಲರು ನಿದ್ರೆ ಹೋಗಿದ್ದರು ಮತ್ತು ಹುಡುಗನು ತಾನು ದೇವೋತ್ತಮ ಪರಮ ಪುರುಷನಾದ ಶ್ರೀ ಕೃಷ್ಣನೆಂದು ತೋರಿ ಆ ಬ್ರಾಹ್ಮಣನಿಗೆ ಆಶೀರ್ವದಿಸಿದನು. ಬ್ರಾಹ್ಮಣನು ತನ್ನ ಆರಾಧ್ಯಮೂರ್ತಿಯನ್ನು ಕಣ್ಮುಂದೆ ಕಂಡು ಭಾವೋನ್ಮಾದದಲ್ಲಿ ಪರವಶನಾದನು.

ಇನ್ನೊಂದು ಘಟನೆಯಲ್ಲಿ ಇಬ್ಬರು ಕಳ್ಳರು ಹುಡುಗನ ಆಭರಣಗಳನ್ನು ಕದಿಯುವ ಉದ್ದೇಶದಿಂದ ಅವನನ್ನು ತನ್ನ ತಂದೆಯ ಮನೆಯ ಬಾಗಿಲಿನಿಂದ ಅಪಹರಿಸಿದ್ದು ದಾರಿಯಲ್ಲಿ ಅವನಿಗೆ ಸಿಹಿ ಭಕ್ಷ್ಯಗಳನ್ನು ಕೊಟ್ಟರು.  ಆ ಕಳ್ಳರು ಎಲ್ಲಿಂದ ಹೋದರೂ ನಿಮಾಯಿಯು ತನ್ನ ಮಾಯಾಶಕ್ತಿಯಿಂದ ಅವರು ತಿರುಗಿ ತನ್ನ ಮನೆಯ ಕಡೆಗೇ ಹೋಗುವಂತೆ ಮಾಡುತ್ತಿದನು. ಕಳ್ಳರು ತಾವು ಪತ್ತೆಯಾಗುವ ಭಯದಿಂದ ಹುಡುಗನನ್ನು ಅಲ್ಲೇ ಬಿಟ್ಟು ಓಡಿ ಹೋದರು.

ಏಕಾದಶಿಯ ದಿನದಂದು ಕೃಷ್ಣನಿಗೆ ಅರ್ಪಿಸಲು ಹಿರಣ್ಯ ಮತ್ತು ಜಗದೀಶರು ಕೂಡಿಟ್ಟ ಭೋಗವನ್ನು ಹುಡುಗನು ಕೇಳಿ ಪಡೆದುಕೊಂಡದ್ದನ್ನು ಮತ್ತೊಂದು ಚಮತ್ಕಾರದ ಘಟನೆಯಲ್ಲಿ ವಿವರಿಸಲಾಗಿದೆ. ಕೇವಲ ನಾಲ್ಕು ವರುಷದವನಾಗಿದ್ದಾಗ ತನ್ನ ತಾಯಿಯು ಮೈಲಿಗೆಯೆಂದು ಪರಿಗಣಿಸಿ ತಿರಸ್ಕರಿಸಿದ ಅಡಿಗೆಯ ಪಾತ್ರೆಗಳ ಮೇಲೆ ಕುಳಿತುಕೊಳ್ಳುತ್ತಿದ್ದನು. ಅಡುಗೆಯ ನಂತರ ಎಸೆದ ಅಡುಗೆಯ ಪಾತ್ರೆಗಳ ವಿಷಯದಲ್ಲಿ ಪವಿತ್ರತೆ ಮತ್ತು ಅಪವಿತ್ರತೆಯ ಪ್ರಶ್ನೆಯೇ ಬರುವುದಿಲ್ಲವೆಂದು ತಮ್ಮ ತಾಯಿಗೆ ವಿವರಿಸುತ್ತಿದ್ದನು. ಈ ಕಥಾನಕಗಳು ಶ್ರೀ ಚೈತನ್ಯರ ಐದನೇ ವರುಷದವರೆಗಿನ ಬಾಲ್ಯಾವಸ್ಥೆಯನ್ನು ವಿವರಿಸುತ್ತವೆ.

ಅವರ ಎಂಟನೇ ವರುಷ ವಯಸ್ಸಿನಲ್ಲಿ ಅವರನ್ನು ಮಾಯಾಪುರ ಹಳ್ಳಿಯ ಹತ್ತಿರ ಗಂಗಾನಗರದಲ್ಲಿನ ಗಂಗಾದಾಸ ಪಂಡಿತರ ಶಾಲೆಗೆ ಸೇರಿಸಲಾಯಿತು. ಎರಡು ವರ್ಷದಲ್ಲಿಯೇ ಅವರು ಸಂಸ್ಕೃತ ವ್ಯಾಕರಣ ಮತ್ತು ಅಲಂಕಾರದಲ್ಲಿ ನೈಪ್ಯಣ್ಯತೆಯನ್ನು ಪಡೆದರು. ಅವರ ನಂತರದ ಓದು ಅವರ ಮನೆಯಲ್ಲೇ ಸ್ವಂತ ಅಧ್ಯಯನದ ಸ್ವಭಾವದ್ದಾಗಿದ್ದು ಸ್ವತಃ ಒಬ್ಬ ವಿದ್ವಾಂಸರಾದ ತಮ್ಮ ತಂದೆಯವರ ಸ್ವತ್ತಾಗಿದ್ದ ಅನೇಕ ಪ್ರಮುಖ ಪುಸ್ತಕಗಳು ಅವರಿಗೆ ದೊರಕಿದವು. ಅವರು ಸ್ಮೃತಿಯನ್ನು(ಶಾಸ್ತ್ರಗಳು)  ತಮ್ಮ ಸ್ವಂತ ಅಧ್ಯಯನದಲ್ಲಿ ಓದಿದರು ಮತ್ತು ಅಂದಿನ ಕಾಲದ ಪ್ರಸಿದ್ಧ ವಿದ್ವಾಂಸರಾದ ರಘುನಾಥ ಶಿರೋಮಣಿಯವರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡುತ್ತಿದ್ದ ತಮ್ಮ ಸ್ನೇಹಿತರೊಂದಿಗಿನ ಪೈಪೋಟಿಯಲ್ಲಿ ನ್ಯಾಯವನ್ನು ಕೂಡಾ ಓದಿ ಕಲಿತರು.

ತಮಗೆ ಹತ್ತು ವರುಷ ವಯಸ್ಸಾದ ನಂತರ, ನಿಮಾಯ್ ವ್ಯಾಕರಣ, ಅಲಂಕಾರ, ಸ್ಮೃತಿ ಮತ್ತು ನ್ಯಾಯಾ ಇವುಗಳಲ್ಲಿ ಒಬ್ಬ ಶ್ರೇಷ್ಠ ವಿದ್ವಾಂಸರಾದರು. ಈ ಸಮಯದಲ್ಲೇ ಅವರ ಅಣ್ಣನಾದ ವಿಶ್ವರೂಪ ಮನೆಯನ್ನು ಬಿಟ್ಟು ಸನ್ಯಾಸ ಆಶ್ರಮವನ್ನು ಸ್ವೀಕರಿಸಿದರು. ಪುಟ್ಟ ಬಾಲಕನಾಗಿದ್ದರೂ ನಿಮಾಯ್ ತಮ್ಮ ತಂದೆ ತಾಯಿಯರನ್ನು ಭಗವಂತನಿಗೆ ತೃಪ್ತಿಪಡಿಸುವ ಉದ್ದೇಶದಿಂದ ಅವರ ಸೇವೆ ಮಾಡುವೆನೆಂದು ಹೇಳುತ್ತ ಅವರನ್ನು ಸಮಾಧಾನ ಮಾಡಿದನು. ತದನಂತರ ಸ್ವಲ್ಪ ಸಮಯದಲ್ಲೇ ಅವರ ತಂದೆ ಇಹ ಲೋಕವನ್ನು ತ್ಯಜಿಸಿದರು. ಅವರ ತಾಯಿ ಅತೀವ ದುಃಖಿತಪ್ತರಾಗಿದ್ದು ಶ್ರೀ ಚೈತನ್ಯರು ತಮ್ಮ ಸಹಜ ಸಂತುಷ್ಟ ನಡವಳಿಕೆಯಿಂದ ವಿಧವೆಯಾದ ತಮ್ಮ ತಾಯಿರನ್ನು ಸಮಾಧಾನ ಮಾಡಿದರು.

## ಅವರ ವಿವಾಹ ಮತ್ತು ಸಾಮಾಜಿಕ ಜೀವನ

ಮಹಾಪ್ರಭುಗಳು ತಮ್ಮ ಹದಿನಾಲ್ಕು ಅಥವಾ ಹದಿನೈದು ವರುಷ ವಯಸ್ಸಿನವರಾಗಿರುವಾಗ ನದಿಯಾ ಊರಿನ ವಲ್ಲಭಚಾರ್ಯರ ಮಗಳಾಗಿದ್ದ ಲಕ್ಷ್ಮಿಪ್ರಿಯಾಳೊಂದಿಗೆ ವಿವಾಹವಾಯಿತು. ಇದೇ ಸಮಯದಲ್ಲಿ ನಿಮಾಯ್ ಪಂಡಿತರು ನ್ಯಾಯ ಸಿದ್ಧಾಂತ ಮತ್ತು ಸಂಸ್ಕೃತ ಅಭ್ಯಾಸದ ಪ್ರಸಿದ್ಧ ಸ್ಥಳವಾಗಿದ್ದ ನದಿಯಾದ ಶ್ರೇಷ್ಠ ವಿದ್ವಾಂಸರುಗಳಲ್ಲಿ ಒಬ್ಬರಾದರು. ಸ್ಮಾರ್ತ ಪಂಡಿತರುಗಳೇನು, ತರ್ಕಶಾಸ್ತ್ರ ಪ್ರವೀಣರು ಕೂಡಾ ಅವರೊಂದಿಗೆ ಸಾಹಿತಿಕ ಚರ್ಚೆಮಾಡಲು ಭಯ ಪಡುತ್ತಿದ್ದರು. ಸಂಸಾರಸ್ಥರಾದ ಅವರು ಧನವನ್ನು ಸಂಪಾದಿಸಲು ಪೂರ್ವ ಬಂಗಾಲದ ಪದ್ಮ ನದಿಯ ತೀರದ ಬಳಿ ಹೋದರು. ಅಲ್ಲಿ ಅವರು ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಿ ಸಾಕಷ್ಟು ಹಣ ಸಂಪಾದಿಸಿದರು. ಈ ಸಮಯದಲ್ಲೇ ಅವರು ಆಗಾಗ ವೈಷ್ಣವ ಸಿದ್ಧಾಂತವನ್ನು ಪ್ರಚಾರ ಮಾಡಿದರು. ತಪನ ಮಿಶ್ರರಿಗೆ ವೈಷ್ಣವ ಸಿದ್ಧಾಂತವನ್ನು ಬೋಧಿಸಿದ ನಂತರ ಅವರನ್ನು ವಾರಾಣಾಸಿಗೆ ಹೋಗಿ ನಿವಾಸಿಸಲು ಆಜ್ಞಾಪಿಸಿದರು. ಪೂರ್ವ ಬಂಗಾಲದಲ್ಲಿ ನಿವಾಸವಾಗಿದ್ದ ಸಮಯದಲ್ಲಿ ಅವರ ಪತ್ನಿಯಾದ ಲಕ್ಷ್ಮಿಪ್ರಿಯಾ ಹಾವು ಕಚ್ಚುವಿಕೆಯಿಂದ ಇಹಲೋಕ ತ್ಯಜಿಸಿದರು. ಮನೆಗೆ ಹಿಂದಿರುಗಿದ ಮೇಲೆ ಅವರು ತಮ್ಮ ತಾಯಿಯು ಶೋಕತಪ್ತರಾಗಿರುವುದನ್ನು ಕಂಡರು. ಮಾನವ ಜನ್ಮದಲ್ಲಿನ ಇಹಲೋಕದ ಅನಿಶ್ಚಿತ ವ್ಯವಹಾರಗಳ ಬಗ್ಗೆ ಮಾತನಾಡುತ್ತ ತಮ್ಮ ತಾಯಿಯನ್ನು ಸಮಾಧಾನ ಪಡಿಸಿದರು. ತಮ್ಮ ತಾಯಿಯ ಕೋರಿಕೆಯ ಮೇಲೆ ಅವರು ರಾಜ ಪಂಡಿತ ಸನಾತನ ಮಿಶ್ರರ ಮಗಳಾದ ವಿಷ್ಣುಪ್ರಿಯಾರನ್ನು ವಿವಾಹವಾದರು.

ತಮ್ಮ ಪ್ರವಾಸದಿಂದ ಹಿಂದಿರುಗಿದ ನಂತರ ನಿಮಾಯ್‌ಯವರ ಸಂಗಾತಿಗಳು ಅವರ ಜೊತೆಗೂಡಿದರು. ಅವರು ಈಗ ಎಷ್ಟು ಪ್ರಸಿದ್ಧರಾಗಿದ್ದರೆಂದರೆ ಜನರು ಅವರನ್ನು ನದಿಯಾದ ಸರ್ವಶ್ರೇಷ್ಠ ಪಂಡಿತರಾಗಿ ಪರಿಗಣಿಸುತ್ತಿದ್ದರು. ಅತಿದೊಡ್ಡ ದಿಗ್ವಿಜಯಿ ಎಂದು ಕರೆದುಕೊಳ್ಳುವ ಕಾಶ್ಮೀರದ ಕೇಶವ ಮಿಶ್ರನು ನದಿಯಾದ ಪಂಡಿತರುಗಳ ಜೊತೆ ತರ್ಕಿಸುವ ಉದ್ದೇಶದಿಂದ ನದಿಯಾಗೆ ಬಂದಿದ್ದನು. ದಿಗ್ವಿಜಯಿಯೆಂದು ಕರೆದುಕೊಳ್ಳುತ್ತಿದ್ದ ಈ ಪಂಡಿತನಿಂದ ಭಯಭೀತರಾದ ನದಿಯಾದ ಪಂಡಿತರುಗಳೆಲ್ಲರು ಆಹ್ವಾನದ ನೆಪವೊಡ್ಡಿ ಹೊರ ಊರುಗಳಿಗೆ ತೆರಳಿದರು. ಕೇಶವ ಮಿಶ್ರನು ನಿಮಾಯ್ ಪಂಡಿತನನ್ನು ಮಾಯಾಪುರದ ಬರಕೋನ ಘಟ್ಟದಲ್ಲಿ

ಭೇಟಿಯಾಗಿ ಒಂದು ಸಣ್ಣ ಚರ್ಚೆಯ ನಂತರ ಹುಡುಗನಿಂದ ಪರಾಭವಗೊಂಡನು. ತನಗಾದ ಅಪಮಾನವು ಅವನನ್ನು ಅಲ್ಲಿಂದ ಓಡಿಹೋಗುವಂತೆ ಮಾಡಿತು. ನಿಮಾಯ್ ಪಂಡಿತ್ ಈಗ ತಮ್ಮ ಕಾಲದ ಅತಿ ಶ್ರೇಷ್ಠ ವಿದ್ವಾಂಸರಾದರು.

ಹದಿನಾರು ಅಥವಾ ಹದಿನೇಳನೇ ವಯಸ್ಸಿನಲ್ಲಿರುವಾಗ ಶ್ರೀ ಚೈತನ್ಯರು ತಮ್ಮ ಶಿಷ್ಯರುಗಳೊಂದಿಗೆ ಗಯಾಗೆ ತೆರಳಿ ಮಾಧವೇಂದ್ರ ಪುರಿಗಳ ಪ್ರಸಿದ್ಧ ಶಿಷ್ಯರಾದ ಮತ್ತು ಒಬ್ಬ ವೈಷ್ಣವ ಸಂನ್ಯಾಸಿಯಾದ ಈಶ್ವರಪುರೀಯವರಿಂದ ತಮ್ಮ ಆಧ್ಯಾತ್ಮಿಕ ದೀಕ್ಷೆಯನ್ನು ಪಡೆದರು. ನದಿಯಾಗೆ ಹಿಂದಿರುಗಿದ ನಂತರ ಶ್ರೀ ಚೈತನ್ಯ ಮಹಾಪ್ರಭುಗಳು ವೈಷ್ಣವ ಸಿದ್ಧಾಂತದ ಪ್ರಚಾರವನ್ನು ತುಂಬು ಆವೇಶದಿಂದ ಬಿರುಸಾಗಿ ಆರಂಭಿಸಿದರು. ಅವರ ದಿವ್ಯ ಸ್ವಭಾವವು ಎಷ್ಟು ಪ್ರಭಾವಶಾಲಿಯಾಗಿತ್ತೆಂದರೆ ಅವರ ಜನನದ ಪೂರ್ವದಲ್ಲೇ ವೈಷ್ಣವ ಧರ್ಮವನ್ನು ಸ್ವೀಕರಿಸಿದ ಅದ್ವೈತ ಪ್ರಭು, ಶ್ರೀವಾಸ ಪಂಡಿತರು ಮತ್ತು ಇನ್ನಿತರರು ನಿಮಾಯಿಯ ಪ್ರೌಢ ವಯಸ್ಸಿನಲ್ಲಾದ ಈ ಬದಲಾವಣೆಯನ್ನು ಕಂಡು ವಿಸ್ಮಯಗೊಂಡರು. ಈಗ ಅವರು ಸುಮ್ಮನೆ ಒಬ್ಬ ಹೋರಾಡುವ ಸ್ಪರ್ಧಾತ್ಮಕ ನ್ಯಾಯಿಕನಾಗಲಿ, ಒಬ್ಬ ವಿತಂಡವಾದಿ ಸ್ಮಾರ್ತನಾಗಲಿ ಅಥವಾ ಒಬ್ಬ ಟೀಕಾಕಾರ ವಾಗ್ಮಿಯಾಗಿರಲಿಲ್ಲ. ಈಗ ಅವರು ತಮ್ಮದಿವ್ಯ ರಸಾನುಭೂತಿಯ ಪ್ರಭಾವದಿಂದ ಸ್ಫೂರ್ತಿಗೊಂಡ ವ್ಯಕ್ತಿಯಾಗಿ ವರ್ತಿಸುತ್ತಿದ್ದರು ಮತ್ತು ಕೃಷ್ಣನ ದಿವ್ಯನಾಮವನ್ನು ಆಲಿಸುತ್ತಿದ್ದಂತೆಯೆ ಮೂರ್ಛಾವಸ್ಥೆಗೆ ಹೋಗುತ್ತಿದ್ದರು. ಮಹಾಪ್ರಭುಗಳು ಶ್ರೀವಾಸ ಪಂಡಿತರ ಮನೆಯಲ್ಲಿ ದೊಡ್ಡ ವಿದ್ವಾಂಸರುಗಳಾದ ತಮ್ಮ ನೂರಾರು ಜನ ಅನುಯಾಯಿಗಳ ಉಪಸ್ಥಿತಿಯಲ್ಲಿ ತಮ್ಮ ದಿವ್ಯ ಶಕ್ತಿಯ ಪ್ರದರ್ಶನ ಮಾಡುತ್ತಿದ್ದರೆಂದು ಮುರಾರಿ ಗುಪ್ತರೆಂಬ ಒಬ್ಬ ಪ್ರತ್ಯಕ್ಷದರ್ಶಿ ವಿವರಿಸುತ್ತಾರೆ. ಈ ಸಮಯದಲ್ಲೇ ಅವರು ತಮ್ಮ ಅನುಯಾಯಿಗಳೊಡನೆ ಶ್ರೀವಾಸ ಪಂಡಿತರ ಮನೆಯ ಆವರಣದಲ್ಲಿ ಸಂಕೀರ್ತನೆಯ(ಭಗವಂತನ ದಿವ್ಯ ನಾಮಗಳ ಸಾಮೂಹಿಕ ಕೀರ್ತನೆ) ರಾತ್ರಿ ಶಾಲೆಯನ್ನು ಆರಂಭಿಸಿದರು. ಅಲ್ಲಿ ಅವರು ಬೋಧಿಸಿದರು, ಹಾಡಿದರು, ಕುಣಿದಾಡಿದರು ಮತ್ತು ಎಲ್ಲ ತರಹದ ಆಧ್ಯಾತ್ಮಿಕ ಭಾವಗಳನ್ನು ವ್ಯಕ್ತಪಡಿಸಿದರು. ಆಗ ತಾನೇ ಭಾರತದೆಲ್ಲೆಡೆ ತಮ್ಮ ಪರ್ಯಟನೆಯನ್ನು ಮುಕ್ತಾಯಗೊಳಿಸಿದ್ದ ವೈಷ್ಣವ ಧರ್ಮದ ಪ್ರಚಾರಕರಾಗಿದ್ದ ನಿತ್ಯಾನಂದ ಪ್ರಭುಗಳು (ಬಲರಾಮನ ಅವತಾರ ಹಾಗೂ ಕೃಷ್ಣನ ಮೊದಲನೆಯ ವಿಸ್ತೃತರೂಪ) ಬಂದು ಮಹಾಪ್ರಭುಗಳೊಡನೆ ಸೇರಿಕೊಂಡರು. ಬಂಗಾಲದ ವಿವಿಧೆಡೆಯಿಂದ ಅಂತರಂಗದಿಂದ ನಿಷ್ಠಾವಂತರಾಗಿದ್ದ ಅನೇಕ ವೈಷ್ಣವ ಸಿದ್ಧಾಂತದ ಪ್ರಚಾರಕರು ಬಂದು ಅವರ ಜೊತೆಗೂಡಿದರು. ಈಗ ನದಿಯಾ ಪಟ್ಟಣವು ವೈಷ್ಣವ ಧರ್ಮದ ಶ್ರೇಷ್ಠ ಪ್ರಭಾವದಿಂದ ಮನುಕುಲವನ್ನು ಸರ್ವತೋಮುಖವಾಗಿ ಆಧ್ಯಾತ್ಮಿಕಗೊಳಿಸುವ ಅತ್ಯುನ್ನತ ಧ್ಯೇಯವನ್ನು ತಮ್ಮದಾಗಿಸಿಕೊಂಡಿದ್ದ ವೈಷ್ಣವ ಆಚಾರ್ಯರುಗಳ ವಿಧ್ಯುಕ್ತ ಪೀಠವಾಯಿತು.

## ಮಹಾಪ್ರಭುಗಳ ಧ್ಯೇಯ

ಶ್ರೀ ನಿತ್ಯಾನಂದ ಪ್ರಭು ಮತ್ತು ಹರಿದಾಸ ಠಾಕೂರರಿಗೆ ಶ್ರೀ ಚೈತನ್ಯ ಮಹಾಪ್ರಭುಗಳು ನೀಡಿದ ಮೊದಲನೆಯ ಆಜ್ಞೆಯೆಂದರೆ, ''ಸ್ನೇಹಿತರೆ ! ಹೋಗಿ ! ನಗರದ ಪ್ರತಿ ಬೀದಿಗಳಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯ ಮನೆಗೆ ಹೋಗಿ ಅವರಿಗೆ ಭಕ್ತಿಯಿಂದ ಹರಿ ನಾಮ ಸ್ಮರಣೆ ಮಾಡವಂತೆ

ಕೋರಿ ಮತ್ತು ಪ್ರತಿದಿನ ಸಂಜೆ ಆ ದಿನದ ಪ್ರಚಾರದ ಫಲಿತಾಂಶದ ಬಗ್ಗೆ ನನಗೆ ವರದಿನೀಡಿ''. ಹೀಗೆ ಆಜ್ಞಾಪಿತರಾದ ಇಬ್ಬರೂ ಪ್ರಚಾರಕರು ಪ್ರಚಾರಮಾಡುತ್ತಾ ಹೋದರು ಮತ್ತು ಬಹು ಶೀಘ್ರದಲ್ಲೇ ಅತ್ಯಂತ ಹೀನ ನಡವಳಿಕೆಯ ಜಗಾಯ್ ಮತ್ತು ಮಧಾಯ್ ಎಂಬ ಇಬ್ಬರು ಧೂರ್ತರನ್ನು ಭೇಟಿಯಾದರು. ಮಹಾಪ್ರಭುಗಳ ಆಜ್ಞೆಯನ್ನು ಕೇಳಿದ ಅವರು ಆ ಇಬ್ಬರೂ ಪ್ರಚಾರಕರನ್ನು ಅವಮಾನಿಸಿದರು, ಆದರೆ ಬಹಳ ಬೇಗನೇ ಭಗವಂತನೇ ಉಪದೇಶಿಸಿದ ಭಕ್ತಿಯ (ಕೃಷ್ಣ ಭಕ್ತಿ) ಪ್ರಭಾವದಿಂದ ಪರಿವರ್ತಿತಗೊಂಡರು. ನದಿಯಾದ ಜನರು ಈ ಘಟನೆಯಿಂದ ವಿಸ್ಮಿತಗೊಂಡರು. ''ನಿಮಾಯ್ ಪಂಡಿತ ಒಬ್ಬ ದೊಡ್ಡ ಮೇಧಾವಿ ಅಷ್ಟೆ ಅಲ್ಲ ಅವರು ಭಗವದ್ಧಾಮದ ಪ್ರಚಾರಕರು ಕೂಡಾ ಆಗಿರುವರು'' ಎಂದುಕೊಂಡರು.

ಈ ಸಮಯದಿಂದ ತಮ್ಮ ೨೩ನೇ ವಯಸ್ಸಿನವರೆಗೂ ಮಾಹಾಪ್ರಭುಗಳು ತಮ್ಮ ಸಿದ್ಧಾಂತವನ್ನು ನದಿಯಾ ಅಲ್ಲದೇ ನಗರದ ಸುತ್ತ ಇರುವ ಎಲ್ಲ ಪಟ್ಟಣಗಳು ಮತ್ತು ಹಳ್ಳಿಗಳಲ್ಲಿಯೂ ಪ್ರಚಾರ ಮಾಡಿದರು. ತಮ್ಮ ಅನುಯಾಯಿಗಳ ಮನೆಯಲ್ಲಿ ಅವರು ವಿವಿಧ ಚಮತ್ಕಾರಗಳನ್ನು ತೋರಿದರು, ಭಕ್ತಿಯಲ್ಲಿ ಅಡಗಿರುವ ಸಿದ್ದಾಂತವನ್ನು ಪ್ರಚುರಪಡಿಸಿದರು ಮತ್ತು ಇನ್ನಿತರ ಭಕ್ತರುಗಳೊಂದಿಗೆ(ಕೃಷ್ಣ ಭಕ್ತರು) ಸಂಕೀರ್ತನೆಯನ್ನು ಮಾಡಿದರು. ನದಿಯಾ ನಗರದಲ್ಲಿನ ತಮ್ಮ ಅನುಯಾಯಿಗಳು ಹರಿ ನಾಮ ಸಂಕೀರ್ತನೆಯನ್ನು ಬೀದಿಗಳಲ್ಲಿ,ಮಾರುಕಟ್ಟೆಗಳಲ್ಲಿ ಮತ್ತು ಇತರ ಸಾಮೂಹಿಕಸ್ಥಳಗಳಲ್ಲಿ ಹಾಡತೊಡಗಿದರು. ಇದು ಒಂದು ಭಾವನಾತ್ಮಕ ವಾತಾವರಣವನ್ನು ಸೃಷ್ಟಿಸಿತು ಮತ್ತು ಸಮಾಜದ ವಿವಿಧ ವರ್ಗಗಳಲ್ಲಿ ವಿವಿಧ ರೀತಿಯ ಭಾವನೆಗಳನ್ನು ಕೆರಳಿಸಿತು. ಭಕ್ತರು ಬಹಳ ಸಂತುಷ್ಟರಾದರು. ಆದರೆ ಸ್ಮಾರ್ತ ಬ್ರಾಹ್ಮಣರು ನಿಮಾಯ್ ಪಂಡಿತನ ಯಶಸ್ಸಿನಿಂದ ಅಸೂಯೆಪಟ್ಟು ಶ್ರೀ ಚೈತನ್ಯರ ನಡತೆಯು ಹಿಂದೂ ವಿರೋಧಿ ಎಂದು ಅಲ್ಲಿಯ ಆಗಿನ ಅಧಿಕಾರಿ ಚಾಂದ ಕಾಜ಼ಿಗೆ ದೂರು ನೀಡಿದರು. ಕಾಜ಼ಿಯು ಸಂಕೀರ್ತನೆ ನಡೆಯುತ್ತಿದ್ದ ಶ್ರೀವಾಸ ಪಂಡಿತರ ಮನೆಗೆ ಬಂದು ಮೃದಂಗವನ್ನು ಒಡೆದುಹಾಕಿ ಮಾಹಾಪ್ರಭುಗಳು ತಮ್ಮ ಧರ್ಮದ ಬಗ್ಗೆ ಮಾಡುತ್ತಿರುವ ಅಸಂಪ್ರದಾಯಿಕ ಗದ್ದಲವನ್ನು ನಿಲ್ಲಿಸದಿದ್ದರೆ ತಾನು ಅವರ ಮತ್ತು ಅವರ ಅನುಯಾಯಿಗಳ ಮೇಲೆ ಮುಸಲ್ಮಾನ ಧರ್ಮವನ್ನು ಹೇರುವ ನಿಬಂಧನೆಗೊಳಗ ಾಗಬೇಕಾಗುತ್ತದೆಂದು ಘೋಷಿಸಿದನು.

ಈ ವಿಷಯವನ್ನು ಮಹಾಪ್ರಭುಗಳ ಗಮನಕ್ಕೆ ತರಲಾಯಿತು. ಆ ಕ್ಷಣವೇ ನಗರದ ಪ್ರತಿಯೊಬ್ಬರಿಗು ಕೈಯಲ್ಲಿ ದೀವಟಿಗೆಯನ್ನು ಹಿಡಿದು ಸಂಜೆ ವೇಳೆಗೆ ಉಪಸ್ಥಿತರಾಗಲು ಮಹಾಪ್ರಭುಗಳು ಆಜ್ಞಾಪಿಸಿದರು. ಎಲ್ಲರೂ ಒಟ್ಟುಗೂಡಿದ ನಂತರ ೧೪ ಗುಂಪುಗಳಾಗಿ ಸಂಕೀರ್ತನೆ ಮಾಡುತ್ತ ಮಾಹಾಪ್ರಭುಗಳು ಹೊರಟರು. ಕಾಜ಼ಿಯ ಮನೆಯೊಳಗೆ ಆಗಮಿಸಿದ ನಂತರ ಅವನೊಂದಿಗೆ ದೀರ್ಘಕಾಲ ಚರ್ಚೆ ನಡೆಸಿ ಅಂತಿಮವಾಗಿ ಅವನ ದೇಹವನ್ನು ಸ್ಪರ್ಶಿಸುತ್ತ ತಮ್ಮ ವೈಷ್ಣವ ಪ್ರಭಾವವನ್ನು ಅವನ ಹೃದಯಕ್ಕೆ ನಾಟಿದರು. ಕಾಜ಼ಿಯು ಕಣ್ಣೀರು ಹಾಕುತ್ತ ತನ್ನಲ್ಲಿದ್ದ ತಾನೊಂದು ಗಾಢವಾದ ಆಧ್ಯಾತ್ಮಿಕ ಪ್ರಭಾವಕ್ಕೊಳಗಾದ ಅನುಭವವನ್ನು ಹೊಂದಿದೆ ಹಾಗೂ ಇದು ತನ್ನ ಎಲ್ಲಾ ಸಂಶಯಗಳನ್ನು ನಿವಾರಿಸಿ ಅತ್ಯಾನಂದದ ಅನುಭೂತಿಯನ್ನು ನೀಡುವ ಒಂದು ಧಾರ್ಮಿಕ ಮನೋಭಾವವನ್ನು ತನ್ನಲ್ಲಿ ಉತ್ಪಾದಿಸಿತು ಎಂದು ಒಪ್ಪಿಕೊಂಡ . ತರುವಾಯ ಕಾಜ಼ಿಯು ಸಂಕೀರ್ತನೆಯಲ್ಲಿ ಸೇರಿಕೊಂಡ. ಇಡೀ ವಿಶ್ವವು ಭಗವಂತನ ಆಧ್ಯಾತ್ಮಿಕ ಶಕ್ತಿಯನ್ನು

ನೋಡಿ ಆಶ್ಚರ್ಯಚಕಿತವಾಯಿತು ಮತ್ತು ಈ ಘಟನೆಯ ನಂತರ ನೂರಾರು ಜನ ನಾಸ್ತಿಕರು ಪರಿವರ್ತನೆಗೊಂಡು ಮಹಾಪ್ರಭುಗಳ ಸಂಕೀರ್ತನೆಯನ್ನು ಸೇರಿಕೊಂಡರು.

ಈ ಘಟನೆಯ ನಂತರವೇ ಕುಲಿಯಾದ ಕೆಲ ದುರ್ಬುದ್ಧಿಯುಳ್ಳ ಮತ್ತು ಹೊಟ್ಟೆ ಕಿಚ್ಚು ಪಡುವ ಬ್ರಾಹ್ಮಣರು ಮಹಾಪ್ರಭುಗಳೊಂದಿಗೆ ವೈರತ್ವವನ್ನು ಬೆಳೆಸಿಕೊಂಡು ಅವರನ್ನು ವಿರೋಧಿಸಲು ಒಂದು ಗುಂಪನ್ನು ಕಟ್ಟಿಕೊಂಡರು.

## ಸಂನ್ಯಾಸ ಸ್ವೀಕಾರ

ಮಹಾಪ್ರಭುಗಳು ತಮ್ಮ ತತ್ತ್ವಗಳಲ್ಲಿ ಬಹಳ ಕಟ್ಟುನಿಟ್ಟಾಗಿದ್ದರೂ ಸ್ವಭಾವತಃ ಒಬ್ಬ ಮೃದು ಮನೋಭಾವದ ವ್ಯಕ್ತಿಯಾಗಿದ್ದರು. ಪಕ್ಷಾಭಿಮಾನ ಮತ್ತು ಮತಾಂಧತೆ ಆಧ್ಯಾತ್ಮಿಕ ಪ್ರಗತಿಯ ಎರಡು ದೊಡ್ಡ ಶತ್ರುಗಳು ಎಂದು ಅವರು ಘೋಷಿಸಿದರು. ಎಲ್ಲಿಯ ವರೆಗೆ ಅವರು ನದಿಯಾದ ಒಂದು ಮನೆತನಕ್ಕೆ ಸೇರಿದ ಒಬ್ಬ ನಿವಾಸಿಯಾಗಿರುವರೊ ಅಲ್ಲಿವರೆಗೆ ಅವರ ಧ್ಯೇಯವು ಪೂರ್ಣ ಯಶಸ್ಸನ್ನು ಕಾಣುವುದಿಲ್ಲವೆಂದು ಅವರು ತಿಳಿದಿದ್ದರು. ಹಾಗಾಗಿ ಒಂದು ನಿರ್ದಿಷ್ಟ ಮನೆತನದೊಂದಿಗಿನ ತಮ್ಮ ಸಂಬಂಧವನ್ನು ಕಡಿದು ಹಾಕಿ ಪ್ರಪಂಚದ ನಾಗರಿಕರಾಗಲು ನಿರ್ಧರಿಸಿದರು. ಈ ನಿರ್ಧಾರದೊಂದಿಗೆ ತಮ್ಮ ೨೪ನೇ ವಯಸ್ಸಿನಲ್ಲಿ ಕಟ್ವಾ ನಗರದ ಕೇಶವ ಭಾರತಿಗಳ ಮಾರ್ಗದರ್ಶನದಲ್ಲಿ ಸಂನ್ಯಾಸ ಸ್ವೀಕರಿಸಿದರು. ಅವರ ತಾಯಿ ಮತ್ತು ಪತ್ನಿ ವಿರಹದಲ್ಲಿ ಬಹಳ ದು:ಖಿತರಾಗಿ ಅತ್ತರೂ, ತತ್ತ್ವಪಾಲನೆಯಲ್ಲಿ ದೃಢ ವ್ಯಕ್ತಿಯಾಗಿದ್ದರೂ ಮಹಾಪ್ರಭುಗಳು ಮೃದು ಮನೋಭಾವದವರಾಗಿದ್ದರು. ಸಾಮಾನ್ಯ ಜನರಿಗೆ ಕೃಷ್ಣನ ಅಪರಿಮಿತ ಆಧ್ಯಾತ್ಮಿಕ ಜಗತ್ತನ್ನು ಪ್ರದಾನಿಸಲು ಮನೆಯನ್ನು ಬಿಟ್ಟು ಹೊರಟರು.

ತಮ್ಮ ಸಂನ್ಯಾಸ ಸ್ವೀಕಾರದ ನಂತರ ಶಾಂತಿಪುರದಲ್ಲಿನ ಅದ್ವೈತ ಪ್ರಭುಗಳ ಮನೆಗೆ ಭೇಟಿ ನೀಡಲು ಅವರ ಮನವೊಲಿಸಲಾಯಿತು. ಶ್ರೀ ಅದ್ವೈತ ಪ್ರಭುಗಳು ನದಿಯಾದ ಎಲ್ಲ ಸ್ನೇಹಿತರು ಮತ್ತು ಪ್ರಶಂಸಕರನ್ನು ಆಹ್ವಾನಿಸುವ ಕಾರ್ಯ ನಿರ್ವಹಿಸಿದಲ್ಲದೆ ಶಚಿದೇವಿಯವರನ್ನು ತನ್ನ ಮಗನನ್ನು ನೋಡಲು ಕರೆತಂದರು. ತನ್ನ ಮಗನನ್ನು ಸನ್ಯಾಸಿಯ ಉಡುಪಿನಲ್ಲಿ ನೋಡಿದಾಕ್ಷಣ ನೋವು ನಲಿವು ಎರಡೂ ಅವರ ಹೃದಯವನ್ನು ಆವರಿಸಿದವು. ಸಂನ್ಯಾಸಿಯಾಗಿ ಶ್ರೀ ಚೈತನ್ಯರು ಒಂದು ಕೌಪೀನ ಮತ್ತು ಬಹಿರ್ವಸ್ತ್ರವನ್ನು ಧರಿಸಿದ್ದರು. ಅವರ ತಲೆಯು ಕೇಶರಹಿತವಾಗಿತ್ತು ಮತ್ತು ಒಂದು ಕೈಯಲ್ಲಿ ಸಂನ್ಯಾಸ ದಂಡವನ್ನು ಮತ್ತೊಂದು ಕೈಯಲ್ಲಿ ಕಮಂಡಲವನ್ನು ಹಿಡಿದಿದ್ದರು. ತಮ್ಮ ತಾಯಿಯ ಪಾದಗಳಡಿಯಲ್ಲಿ ಬಿದ್ದು ಹೀಗೆಂದರು, ''ಮಾತೆಯೇ! ಈ ದೇಹವು ನಿನ್ನದು ಮತ್ತು ನಾನು ನಿನ್ನ ಆಜ್ಞೆಗಳನ್ನು ನೆರವೇರಿಸಬೇಕು. ನನ್ನ ಆಧ್ಯಾತ್ಮಿಕ ಪ್ರಾಪ್ತಿಗಳಿಗಾಗಿ ವೃಂದಾವನಕ್ಕೆ ಹೋಗಲು ಅನುಮತಿ ನೀಡು''. ಶಚಿ ಮಾತೆಯು ಅದ್ವೈತ ಪ್ರಭು ಮತ್ತು ಇನ್ನಿತರರೊಡನೆ ಸಮಾಲೋಚಿಸಿ, ಆಗಾಗ್ಗೆ ಮಗನ ಯೋಗಕ್ಷೇಮ ವಿಚಾರ ತಿಳಿಯಲು ತಮಗೆ ಅನುವಾಗುವಂತೆ, ತನ್ನ ಮಗನನ್ನು ಜಗನ್ನಾಥ ಪುರಿಯಲ್ಲಿ ನೆಲಸಲು ಕೋರಿದರು. ಮಹಾಪ್ರಭುಗಳು ಈ ಸಲಹೆಯನ್ನು ಒಪ್ಪಿಕೊಂಡು ಕೆಲವೇ ದಿನಗಳಲ್ಲಿ ಒರಿಸ್ಸಾಗೆ ತಲುಪಲು ಶಾಂತಿಪುರದಿಂದ ತೆರಳಿದರು.

ಶಾಂತಿಪುರದಿಂದ ಪುರಿಯವರೆಗಿನ ಶ್ರೀ ಕೃಷ್ಣ ಚೈತನ್ಯರ (ಸಂನ್ಯಾಸ ಸ್ವೀಕರಿಸಿದ ನಂತರ ಪಡೆದ ಹೆಸರು) ಪ್ರಯಾಣವನ್ನು ಅವರ ಜೀವನ ಚರಿತ್ರೆಯ ಲೇಖಕರು ಬಹಳ ವಿಸ್ತಾರವಾಗಿ

ವರ್ಣಿಸಿದ್ದಾರೆ. ಅವರು ಭಾಗೀರಥಿ ನದಿಯ ಉದ್ದಕ್ಕೂ ಬಂಗಾಲದ ೨೪ ಪರ್ಗನಸ್ ಜಿಲ್ಲೆಯ ಥಾನಾ ಮಥೂರಪುರದ, ಡೈಮಂಡ್ ಹಾರ್ಬರ್ ನಲ್ಲಿರುವ, ಛತ್ರಭೋಗ್ ವರೆಗೆ ಪ್ರಯಾಣಿಸಿದರು. ಅಲ್ಲಿ ಅವರು ಒಂದು ದೋಣಿಯ ಮೂಲಕ ಮಿದ್ನಾಪುರ ಜಿಲ್ಲೆಯಲ್ಲಿರುವ ಪ್ರಯಾಗ್ ಘಾಟ್ ವರೆಗೆ ಹೋದರು. ನಂತರ ಅವರು ದಾರಿಯಲ್ಲಿ ಭುವನೇಶ್ವರದಲ್ಲಿರುವ ದೇವಸ್ಥಾನವನ್ನು ನೋಡಿಕೊಂಡು ಬಲಸೋರ್ ಮತ್ತು ಕಟಕ್ ಮುಖಾಂತರ ಕಾಲ್ನಡಿಗೆಯಲ್ಲಿ ಶ್ರೀ ಧಾಮ ಪುರಿಯನ್ನು ತಲುಪಿದರು.

## ಪರಮ ಸತ್ಯದ ಸಾಕ್ಷಾತ್ಕಾರ

ಪುರಿಗೆ ಆಗಮಿಸಿದ ಚೈತನ್ಯ ಮಹಾಪ್ರಭುಗಳು ಜಗನ್ನಾಥನ ದರ್ಶನ ಮಾಡಿ ಸಾರ್ವಭೌಮ ಭಟ್ಟಾಚಾರ್ಯರ ಕೋರಿಕೆಯ ಮೇಲೆ ಅವರನ್ನು ಭೇಟಿಯಾಗಲು ಹೋದರು. ಸಾರ್ವಭೌಮರು ಅಂದಿನ ಕಾಲದ ದೊಡ್ಡ ವಿದ್ವಾಂಸರಾಗಿದ್ದರು. ಅವರ ಪಾಂಡಿತ್ಯಕ್ಕೆ ಮಿತಿಯೇ ಇರಲಿಲ್ಲ. ಅವರು ತಮ್ಮ ಕಾಲದ ಶ್ರೇಷ್ಠ ನೈಯಾಯಿಕರಾಗಿದ್ದರು (ತಾರ್ಕಿಕ) ಮತ್ತು ಶಂಕರ ಸಂಪ್ರದಾಯದ ವೇದಾಂತ ತತ್ವದ ಪ್ರಮುಖ ಪಂಡಿತರೆಂದು ಪ್ರಸಿದ್ಧರಾಗಿದ್ದರು. ಅವರು ನದಿಯಾದಲ್ಲಿ ಜನಿಸಿದ್ದು ತಮ್ಮ ಶಾಲೆಯಲ್ಲಿ ಅಸಂಖ್ಯಾತ ವಿದ್ಯಾರ್ಥಿಗಳಿಗೆ ನ್ಯಾಯ ಶಾಸ್ತ್ರವನ್ನು ಬೋಧಿಸುತ್ತಿದ್ದರು. ನಿಮಾಯ್ ಪಂಡಿತರ ಜನನದ ಸ್ವಲ್ಪ ಸಮಯದ ಮುಂಚಿತವಾಗಿಯೇ ಅವರು ಪುರಿಯಲ್ಲಿ ವಾಸವಾಗಲು ಹೋಗಿದ್ದರು.

ಅವರ ಹೆಂಡತಿಯ ಸಹೋದರನಾದ ಗೋಪಿನಾಥ ಮಿಶ್ರನು ಈ ಹೊಸ ಸಂನ್ಯಾಸಿಯನ್ನು ಸಾರ್ವಭೌಮರಿಗೆ ಪರಿಚಯಿಸಿದನು. ಸಾರ್ವಭೌಮರು ಅವರ ವೈಯಕ್ತಿಕ ಸೌಂದರ್ಯವನ್ನು ನೋಡಿ ಬೆರಗಾದರು ಮತ್ತು ಜೀವನ ಪೂರ್ತಿ ಸಂನ್ಯಾಸವನ್ನು ಪಾಲಿಸಲು ಕಿರಿಯ ಹುಡುಗನಿಗೆ ಕಷ್ಟವಾಗಬಹುದೆಂದು ಭಯಪಟ್ಟರು. ನದಿಯಾದಿಂದಲೇ ಮಹಾಪ್ರಭು ಯಾರೆಂದು ಅರಿತ ಗೋಪಿನಾಥರಿಗೆ ಅವರ ಮೇಲೆ ಬಹಳ ಗೌರವವಿತ್ತು ಮತ್ತು ಈ ಸಂನ್ಯಾಸಿಯು ಒಬ್ಬ ಸಾಮಾನ್ಯ ಮನುಷ್ಯನಲ್ಲ ಎಂದು ಸಾರ್ವಭೌಮರಿಗೆ ಅರುಹಿದರು. ಈ ವಿಷಯವಾಗಿ ಗೋಪಿನಾಥ ಮತ್ತು ಸಾರ್ವಭೌಮರ ಮಧ್ಯೆ ಉದ್ರಿಕ್ತವಾದ ಚರ್ಚೆಯುಂಟಾಯಿತು. ನಂತರ ಸಾರ್ವಭೌಮರು ವೇದಾಂತ ಸೂತ್ರದ ಪಾರಾಯಣವನ್ನು ಆಲಿಸಲು ಮಹಾಪ್ರಭುಗಳನ್ನು ಕೋರಿದರು ಮತ್ತು ಮಹಾಪ್ರಭುಗಳು ಮರುಮಾತನಾಡದೆ ಸಮ್ಮತಿಸಿದರು.

ಸಾರ್ವಭೌಮ ಮಹಾಶಯರು ಏಳು ದಿನಗಳವರೆಗೆ ಸತತವಾಗಿ ಮಾಡಿದ ವೇದಾಂತದ ಪಾರಾಯಣವನ್ನು ಶ್ರೀ ಚೈತನ್ಯರು ಮೌನವಾಗಿ ಆಲಿಸಿದರು. ಇದರ ಸಮಾಪ್ತಿಯ ನಂತರ ಸಾರ್ವಭೌಮರು ಹೀಗೆಂದು ಹೇಳಿದರು, ''ಕೃಷ್ಣ ಚೈತನ್ಯರೇ! ನನ್ನ ವೇದಾಂತದ ಪಾರಾಯಣವನ್ನು ಮತ್ತು ಅದರ ಮೇಲಿನ ನನ್ನ ವ್ಯಾಖ್ಯಾನವನ್ನು ಕೇಳಿ ನೀವು ಏನೂ ಮಾತನಾಡದೇ ಮೌನವಾಗಿರುವುದರಿಂದ ವೇದಾಂತದ ಬಗ್ಗೆ ನಿಮಗೆ ಏನೂ ಅರ್ಥವಾಗಿಲ್ಲವೆಂದು ನನಗೆ ಅನಿಸುತ್ತದೆ''. ಮಹಾಪ್ರಭುಗಳು ಅದಕ್ಕೆ ''ವೇದಾಂತ ಸೂತ್ರಗಳನ್ನು ನಾನು ಚೆನ್ನಾಗಿ ಅರ್ಥ ಮಾಡಿಕೊಂಡಿರುವೆನಾದರೂ, ಶಂಕರಾಚಾರ್ಯರು ತಮ್ಮ ವ್ಯಾಖ್ಯಾನಗಳ ಮೂಲಕ ಏನು ಹೇಳಬೇಕೆಂದಿರುವರೆಂಬುದನ್ನು ತಿಳಿಯಲಾಗಲಿಲ್ಲ'' ಎಂದು ಉತ್ತರಿಸಿದರು. ಆಶ್ಚರ್ಯಚಕಿತರಾಗಿ

ಸಾರ್ವಭೌಮರು ಹೀಗೆ ಹೇಳಿದರು, “ ಸೂತ್ರಗಳ ಅರ್ಥಗಳನ್ನು ಅರ್ಥಮಾಡಿಕೊಳ್ಳಬಲ್ಲೆ ಆದರೆ ಅವುಗಳನ್ನು ಸ್ಪಷ್ಟವಾಗಿ ವಿವರಿಸುವ ವ್ಯಾಖ್ಯಾನಗಳನ್ನು ಅರ್ಥಮಾಡಿಕೊಳ್ಳಲಿಲ್ಲ, ಇದು ಹೇಗೆ ಸಾಧ್ಯ? ಸರಿ ಹಾಗಾದರೆ ನೀವು ಸೂತ್ರಗಳನ್ನು ಅರ್ಥಮಾಡಿಕೊಂಡಿದ್ದರೆ ದಯಮಾಡಿ ನಿಮ್ಮ ವ್ಯಾಖ್ಯಾನವನ್ನು ನನಗೆ ವಿವರಿಸಿ”.

ಮಹಾಪ್ರಭು ಶಂಕರರ ಅದ್ವೈತ ವ್ಯಾಖ್ಯಾನವನ್ನು ಪ್ರಸ್ತಾಪಿಸದೇ ತಮ್ಮದೇ ಆದ ರೀತಿಯಲ್ಲಿ ಎಲ್ಲ ಸೂತ್ರಗಳನ್ನು ವಿವರಿಸಿದರು. ತಮ್ಮ ಚುರುಕಾದ ತಿಳುವಳಿಕೆಯಿಂದ, ಸಾರ್ವಭೌಮರು ಶ್ರೀ ಚೈತನ್ಯರು ನೀಡಿದ ವ್ಯಾಖ್ಯಾನಗಳಲ್ಲಿ ಸತ್ಯವನ್ನು, ಸೌಂದರ್ಯವನ್ನು ಮತ್ತು ಸಮನ್ವಯವನ್ನು ಕಂಡರು. ಬ್ರಹ್ಮ ಸೂತ್ರಗಳನ್ನು ಇಷ್ಟು ಸರಳವಾಗಿ ವಿವರಿಸಬಲ್ಲ ಒಬ್ಬ ವ್ಯಕ್ತಿಯನ್ನು ತಾನು ಕಂಡಿದ್ದು ಇದೇ ಮೊದಲ ಬಾರಿ ಎಂಬುದನ್ನು ಸಾರ್ವಭೌಮರು ಒಪ್ಪಿಕೊಳ್ಳಲೇಬೇಕಾಯಿತು. ಅಲ್ಲದೇ ಶಂಕರರ ವ್ಯಾಖ್ಯಾನಗಳು ಎಂದಿಗೂ ಮಹಾಪ್ರಭುಗಳು ನೀಡಿದ ವಿವರಣೆಗಳಂತಹ ಸ್ವಾಭಾವಿಕ ವಿವರಣೆಗಳನ್ನು ನೀಡಲಿಲ್ಲ ಎಂಬುದನ್ನು ಮನಗಂಡೆ ಎನ್ನುವುದನ್ನೂ ಕೂಡಾ ಒಪ್ಪಿಕೊಂಡರು. ನಂತರ ಅವರು ಮಹಾಪ್ರಭುಗಳ ಪ್ರತಿಪಾದಕ ಮತ್ತು ಅನುಯಾಯಿಯಾಗಿ ತಮ್ಮನ್ನು ತಾವು ಅರ್ಪಿಸಿಕೊಂಡರು. ಕೆಲವೇ ದಿನಗಳಲ್ಲಿ ಸಾರ್ವಭೌಮರು ಅಂದಿನ ಕಾಲದ ಅತಿ ಶ್ರೇಷ್ಠ ವೈಷ್ಣವರಾದರು. ಈ ಸಮಾಚಾರವು ಎಲ್ಲೆಡೆ ಹರಡುತ್ತಿದ್ದಂತೆ ಒರಿಸ್ಸಾದ ಜನರೆಲ್ಲರೂ ಶ್ರೀ ಕೃಷ್ಣ ಚೈತನ್ಯರ ಗುಣಗಾನ ಮಾಡಿದರು ಮತ್ತು ನೂರಾರು ಜನರು ಅವರ ಆಶ್ರಯವನ್ನರಸಿ ಬಂದು ಅವರ ಅನುಯಾಯಿಗಳಾದರು.

ಸ್ವಲ್ಪ ಸಮಯದ ನಂತರ ಮಹಾಪ್ರಭುಗಳು ಕೃಷ್ಣದಾಸ ಎಂಬ ಬ್ರಾಹ್ಮಣನೊಂದಿಗೆ ದಕ್ಷಿಣ ಭಾರತದೆಡೆ ಪ್ರಯಾಣ ಬೆಳೆಸಿದರು. ಅವರ ಜೀವನ ಚರಿತ್ರೆಯ ಲೇಖಕರು ಈ ಪ್ರಯಾಣದ ವಿವರಣೆಗಳನ್ನು ಹೀಗೆ ನೀಡಿದ್ದಾರೆ. ಮೊದಲು ಅವರು ಕೂರ್ಮಕ್ಷೇತ್ರಕ್ಕೆ ಹೋದರು, ಅಲ್ಲಿ ಅವರು ವಸುದೇವ ಎಂಬ ಒಬ್ಬ ಕುಷ್ಟರೋಗಿಯನ್ನು ಗುಣಪಡಿಸುವ ಒಂದು ಚಮತ್ಕಾರವನ್ನು ಪ್ರದರ್ಶಿಸಿದರು. ಅಲ್ಲಿಂದ ಮುಂದೆ ಅವರು ವಿದ್ಯಾನಗರದ ರಾಜ್ಯಪಾಲರಾದ ರಾಮಾನಂದ ರಾಯರನ್ನು ಗೋದಾವರಿ ನದಿ ತೀರದಲ್ಲಿ ಭೇಟಿಯಾಗಿ ಪ್ರೇಮ ಭಕ್ತಿಯ ವಿಷಯದ ಮೇಲೆ ತತ್ತ್ವ ಸಂಬಂಧಿತ ಚರ್ಚೆಯನ್ನು ನಡೆಸಿದರು. ಏಳು ತಾಳೆ ಮರಗಳನ್ನು ಸ್ಪರ್ಷಿಸಿ ಅವುಗಳನ್ನು ತಕ್ಷಣ ಮಾಯಮಾಡುವ ಇನ್ನೊಂದು ಚಮತ್ಕಾರವನ್ನು ಪ್ರದರ್ಶಿಸಿದರು. ಈ ಮರಗಳ ಮೂಲಕವೇ ಶ್ರೀ ರಾಮಚಂದ್ರನು ಬಾಣ ಹೊಡೆದು ಶಕ್ತಿಶಾಲಿ ರಾಜನಾದ ವಾಲಿಯನ್ನು ವಧಿಸಿದ್ದನು. ಮಹಾಪ್ರಭುಗಳು ತಮ್ಮ ಪ್ರಯಾಣದ ಉದ್ದಕ್ಕೂ ವೈಷ್ಣವ ಸಿದ್ಧಾಂತವನ್ನು ಮತ್ತು ನಾಮ ಸಂಕೀರ್ತನೆಯ ಮಹತ್ವವನ್ನು ಬೋಧಿಸಿದರು.

ಮಳೆಗಾಲದ ಸಮಯದಲ್ಲಿ ನಾಲ್ಕು ತಿಂಗಳ ಕಾಲ ಮಹಾಪ್ರಭುಗಳು ರಂಗಕ್ಷೇತ್ರದಲ್ಲಿ ವೆಂಕಟ ಭಟ್ಟ ಎಂಬವರ ಮನೆಯಲ್ಲಿ ವಾಸವಾಗಿದ್ದರು. ರಾಮಾನುಜ ಸಂಪ್ರದಾಯದ ವೈಷ್ಣವರಾಗಿದ್ದ ವೆಂಕಟ ಭಟ್ಟರ ಇಡೀ ಪರಿವಾರವನ್ನು ಅವರ ಹತ್ತು ವರುಷದ ಮಗನಾದ ಗೋಪಾಲನನ್ನೂ ಒಳಗೊಂಡು ಕೃಷ್ಣ ಭಕ್ತರನ್ನಾಗಿ ಪರಿವರ್ತಿಸಿದರು. ಗೋಪಾಲನು ಮುಂದೆ ವೃಂದಾವನಕ್ಕೆ ಬಂದು ಶ್ರೀ ಕೃಷ್ಣ ಚೈತನ್ಯರ ಆಶ್ರಯದಡಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಆರು ಗೋಸ್ವಾಮಿಗಳಲ್ಲಿ

ಒಬ್ಬರಾದರು. ತಮ್ಮ ಚಿಕ್ಕಪ್ಪರಾಗಿದ್ದ ಪ್ರಬೋಧಾನಂದ ಸರಸ್ವತಿಯವರಿಂದ ಸಂಸ್ಕೃತದಲ್ಲಿ ತರಬೇತಿ ಪಡೆದ ಗೋಪಾಲ ಭಟ್ಟರು ವೈಷ್ಣವ ತತ್ವದ ಮೇಲೆ ಅನೇಕ ಪುಸ್ತಕಗಳನ್ನು ಬರೆದರು.

ಶ್ರೀ ಚೈತನ್ಯರು ದಕ್ಷಿಣ ಭಾರತದ ಕನ್ಯಾಕುಮಾರಿಯವರೆಗೆ ಅನೇಕ ಸ್ಥಳಗಳಿಗೆ ಭೇಟಿ ನೀಡಿದ್ದು ನಂತರ ಎರಡು ವರುಷದಲ್ಲಿ ಭೀಮಾ ನದಿ ತೀರದ ಮೇಲಿರುವ ಪಂಢರಾಪುರದ ಮೂಲಕ ಜಗನ್ನಾಥ ಪುರಿಗೆ ಹಿಂದಿರುಗಿದರು. ಪಂಢರಾಪುರದಲ್ಲಿ ತುಕಾರಾಮನನ್ನು ವೈಷ್ಣವನನ್ನಾಗಿ ಪರಿವರ್ತಿಸಿದರು. ಅಂದಿನಿಂದ ತುಕಾರಾಮ ಒಬ್ಬ ವೈಷ್ಣವಧರ್ಮ ಪ್ರಚಾರಕರಾದರು. (ಈ ಸಂಗತಿಯನ್ನು ಮುಂಬೈ ಸರಕಾರಿ ಸೇವೆಯ ಸತ್ಯೇಂದ್ರ ನಾಥ ಠಾಗೋರ್ ಎಂಬುವವರು ಸಂಗ್ರಹಿಸಿರುವ ತುಕಾರಾಮನ ಅಭಂಗಗಳಲ್ಲಿ ದಾಖಲಿಸಲಾಗಿದೆ) ಅಲ್ಲದೇ ಅವರ ಪ್ರಯಾಣದ ಉದ್ದಕ್ಕೂ ಬೌದ್ಧರು, ಜೈನರು ಮತ್ತು ಮಾಯಾವಾದಿಗಳೊಡನೆ ಚರ್ಚೆ ನಡೆಸುತ್ತ ತಮ್ಮ ಎದುರಾಳಿಗಳೆಲ್ಲರನ್ನು ವೈಷ್ಣವರನ್ನಾಗಿ ಪರಿವರ್ತಿಸಿದರು. ಅವರು ಪುರಿಗೆ ಹಿಂದಿರುಗಿದ ನಂತರ ರಾಜನಾದ ಪ್ರತಾಪರುದ್ರ ಮತ್ತು ಇನ್ನೂ ಅನೇಕ ಜನ ಬ್ರಾಹ್ಮಣ ಪಂಡಿತರು ಶ್ರೀ ಚೈತನ್ಯ ಮಹಾಪ್ರಭುಗಳ ಸಂಕೀರ್ತನೆಯ ಮಹಾಧ್ವಜದಡಿಗೆ ಸೇರಿಕೊಂಡರು.

## ಅವರ ಉನ್ನತ ಸೇವಕರು

ಅವರ ೨೮ ನೇ ವರುಷ ವಯಸ್ಸಿನಲ್ಲಿ ಬಹು ದೂರದ ಬಂಗಾಳದ ಮಲ್ದಾಹದಲ್ಲಿರುವ ಗೌಡದೇಶಕ್ಕೆ ತೆರಳಿದರು. ಅಲ್ಲಿ ಅವರು ಇಬ್ಬರು ಮಹಾನ್ ವ್ಯಕ್ತಿಗಳಾದ ರೂಪ ಮತ್ತು ಸನಾತನ ಎಂಬುವವರನ್ನು ಭೇಟಿಯಾದರು. ಕರ್ನಾಟಕ ಬ್ರಾಹ್ಮಣರ ಪರಂಪರೆಯಿಂದ ಬಂದಿದ್ದರೂ ಈ ಇಬ್ಬರು ಸಹೋದರರು ಗೌಡದೇಶದ ಸಾಮ್ರಾಟನಾದ ಹುಸೈನ್ ಶಾ ನೊಂದಿಗಿನ ಸತತ ಸಹವಾಸದಿಂದ ಮುಸಲ್ಮಾನರಾಗಿ ಪರಿಗಣಿಸಲ್ಪಡುತ್ತಿದ್ದರು. ಅವರ ಹೆಸರುಗಳನ್ನು ಸಾಮ್ರಾಟನು ದಬೀರ್ ಖಾಸ್ ಮತ್ತು ಸಕಾರ್ ಮಲ್ಲಿಕ್ ಎಂದು ಬದಲಾಯಿಸಿದ್ದನು ಮತ್ತು ಅವರಿಬ್ಬರೂ ಪಾರ್ಸಿ, ಅರಬ್ಬೀ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪರಿಣತರಾಗಿದ್ದು ರಾಜ್ಯದ ನಿಷ್ಠಾವಂತ ಸೇವಕರಾಗಿದ್ದ ಕಾರಣ ಸಾಮ್ರಾಟನು ಅವರಿಬ್ಬರನ್ನು ಬಹಳ ಪ್ರೀತಿಸುತ್ತಿದ್ದನು. ಅವರಿಬ್ಬರಿಗೂ ಹಿಂದೂಧರ್ಮಕ್ಕೆ (ವೈಷ್ಣವ ಧರ್ಮಕ್ಕೆ)ಹಿಂದಿರುಗುವ ಯಾವ ಮಾರ್ಗವು ತೋರದೆ ಮಹಾಪ್ರಭುಗಳು ಪುರಿಯಲ್ಲಿದ್ದ ಸಮಯದಲ್ಲಿ ಆಧ್ಯಾತ್ಮಿಕ ಸಹಾಯವನ್ನು ಕೋರಿ ಅವರಿಗೆ ಪತ್ರವನ್ನು ಬರೆದಿದ್ದರು. ಮಹಾಪ್ರಭುಗಳು ಅವರಲ್ಲಿ ಬಂದು ಅವರಿಗಿರುವ ಆಧ್ಯಾತ್ಮಿಕ ತೊಂದರೆಗಳಿಂದ ಬಿಡುಗಡೆ ಮಾಡುವುದಾಗಿ ಪ್ರತ್ಯುತ್ತರ ನೀಡಿದ್ದರು. ಈಗ ಅವರು ಗೌಡ ದೇಶಕ್ಕೆ ಬಂದಿರುವ ಸಮಯದಲ್ಲಿ ಇಬ್ಬರೂ ಸಹೋದರರು ತಮ್ಮ ದೀರ್ಘಕಾಲದ ಪ್ರಾರ್ಥನೆಯೊಂದಿಗೆ ಅವರ ಎದುರು ಬಂದು ನಿಂತರು. ಮಾಹಾಪ್ರಭುಗಳು ಅವರನ್ನು ವೃಂದಾವನದಲ್ಲಿ ಭೇಟಿ ಮಾಡುವುದಾಗಿ ಅವರಿಬ್ಬರನ್ನು ವೃಂದಾವನಕ್ಕೆ ತೆರಳಲು ಆಜ್ಞಾಪಿಸಿದರು.

ಶ್ರೀ ಚೈತನ್ಯರು ಶಾಂತಿಪುರದ ಮೂಲಕ ಪುರಿಗೆ ಹಿಂದಿರುಗಿದರು. ಇಲ್ಲಿ ಅವರು ಪುನಃ ತಮ್ಮ ಪ್ರೀತಿಯ ತಾಯಿಯನ್ನು ಭೇಟಿ ಮಾಡಿದರು. ಪುರಿಯಲ್ಲಿ ಸ್ವಲ್ಪ ಕಾಲವಿದ್ದು ವೃಂದಾವನಕ್ಕೆ ತೆರಳಿದರು. ಈ ಬಾರಿ ಬಲಭದ್ರ ಭಟ್ಟಾಚಾರ್ಯನೆಂಬ ಒಬ್ಬ ಭಕ್ತನು ಅವರ ಸಂಗಡ ಹೊರಟನು. ಅವರು ವೃಂದಾವನಕ್ಕೆ ಭೇಟಿ ನೀಡುತ್ತ ಪ್ರಯಾಗ(ಈಗಿನ ಅಲಹಬಾದ್) ಕ್ಕೆ ಬಂದರು.

ಅಲ್ಲಿ ಅವರು ಕುರಾನ್ ಗ್ರಂಥದ ತರ್ಕಗಳನ್ನು ಮಂಡಿಸುತ್ತಾ ಅನೇಕ ಜನ ಮುಸಲ್ಮಾನರನ್ನು ವೈಷ್ಣವರನ್ನಾಗಿ ಪರಿವರ್ತಿಸಿದರು. ಈ ಪರಿವರ್ತಿತರ ಸಂತತಿಯನ್ನು ಈಗಲೂ ಪಠಾಣ್ ವೈಷ್ಣವರೆಂದು ಕರೆಯುತ್ತಾರೆ. ಅಲಹಾಬಾದ್ ನಲ್ಲಿ ರೂಪ ಗೋಸ್ವಾಮಿಗಳು ಶ್ರೀ ಚೈತನ್ಯರನ್ನು ಭೇಟಿ ಮಾಡಿದ್ದು ಶ್ರೀ ಚೈತನ್ಯರು ಅವರಿಗೆ ಆಧ್ಯಾತ್ಮಿಕ ವಿಷಯವಾಗಿ ಹತ್ತು ದಿನಗಳ ಕಾಲ ಬೋಧಿಸಿ ಧರ್ಮ ಪ್ರಚಾರ ಕಾರ್ಯಕ್ಕಾಗಿ ವೃಂದಾವನಕ್ಕೆ ಹೋಗಲು ಆಜ್ಞಾಪಿಸಿದರು. ಶುದ್ಧ ಭಕ್ತಿ ಮತ್ತು ಪ್ರೇಮವನ್ನು ವೈಜ್ಞಾನಿಕವಾಗಿ ವಿವರಿಸುವಂತಹ ಧಾರ್ಮಿಕ ಪುಸ್ತಕಗಳನ್ನು ಬರೆಯುವುದು ಅವರ ಮೊದಲ ಕಾರ್ಯವಾಗಿತ್ತು. ದ್ವಾಪರಯುಗದ ಅಂತ್ಯದಲ್ಲಿ ಪ್ರಪಂಚದ ಒಳಿತಿಗಾಗಿ ಶ್ರೀ ಕೃಷ್ಣ ಚಂದ್ರನು ಮೆರೆದ ಲೀಲೆಗಳ ಸ್ಥಳಗಳನ್ನು ಪುನರುಜ್ಜೀವನಗೊಳಿಸುವುದು ಅವರ ಎರಡನೆಯ ಕಾರ್ಯವಾಗಿತ್ತು.

ರೂಪ ಗೋಸ್ವಾಮಿಗಳು ಅಲಹಾಬಾದನ್ನು ಬಿಟ್ಟು ವೃಂದಾವನಕ್ಕೆ ತೆರಳಿದ ನಂತರ ಮಹಾಪ್ರಭುಗಳು ವಾರಣಾಸಿಗೆ ಹೋದರು. ಅಲ್ಲಿ ಅವರು ಚಂದ್ರಶೇಖರರ ಮನೆಯಲ್ಲಿ ವಾಸವಿದ್ದು ತಪನ ಮಿಶ್ರರ ಮನೆಯಿಂದ ತಮ್ಮ ದೈನಂದಿನ ಭಿಕ್ಷೆಯನ್ನು ಸ್ವೀಕರಿಸುತ್ತಿದ್ದರು. ಇದೇ ಸ್ಥಳದಲ್ಲೇ ಸನಾತನ ಗೋಸ್ವಾಮಿಗಳು ಮಹಾಪ್ರಭುಗಳನ್ನು ಆಶ್ರಯಿಸಿ ಎರಡು ತಿಂಗಳುಗಳ ಕಾಲ ಆಧ್ಯಾತ್ಮಿಕ ವಿಷಯ ಕುರಿತು ಉಪದೇಶಗಳನ್ನು ಪಡೆದರು.

ಮಹಾಪ್ರಭುಗಳ ಜೀವನ ಚರಿತ್ರೆಯ ಲೇಖಕರಲ್ಲಿ, ವಿಶೇಷವಾಗಿ ಕೃಷ್ಣದಾಸ ಕವಿರಾಜ ಗೋಸ್ವಾಮಿಗಳು ರೂಪ ಮತ್ತು ಸನಾತನರಿಗೆ ದೊರೆತ ಶ್ರೀ ಚೈತನ್ಯರ ಬೋಧನೆಗಳ ವಿವರಗಳನ್ನು ನೀಡಿದ್ದಾರೆ. ಕೃಷ್ಣದಾಸ ಕವಿರಾಜರು ಸಮಕಾಲೀನ ಬರಹಗಾರರಾಗಿಲ್ಲದಿದ್ದರೂ ಅವರು ಮಹಾಪ್ರಭುಗಳ ನೇರ ಶಿಷ್ಯರುಗಳಾದ ಗೋಸ್ವಾಮಿಗಳವರಿಂದ ವಿಷಯಗಳನ್ನು ಸಂಗ್ರಹಿಸಿದರು. ಷಟ್ ಸಂದರ್ಭದಂತಹ ಅಮೂಲ್ಯವಾದ ಕೃತಿಯನ್ನು ನಮಗೆ ಬಿಟ್ಟು ಹೋಗಿರುವ ರೂಪ ಮತ್ತು ಸನಾತನರ ಸೋದರಳಿಯರಾದ ಜೀವ ಗೋಸ್ವಾಮಿಗಳು ತಮ್ಮ ನಾಯಕರಾದ ಶ್ರೀ ಚೈತನ್ಯರ ಬೋಧನೆಗಳಮೇಲೆ ಸೈದ್ಧಾಂತಿಕ ನಿರೂಪಣೆಗಳನ್ನು ನೀಡಿದ್ದಾರೆ. ಅಂತಹ ಮಹಾನ್ ಬರಹಗಾರರ ಪುಸ್ತಕಗಳಿಂದ ಶ್ರೀ ಚೈತನ್ಯರ ಬೋಧನೆಗಳನ್ನು ಸಂಗ್ರಹಿಸಿ ಸಾರವತ್ತಾಗಿ ಸಂಕ್ಷಿಪ್ತಗೊಳಿಸಲಾಗಿದೆ.

ವಾರಾಣಾಸಿಯಲ್ಲಿರುವಾಗ ಶ್ರೀ ಚೈತನ್ಯರು ಒಬ್ಬ ಮಾಹಾರಾಷ್ಟ್ರ ಬ್ರಾಹ್ಮಣನು ತನ್ನ ಮನೆಗೆ ಚರ್ಚೆಗೆಂದು ಆಹ್ವಾನಿಸಿದ್ದ ನಗರದ ಎಲ್ಲ ಸುಶಿಕ್ಷಿತ ಸನ್ಯಾಸಿಗಳೊಡನೆ ಸಂದರ್ಶನ ನಡೆಸಿದರು. ಈ ಸಂದರ್ಶನದಲ್ಲಿ ಮಹಾಪ್ರಭುಗಳು ತಮ್ಮ ಆಧ್ಯಾತ್ಮಿಕ ಶೋಭೆಯನ್ನು ತೋರಿ ಎಲ್ಲ ಸನ್ಯಾಸಿಗಳನ್ನು ತಮ್ಮೆಡೆಗೆ ಆಕರ್ಷಿಸಿದದರು. ನಂತರ ಆ ಸನ್ಯಾಸಿಗಳ ಗುಂಪಲ್ಲಿ ಅವರ ಮುಖ್ಯಸ್ಥರಾಗಿದ್ದ ಶ್ರೇಷ್ಠ ವಿದ್ವಾಂಸರಾದ ಪ್ರಕಾಶನಂದ ಸರಸ್ವತಿಗಳೊಡನೆ ಒಂದು ಪರಸ್ಪರ ಸಂಭಾಷಣೆ ನಡೆದು, ಒಂದು ಸಣ್ಣ ವಾಗ್ವಾದದ ನಂತರ, ಶಂಕರಾಚಾರ್ಯರ ವ್ಯಾಖ್ಯಾನಗಳಿಂದ ದಾರಿತಪ್ಪಿದ್ದೆವು ಎಂದು ಒಪ್ಪಿಕೊಳ್ಳುತ್ತ ತನ್ನ ಎಲ್ಲಾ ಶಿಷ್ಯರೊಂದಿಗೆ ಶ್ರೀ ಚೈತನ್ಯರಿಗೆ ಶರಣಾದರು. ಎಲ್ಲರ ಹೃದಯ ನಾಟುವಂತಹ ಮತ್ತು ಎಲ್ಲರನ್ನು ತಮ್ಮ ಆಧ್ಯಾತ್ಮಿಕ ಏಳಿಗೆಗೆ ಹಾತೊರೆಯುವಂತೆ ಮಾಡುವ ಏನೋ ಒಂದು ವೈಶಿಷ್ಟ್ಯತೆ ಶ್ರೀ ಚೈತನ್ಯರಲ್ಲಿದ್ದ ಕಾರಣ ಎಂತೆಂತಹ ನುರಿತ ವಿದ್ವಾಂಸರುಗಳು

ಕೂಡಾ ಅವರನ್ನು ಎದುರಿಸಲು ಸಾಧ್ಯವಾಗುತ್ತಿರಲಿಲ್ಲ. ವಾರಾಣಾಸಿಯ ಸನ್ಯಾಸಿಗಳು ಶೀಘ್ರವೇ ಶ್ರೀ ಚೈತನ್ಯರಿಗೆ ಶರಣಾಗಿ ಅವರ ಕೃಪೆಯನ್ನು ಬೇಡಿದರು. ನಂತರ ಶ್ರೀ ಚೈತನ್ಯರು ಶುದ್ಧ ಭಕ್ತಿಯನ್ನು ಬೋಧಿಸುತ್ತ ಮತಾಂಧ ಭಾವನೆಗಳನ್ನು ತ್ಯಜಿಸುವಂತೆ ಮಾಡುವ ಕೃಷ್ಣ ಪ್ರೇಮವನ್ನು ಎಲ್ಲರಲ್ಲಿ ಉತ್ತೇಜಿಸಿದರು. ಎಲ್ಲ ಸನ್ಯಾಸಿಗಳ ಇಂತಹ ಅದ್ಭುತ ಪರಿವರ್ತನೆಯೊಂದಿಗೆ ಇಡೀ ವಾರಾಣಾಸಿಯ ನಿವಾಸಿಗಳು ವೈಷ್ಣವರಾದರು ಮತ್ತು ಶ್ರೀ ಚೈತನ್ಯರೊಂದಿಗೆ ಎಲ್ಲರು ಸಂಕೀರ್ತನೆಯಲ್ಲಿ ಪಾಲ್ಗೊಂಡರು.

ಸನಾತನ ಗೋಸ್ವಾಮಿಗಳನ್ನು ವೃಂದಾವನಕ್ಕೆ ಕಳುಹಿಸಿದ ನಂತರ ಮಹಾಪ್ರಭುಗಳು ತಮ್ಮ ಜೊತೆಗಾರನಾದ ಬಲಭದ್ರನೊಂದಿಗೆ ಕಾಡಿನ ಮೂಲಕ ಪುನಃ ಪುರಿಗೆ ಹೊರಟರು. ಶ್ರೀಕೃಷ್ಣನ ದಿವ್ಯನಾಮಗಳನ್ನು ತಮ್ಮ ಮುಖಾರವಿಂದದಿಂದ ಕೇಳಿದಾಕ್ಷಣ ಹುಲಿಗಳು ಹಾಗೂ ಆನೆಗಳೊಂದಿಗೆ ಎಲ್ಲ ವನ್ಯ ಪ್ರಾಣಿಗಳು ನರ್ತಿಸಲು ಪ್ರಾರಂಭಿಸಿದಂತಹ ಅನೇಕ ಇತರ ಚಮತ್ಕಾರಗಳನ್ನು ಪುರಿಗೆ ಹೋಗುವ ದಾರಿಯಲ್ಲಿ ಮಹಾಪ್ರಭುಗಳು ಪ್ರದರ್ಶಿಸಿದರೆಂದು ಬಲಭದ್ರರ ವರದಿಯು ತಿಳಿಸುತ್ತದೆ.


ಮಹಾಪ್ರಭುಗಳು ತಮ್ಮ ೩೧ನೇ ವರುಷ ವಯಸ್ಸಿನಿಂದ ೪೮ನೇ ವಯಸ್ಸಿನವರೆಗೆ ಅಂದರೆ ತೋಟ ಗೋಪಿನಾಥ ದೇವಾಲಯದಲ್ಲಿ ಸಂಕೀರ್ತನೆ ಮಾಡುವ ಸಂದರ್ಭದಲ್ಲಿ ತಮ್ಮ ತಿರೋಭಾವಸಂಭವಿಸಿದ ವರೆಗೆ ಸತತವಾಗಿ ಪುರಿಯಲ್ಲಿನ ಕಾಶಿ ಮಿಶ್ರರ ಮನೆಯಲ್ಲಿ ವಾಸವಾಗಿದ್ದರು. ಈ ಹದಿನೆಂಟು ವರುಷಗಳು ಅವರ ಜೀವನವು ಒಂದು ನಿರ್ಧಾರಿತ ಪ್ರೀತಿ ಮತ್ತು ಭಕ್ತಿಯದ್ದಾಗಿತ್ತು. ತಮ್ಮ ನಡತೆ ಮತ್ತು ಪಾಂಡಿತ್ಯ, ದೃಢ ಧಾರ್ಮಿಕ ತತ್ವಗಳು ಮತ್ತು ರಾಧಾ ಕೃಷ್ಣರಿಗೆ ತಮ್ಮ ಆಧ್ಯಾತ್ಮಿಕ ಪ್ರೇಮ ಇವೆಲ್ಲವುಗಳಿಂದ ಗುರುತಿಸ್ಪಡುವ ಅನೇಕ ಜನ ವೈಷ್ಣವ ಅನುಯಾಯಿಗಳಿಂದ ಅವರು ಸುತ್ತುವರೆದಿದ್ದರು.

ಮಹಾಪ್ರಭುಗಳು ನದಿಯಾದಲ್ಲಿದ್ದ ಸಮಯದಲ್ಲಿ ಪುರುಷೋತ್ತಮಚಾರ್ಯರೆಂದು ಪ್ರಸಿದ್ಧರಾಗಿದ್ದ ಸ್ವರೂಪ ದಾಮೋದರರು ವಾರಾಣಾಸಿಯಲ್ಲಿ ಅವರ ಜೊತೆಗೂಡಿ ಅವರ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸತೊಡಗಿದರು. ಸ್ವರೂಪ ದಾಮೋದರರು ಶುದ್ಧ ಮತ್ತು ಉಪಯುಕ್ತವೆಂದು ಪರಿಗಣಿಸಿದ ಹೊರತು ಯಾವದೇ ಕವಿಯ ಅಥವಾ ತತ್ತ್ವಜ್ಞಾನಿಯ ಕೃತಿಗಳು ಮಹಾಪ್ರಭುಗಳ ಮುಂದೆ ಮಡಿಸಲ್ಪಡುತ್ತಿರಲಿಲ್ಲ. ಸ್ವರೂಪ ದಾಮೋದರರ ನಂತರ ರಾಮನಂದ ರಾಯರು ಅವರ ಆಪ್ತ ಸೇವಕರಲ್ಲಿ ಎರಡನೆಯವರಾಗಿದ್ದರು. ಒಂದು ನಿರ್ದಿಷ್ಟ ಹಂತದಲ್ಲಿ ಮಹಾಪ್ರಭುಗಳು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದಾಗ ಸ್ವರೂಪ ದಾಮೋದರ ಮತ್ತು ರಾಮನಂದ ರಾಯರು ಹಾಡುತ್ತಿದ್ದರು. ಪರಮಾನಂದ ಪುರಿಗಳು ಅವರ ಧಾರ್ಮಿಕ ಮಂತ್ರಿಗಳಾಗಿದ್ದರು.

ಮಹಾಪ್ರಭು ಬಹು ಅಲ್ಪ ಸಮಯ ನಿದ್ರಿಸುತ್ತಿದ್ದರು. ಅವರ ಭಾವನೆಗಳು ಅವರನ್ನು ಪ್ರತಿ ಹಗಲು ಮತ್ತು ರಾತ್ರಿ ಆಧ್ಯಾತ್ಮಿಕತೆಯ ಅಂತರಿಕ್ಷದೊಳಗೆ ಮುಂದಮುಂದಕ್ಕೆ ಕರೆದೊಯ್ಯುತ್ತಿದ್ದವು. ಅವರ ಎಲ್ಲ ಅನುಯಾಯಿಗಳು ಮತ್ತು ಪ್ರಶಂಸಕರು ಅವರನ್ನು ದಿನರಾತ್ರಿಯಿಡೀ ಪರಾಂಬರಿಸುತ್ತಿದ್ದರು. ವೃಂದಾವನದಲ್ಲಿನ ತಮ್ಮ ಧರ್ಮ ಪ್ರಚಾರಕರೊಡನೆ ಅವರು ಪೂಜಿಸುತ್ತಿದ್ದರು ಮತ್ತು ಸಂಪರ್ಕಿಸುತ್ತಿದ್ದರು, ತಮ್ಮನ್ನು ಮೊದಲನೆಯ ಬಾರಿ ನೋಡಲು ಬಂದ ಧಾರ್ಮಿಕ ಜನಗಳೊಡನೆ

ಸಂಭಾಷಿಸುತ್ತಿದ್ದರು. ಅವರು ತಮ್ಮ ಯೋಗಕ್ಷೇಮದ ಬಗ್ಗೆ ಕಿಂಚಿತ್ತೂ ಯೋಚಿಸದೆ ಹಾಡುತ್ತ ಕುಣಿಯುತ್ತಾ ಹಲವು ಬಾರಿ ಭಕ್ತಿಯ ದಿವ್ಯಾನಂದದಲ್ಲಿ ಮೈಮರೆಯುತ್ತಿದ್ದರು. ಅವರನ್ನು ನೋಡಲು ಬಂದವರೆಲ್ಲ ಅವರನ್ನು ಮಾನವ ಜನಾಂಗದ ಒಳಿತಿಗಾಗಿ ಆವಿರ್ಭವಿಸಿರುವ ಸರ್ವಾಂಗಸುಂದರನಾದ ಭಗವಂತನಾಗಿ ಕಾಣುತ್ತಿದ್ದರು. ಈ ಎಲ್ಲ ಸ್ಥಿತಿಯಲ್ಲೂ ಅವರು ತಮ್ಮ ಪ್ರೀತಿಯ ತಾಯಿಯನ್ನು ನೆನೆಸುತ್ತಿದ್ದು ಆಗಾಗ್ಗೆ ನದಿಯಾಗೆ ಹೋಗುವವರ ಜೊತೆ ಭಗವಂತನ ಮಹಾಪ್ರಸಾದವನ್ನು ಕಳುಹಿಸಿಕೊಡುತ್ತಿದ್ದರು. ಅವರು ಮಧುರ ಸ್ವಭಾವದವರಾದ ಕಾರಣ ನಮ್ರತೆಯೇ ಮೂರ್ತಿವೆತ್ತಂತಿದ್ದರು ಮತ್ತು ಅವರೊಂದಿಗಿನ ಸಂಪರ್ಕಕ್ಕೆ ಬಂದವರಿಗೆಲ್ಲ ಅವರ ಮಧುರ ದರುಶನವು ಆನಂದವನ್ನು ನೀಡುತ್ತಿತ್ತು.

ಶ್ರೀ ಚೈತನ್ಯರು ನಿತ್ಯಾನಂದ ಪ್ರಭುಗಳನ್ನು ಬಂಗಾಲದ ಧರ್ಮ ಪ್ರಚಾರಕ ಪ್ರಮುಖರಾಗಿ ನೇಮಿಸಿದರು. ವೃಂದಾವನದ ಒಳಪ್ರದೇಶದಲ್ಲಿ ಪ್ರಚಾರ ಮಾಡಲು ಅವರು ತಮ್ಮ ಆರು ಜನ ಶಿಷ್ಯರನ್ನು (ಗೋಸ್ವಾಮಿಗಳು) ಕಳುಹಿಸಿದರು. ಸದ್ಧರ್ಮಶೀಲ ಮಾರ್ಗದಿಂದ ವಿಮುಖರಾದ ತಮ್ಮ ಎಲ್ಲ ಶಿಷ್ಯರುಗಳನ್ನವರು ಶಿಕ್ಷಿಸುತ್ತಿದ್ದರು. ಕಿರಿಯ ಹರಿದಾಸನ ವಿಷಯದಲ್ಲಿ ಇದನ್ನು ಸ್ಪಷ್ಟವಾಗಿ ಮಾಡಿ ತೋರಿಸಿದರು. ಅವರ ಆಶ್ರಯವನ್ನು ಕೋರಿ ಬಂದವರಿಗೆಲ್ಲರಿಗೂ ಎಂದಿಗೂ ಸರಿಯಾದ ಮಾರ್ಗದರ್ಶನ ನೀಡದೆ ಇರುತ್ತಿರಲಿಲ್ಲ. ಇದನ್ನು ರಘುನಾಥದಾಸ ಗೋಸ್ವಾಮಿಗಳಿಗೆ ನೀಡಿದ ಬೋಧನೆಗಳಲ್ಲಿ ಕಾಣಬಹುದು. ಸಂತರನ್ನು ಎಷ್ಟು ಪ್ರೀತಿಸುತ್ತಿದ್ದರು ಮತ್ತು ಆಧ್ಯಾತ್ಮಿಕ ಭ್ರಾತೃತ್ವದ ಚಹರೆಯೊಂದಿಗೆ ಮತಭೇದವನ್ನು ತಿರಸ್ಕರಿಸಿದ ನಿದರ್ಶನವನ್ನು ಅವರು ಹರಿದಾಸ (ಹಿರಿಯ) ಠಾಕೂರರಿಗೆ ತೋರಿದ ಉಪಚಾರದಲ್ಲಿ ಕಾಣಬಹುದು.



ಭಾಗ ಎರಡು

# ಶ್ರೀ ಚೈತನ್ಯ ಮಹಾಪ್ರಭುಗಳ ಬೋಧನೆಗಳು

ಶ್ರೀ ಚೈತನ್ಯರು, ಮೊದಲನೆಯದಾಗಿ, ಮಾನವನ ತರ್ಕಬದ್ಧ ವೈಚಾರಿಕ ಮನೋಭಾವವು ಆತ್ಮನ ದಿವ್ಯ ನೆಲೆಯನ್ನು ಸಮೀಪಿಸುವ ಸಾಮರ್ಥ್ಯವನ್ನು ಹೊಂದಿಲ್ಲ ಎಂದು ಬೋಧಿಸುತ್ತಾರೆ. ಅಂತಹ ಅಲೌಕಿಕ ವಿಷಯಗಳನ್ನು ಗ್ರಹಿಸುವ ಅರ್ಹತೆಯು ತಾರ್ಕಿಕತೆಗೆ ಇರುವುದಿಲ್ಲ ಎಂದು ಅವರು ಪರಿಗಣಿಸುತ್ತಾರೆ. ಆದಾಗ್ಯೂ, ಅತಿ ಕಡಿಮೆ ಪ್ರಮಾಣದ್ದಾದರೂ, ಮಾನವರಲ್ಲಿರುವ ಧಾರ್ಮಿಕ ಮನೋಭಾವನೆಯು ಆತ್ಮವನ್ನು ಗ್ರಹಿಸಲು ಶಕ್ತವಾಗಿರುತ್ತದೆಂದು ಅವರು ಪರಿಗಣಿಸುತ್ತಾರೆ. ಪ್ರೇರಣೆಯೊಂದೇ ಆಧ್ಯಾತ್ಮಿಕ ವಿಷಯಗಳಮೇಲೆ ಬೆಳಕನ್ನು ಚೆಲ್ಲಬಲ್ಲುದು. ಶುದ್ಧ ಭಕ್ತರ ಮೂಲಕ ಉನ್ನತ ನೆಲೆಯಿಂದ ಕೆಳಗೆ ಹರಿದು ಬರುವ ಪ್ರೇರಣೆಯು ವೇದಗಳ ರೂಪದಲ್ಲಿ ಪ್ರಕಟವಾಗಿದೆ. ಹಾಗಾಗಿ, ವೇದಗಳು, ಜೊತೆಗೆ ಅವುಗಳ ವ್ಯಾಖ್ಯಾತ್ಮಕ ಟಿಪ್ಪಣಿಗಳಾದ ಪುರಾಣಗಳು ಆತ್ಮದ ವಿಚಾರದಲ್ಲಿ ಏಕಮಾತ್ರ ಪ್ರಮಾಣವಾಗಿದ್ದು ಅವುಗಳ ಸ್ವಭಾವವು ನಿತ್ಯವಾಗಿರುತ್ತದೆ. ಆದ್ದರಿಂದ, ಉನ್ನತ ವಿಷಯಗಳ ಬಗ್ಗೆ ವೈದಿಕ ಸತ್ಯಗಳನ್ನು ಏಕೈಕ ಸತ್ಯವೆಂದು ಸ್ವೀಕರಿಸಬೇಕು. ತಾರ್ಕಿಕತೆಯು ಪ್ರೇರಿತ ಸತ್ಯವನ್ನು ಬಲವಾಗಿ ಬೆಂಬಲಿಸಿದರೂ ಅದನ್ನು ಒಂದು ಸಹಾಯಕ ಪ್ರಮಾಣವಾಗಿ ಸ್ವೀಕರಿಸಬಹುದು.

ಶ್ರೀ ಚೈತನ್ಯರ ಪ್ರಕಾರ ವೇದಗಳು ನಮಗೆ ಒಂಭತ್ತು ಪ್ರಮುಖ ತತ್ತ್ವಗಳನ್ನು ಬೋಧಿಸುತ್ತವೆ:

೧ ಅಪೌರುಷೇಯ ಗ್ರಂಥಗಳಾದ ವೇದಗಳೇ ಪರಮ ಸತ್ಯದ ಏಕೈಕ ಪ್ರಮಾಣಗಳು

೨ ಸರ್ವಶಕ್ತನಾದ ಹರಿಯು ಏಕಮೇವಾದ್ವಿತೀಯನು

೩ ಅವನು ಅಪರಿಮಿತ ಶಕ್ತಿಯಿಂದ ನಿತ್ಯಸಂಪನ್ನನಾಗಿರುವನು

೪ ಅವನು ರಸ(ಮಾಧುರ್ಯ)ದ ಮಹಾ ಸಾಗರನಾಗಿರುವನು

೫ ಆತ್ಮವು ಅವನಿಂದ ಬೇರ್ಪಟ್ಟ ಅವನ ವಿಭಿನ್ನಾಂಶವಾಗಿರುವುದು

೬ ಕೆಲ ಆತ್ಮಗಳು ಲೌಕಿಕ ಪ್ರಕೃತಿಗೆ ಅಥವಾ ಅವನ ಭ್ರಾಮಕ ಶಕ್ತಿಗೆ ವಶವಾಗಿರುವವು

೭ ಕೆಲ ಆತ್ಮಗಳು ಪ್ರಕೃತಿಯ ಬಂಧನದಿಂದ ಮುಕ್ತವಾಗಿರುವವು

೮ ಎಲ್ಲಾ ಅಲೌಕಿಕ ಮತ್ತು ಲೌಕಿಕ ಅದ್ಭುತಗಳು ಏಕಕಾಲದಲ್ಲಿ ಹರಿಯ ಭಿನ್ನ ಮತ್ತು ಅಭಿನ್ನ ಅಂಶಗಳಾಗಿರುತ್ತವೆ

೯ ಆಧ್ಯಾತ್ಮಿಕ ಬದುಕಿನ ಅಂತಿಮ ಗುರಿಯನ್ನು ತಲುಪಲು ಭಕ್ತಿಯು ಏಕಮಾತ್ರ ಸಾಧನವಾಗಿರುತ್ತದೆ

೧೦ ಕೃಷ್ಣ ಪ್ರೇಮವು ಆಧ್ಯಾತ್ಮಿಕ ಅಸ್ತಿತ್ವದ ಏಕೈಕ ಗುರಿಯಾಗಿರುತ್ತದೆ

## ೧. ಹರಿ ಏಕಮೇವಾದ್ವಿತೀಯನು

ವೇದಗಳಲ್ಲಿ ಸೃಷ್ಟಿಯ ಮೂಲ ತತ್ತ್ವವು ಬ್ರಹ್ಮನರೂಪದಲ್ಲಿ ವ್ಯಕ್ತವಾಗಿರುವುದು ಮತ್ತು ವಿನಾಶಕ ತತ್ತ್ವವು ಶಿವನರೂಪದಲ್ಲಿ ವ್ಯಕ್ತವಾಗಿರುವುದು. ಇಂದ್ರನು ಆಡಳಿತದ ಕೆಳಮಟ್ಟದ ಕೆಲವು ವಿಭಾಗಗಳ ಅಧಿಪತಿಯಾಗಿರುವನು. ಹಾಗಾಗಿ ಅವರು ಸ್ವಯಂ ಸರ್ವಶಕ್ತರಲ್ಲದ ಸ್ವಯಂ ಶಕ್ತ ಭಗವಂತನ ವಿಭಿನ್ನ ಲಕ್ಷಣಗಳನ್ನು ಪ್ರತಿನಿಧಿಸುವ ವಿಭಿನ್ನ ಪ್ರತಿನಿಧಿಗಳಾಗಿರುವರು. ಅವರೆಲ್ಲರೂ ತಮ್ಮ ಅಧಿಕಾರವನ್ನು ಒಂದೇ ಮೂಲದಿಂದ ಪಡೆದಿರುವರು. ಹಾಗಾಗಿ ಅವರು ಹರಿಯ ಸೇವೆಗೆ ಅಧೀನರಾಗಿರುವರೆಂದು ಹೇಳಲಾಗಿದೆ. ಭಗವತ್ತತ್ತ್ವಕ್ಕೆ ಸಂಬಂಧಿಸಿದಂತೆ ಕೆಳಕಂಡ ಮೂರುಬಗೆಯ ಭಿನ್ನ ವಿಚಾರಗಳಿರುವವು,

೧ ಅದ್ವೈತವಾದದ ಸರ್ವವ್ಯಾಪಿ ನಿರಾಕಾರ ಬ್ರಹ್ಮನ್ ಕಲ್ಪನೆ

೨ ಯೋಗ ಪಂಥದ ಸರ್ವಾಂತರ್ಯಾಮಿ ಪರಮಾತ್ಮನ ಕಲ್ಪನೆ

೩ ಷಡೈಶ್ವರ್ಯಗಳಾದ ಸಂಪತ್ತು, ಸಾಮರ್ಥ್ಯ, ಕೀರ್ತಿ, ಸೌಂದರ್ಯ, ಜ್ಞಾನ ಮತ್ತು ವೈರಾಗ್ಯಗಳೆಲ್ಲವುಗಳ ಪರಿಪೂರ್ಣ ಒಡೆತನದಿಂದ ನಿತ್ಯಸಂಪನ್ನನಾಗಿರುವ ಸರ್ವಾಂಗಸುಂದರ ಭಗವಂತನ ಸಾಕಾರ ರೂಪದ ಕಲ್ಪನೆ.

ಬ್ರಹ್ಮನ್ ಮತ್ತು ಪರಮಾತ್ಮನ ಕಲ್ಪನೆಯು ಭಗವಾನನ ಕಲ್ಪನೆಯಲ್ಲಿ ಒಳಗೊಂಡಿರುವುದರಿಂದ ಪರಮ ಪುರುಷನಾದ ಹರಿಯೇ ಭಗವಂತನು.

ಮಾನವನ ಕಲ್ಪನೆಗಳು ಆಧ್ಯಾತ್ಮಿಕವಾಗಿರಬಹುದು ಅಥವಾ ಲೌಕಿಕವಾಗಿರಬಹುದು. ಭೌತಿಕ ಸೃಷ್ಟಿಯ ವಿಷಯಗಳೊಡನೆ ಸಂಬಂಧಹೊಂದಿರುವ ಕಾರಣ ಲೌಕಿಕ ಕಲ್ಪನೆಯು ದೋಷಪೂರ್ಣವಾಗಿರುತ್ತದೆ. ನಿಶ್ಚಯವಾಗಿಯೂ ಆಧ್ಯಾತ್ಮಿಕ ಚಿಂತನೆಯೇ ಪರಮ ಪುರುಷನನ್ನು ಸಮೀಪಿಸಲು ಇರುವ ನಿಕಟವಾದ ಏಕೈಕ ಮಾರ್ಗ. ಇನ್ನು, ಆಧ್ಯಾತ್ಮಿಕ ಚಿಂತನೆಯಲ್ಲಿ ಎರಡು ಬಗೆ. ಒಂದು ಬಗೆಯ ಚಿಂತನೆಯಲ್ಲಿ ಪರಮ ಪುರುಷನ ವೈಭವವು ಅವನ ವ್ಯಕ್ತಿತ್ತ್ವವನ್ನು

ಮೀರಿದ್ದಾಗಿರುತ್ತದೆ, ಮತ್ತು ಇನ್ನೊಂದು ಬಗೆಯಲ್ಲಿ ಅವನದೇ ಆದ ಅಪರಿಮಿತ ಸೌಂದರ್ಯವು ಅವನ ಸಕಲ ವೈಭವವನ್ನು ಮೀರಿಸುತ್ತದೆ. ಎಲ್ಲ ದೇವತೆಗಳ ಒಡೆಯನಾದ ದೇವಾಧಿದೇವ ವೈಕುಂಠ ನಾರಾಯಣನಲ್ಲಿ ಮೊದಲ ಚಿಂತನೆಯು ಪ್ರತಿನಿಧಿಸಲ್ಪಟ್ಟಿದೆ. ಹ್ಲಾದಿನಿಶಕ್ತಿ ಎಂದು ಕರೆಯಲ್ಪಡುವ ಆನಂದಪರವಶತೆಯ ಪರಮಾವಧಿಯನ್ನು ಪ್ರತಿನಿಧಿಸುವ ರಾಧಿಕೆಯ ಜೊತೆಗೂಡಿಕೊಂಡಿರುವ ಸರ್ವಾಂಗ ಸುಂದರ ಶ್ರೀ ಕೃಷ್ಣನಲ್ಲಿ ಎರಡನೆಯ ಚಿಂತನೆಯು ಪ್ರತಿನಿಧಿಸಲ್ಪಟ್ಟಿದೆ.

ಕೃಷ್ಣನು ಮನುಕುಲದ ಮಧ್ಯೆ ಮಾನವನಾಗಿ ಅವತರಿಸಿದರೂ ಅವನನ್ನು ಸರ್ವೇಸಾಮಾನ್ಯ ದೇವರ ದೇವನಾಗಿ ಸ್ವೀಕರಿಸಲಾಗಿದೆ. ಕೃಷ್ಣನು ಎಲ್ಲರನ್ನೂ ಆಕರ್ಷಿಸುತ್ತಾನೆ, ಎಲ್ಲರನ್ನೂ ಪ್ರೀತಿಸುತ್ತಾನೆ ಮತ್ತು ಎಲ್ಲ ಆತ್ಮಗಳಲ್ಲಿ ಪರಮಾನಂದವನ್ನು ಉಂಟುಮಾಡುತ್ತಾನೆ. ಅವನ ಗುಣಗಳು ಮತ್ತು ವೈಯಕ್ತಿಕ ಶಸ್ತ್ರ, ವಸ್ತ್ರಾಭರಣಗಳೆಲ್ಲವೂ ಪರಿಪೂರ್ಣವಾಗಿ ಶುದ್ಧ ಆಧ್ಯಾತ್ಮಿಕವಾಗಿದ್ದು ಅವುಗಳಿಗೆ ಈ ಲೌಕಿಕ ಜಗತ್ತಿನೊಡನೆ ಯಾವ ಸಂಬಂಧವೂ ಇರುವುದಿಲ್ಲ. ಮಾನವನು ಭೌತಿಕ ಇಂದ್ರಿಯಗಳ ಮೂಲಕ ಅವನನ್ನು ಸಮೀಪಿಸಲು ಸಾಧ್ಯವಿಲ್ಲ. ಅವನೊಳಗಿರುವ ಆತ್ಮ ಮಾತ್ರ ಅವನನ್ನು ನೇರವಾಗಿ ಕಾಣಬಹುದು ಮತ್ತು ಅವನೊಂದಿಗೆ ಸಂಪರ್ಕವನ್ನು ಹೊಂದಬಹುದು. ತಾನು ಸ್ವತಃ ಅಧ್ಯಾತ್ಮಿಕವಾಗಿ ಪತನಗೊಂಡ ಕಾರಣ, ಭೌತಿಕ ಜಗತ್ತಿನಲ್ಲಿ ಬಂದಿಯಾಗಿರುವ ಆತ್ಮವು ಕೃಷ್ಣನನ್ನು ನೋಡುವ ಹಾಗೂ ಆಧ್ಯಾತ್ಮಿಕ ಜಗತ್ತಿನಲ್ಲಿ ಅವನ ಅಲೌಕಿಕ ಲೀಲೆಗಳನ್ನು ನೋಡುವ ಅರ್ಹತೆಯನ್ನು ಕಳೆದುಕೊಂಡಿರುತ್ತದೆ. ಆದರೆ ಕೃಷ್ಣನು ತನ್ನ ಪರಮ ಶಕ್ತಿಯಿಂದ ಮತ್ತು ವಿಶೇಷಾಧಿಕಾರದಿಂದ ತನ್ನ ಸಕಲ ಲೀಲೆಗಳೊಂದಿಗೆ ಜೀವಜಗತ್ತಿನ ಕಣ್ಮುಂದೆ ವೃಂದಾವನದಲ್ಲಿ ಪ್ರತ್ಯಕ್ಷನಾಗಬಹುದು. ವಿಚಾರವಾದಿಗಳೆನ್ನಿಸಿಕೊಂಡಿರುವ ತಾರ್ಕಿಕ ಚಿಂತಕರಿಗೆ ಕೃಷ್ಣನನ್ನು ಮತ್ತು ಅವನ ಆಧ್ಯಾತ್ಮಿಕ ಲೀಲೆಗಳನ್ನು ಊಹಿಸುವುದಕ್ಕೆ ಮತ್ತು ನಂಬುವುದಕ್ಕೆ ಸಾಧ್ಯವಾಗದಿರಬಹುದು, ಆದರೆ ಆಧ್ಯಾತ್ಮಿಕ ಚಿಂತನೆಯುಳ್ಳ ಮಾನವನು ತನ್ನ ಆಧ್ಯಾತ್ಮಿಕ ದೃಷ್ಟಿಯು ಸುಧಾರಿಸುತ್ತ ಹೋದಂತೆ ಕೃಷ್ಣನನ್ನು ಕಾಣುತ್ತಾನೆ ಮತ್ತು ಹೃತ್ಪೂರ್ವಕವಾಗಿ ಅವನನ್ನು ಪ್ರೀತಿಸುತ್ತಾನೆ. ಈ ವಿಷಯವನ್ನು ಸಂಪೂರ್ಣವಾಗಿ ಮತ್ತು ವಿಸ್ತಾರವಾಗಿ ವಿವರಿಸಲು ಕಷ್ಟಸಾಧ್ಯವಾಗಬಹುದು. ಆದ್ದರಿಂದ ಪ್ರಸ್ತುತ ಅಂಶವನ್ನು ಇಲ್ಲಿಗೇ ನಿಲ್ಲಿಸಿ ಈ ಕೆಳಗಿನ ಮಾತುಗಳನ್ನು ನಮ್ಮ ಓದುಗರ ಮುಂದಿಡುತ್ತೇವೆ:–

> ‘‘ನಿಧಾನವಾಗಿ ಐಹಿಕ ಜೀವನದ ಸಂಕೋಲೆಗಳನ್ನು ಕಳಚಿಕೊಳ್ಳಿ. ಆಂತರಿಕವಾಗಿ ನಿಮ್ಮ ಆಧ್ಯಾತ್ಮಿಕ ಪ್ರಜ್ಞೆಯನ್ನು ಅಭಿವೃದ್ಧಿಗೊಳಿಸಿ. ಆತ್ಮದ ಅಸ್ತಿತ್ವವನ್ನು ನಿರಾಕರಿಸುವ ವಿಚಾರವಾದಿಗಳೆನ್ನಿಸಿಕೊಂಡಿರುವ ತಾರ್ಕಿಕ ಚಿಂತಕರಿಂದ ಗಳಿಸಿದ ಪೂರ್ವಾಗ್ರಹಗಳನ್ನು ತ್ಯಜಿಸಿ. ನಮ್ರತೆಯನ್ನು ಮೈಗೂಡಿಸಿಕೊಂಡು ಆಧ್ಯಾತ್ಮಿಕ ಪ್ರಾಪ್ತಿಗೋಸ್ಕರ ದುಡಿಯುವ ಮಹಾತ್ಮರನ್ನು ಗೌರವಿಸುವುದನ್ನು ಕಲಿಯಿರಿ. ಇದನ್ನು ನಿಮ್ಮ ಮನಸ್ಸು ಮತ್ತು ಶಕ್ತಿಯನ್ನು ಒಂದುಗೂಡಿಸಿ ಹೃತ್ಪೂರ್ವಕವಾಗಿ, ಕೇವಲ ವೈಷ್ಣವರ ಸಂಘದಲ್ಲಿ ಮಾತ್ರವಿದ್ದು ಮಾಡುತ್ತಲಿದ್ದರೆ ಬಹಳ ಬೇಗನೆ ಕೃಷ್ಣನನ್ನು ಕಾಣುವಿರಿ. ಕೃಷ್ಣನು ಒಬ್ಬ ಕಾಲ್ಪನಿಕ ವ್ಯಕ್ತಿಯಲ್ಲ. ಮೂರ್ಖರಿಂದ ದೇವರು ಎಂದು

ಕರೆಸಿಕೊಳ್ಳುವ ಅವನು ಒಬ್ಬ ಪವಾಡ ಪುರುಷ ಎಂದು ಯೋಚಿಸುವ ಅಧಿಕಾರವೂ ನಮಗಿಲ್ಲ. ಕಾಲ್ಪನಿಕತೆಯನ್ನು ವಾಸ್ತವಿಕತೆಯಿಂದ ಪ್ರತ್ಯೇಕಿಸುವ ಪ್ರಕ್ರಿಯೆಯಿಂದ ಅವನನ್ನು ಅರ್ಥೈಸಿಕೊಳ್ಳುವುದಾಗಲಿ, ಸ್ವ ಹಿತಾಸಕ್ತ ವಂಚಕರಿಂದ ಬಲವಂತದ ಹೇರಿಕೆಯಾಗಿಯಾಗಲೀ ಅವನನ್ನು ಸ್ವೀಕರಿಸುವುದು ಅಸಾಧ್ಯ. ಕೃಷ್ಣನು ನಿತ್ಯ ನಿರಂತರನು, ಅವನೇ ಆಧ್ಯಾತ್ಮಿಕ ಸತ್ಯವು, ಜಡ ಜಗತ್ತಿನ ಸಕಲ ಮೋಹಗಳಿಂದ ಮುಕ್ತವಾಗಿರುವ ಆತ್ಮದ ಮೇಲೆ ಪ್ರತಿಬಿಂಬಿಸುವ ಅವನು ಆತ್ಮದಿಂದ ಆರಂಭವಾಗುವ ಪ್ರೇಮದ ವಿಷಯವಾಗಿರುವನು. ಈ ರೀತಿಯಾಗಿ ಅವನನ್ನು ಸ್ವೀಕರಿಸಿ! ನಿಶ್ಚಯವಾಗಿ ನೀವು ಅವನನ್ನು ನಿಮ್ಮ ಆತ್ಮದ ಕಣ್ಣುಗಳಿಂದ ಕಾಣುವಿರಿ".

‘‘ಪರಾತ್ಪರನನ್ನು ವಿವರಿಸಲು ಪದಗಳು ಅಸಮರ್ಥವಾಗುತ್ತವೆ. ಅತ್ಯುನ್ನತವಾದ, ಅತ್ಯುತ್ಕೃಷ್ಟವಾದ ಮತ್ತು ಪಾರಮಾರ್ಥಿಕ ತತ್ತ್ವದ ಪರಮ ಪವಿತ್ರ ಆದರ್ಶವು ಕೃಷ್ಣನಲ್ಲಿ ಕಂಡುಬರುತ್ತದೆ. ಅವನ ವಿರುದ್ಧ ವಿವಾದಗಳನ್ನು ಸೃಷ್ಟಿಸುವುದು ಆತ್ಮವಂಚನೆಯಾಗುತ್ತದೆ, ಮತ್ತು ಮಾನವರಿಗಾಗಿ ಕಾದಿಟ್ಟ ಭಗವಂತನ ಆಶೀರ್ವಾದವನ್ನು ಆತ್ಮನಿಂದ ಕಸಿದುಕೊಂಡಂತಾಗುತ್ತದೆ. ಹಾಗಾಗಿ ಅವನ ನಾಮ, ರೂಪ, ಗುಣಲಕ್ಷಣಗಳು ಮತ್ತು ಲೀಲೆಗಳ ವಿವರಣೆಯನ್ನು, ಎಲ್ಲಾ ತರಹದ ಪ್ರಾಪಂಚಿಕ ಕಲ್ಪನೆಗಳಿಂದ ಹೊರತುಪಡಿಸಿ ಅಧ್ಯಾತ್ಮಿಕವಾಗಿ ಸ್ವೀಕರಿಸಬೇಕು".

## ೨. ಹರಿಯು ಅಪರಿಮಿತ ಶಕ್ತಿಗಳಿಂದ ಸಂಪನ್ನನಾಗಿರುವನು

ಅಪರಿಮಿತ ಶಕ್ತಿಯೆಂದರೆ ಭಗವಂತನ ಶಕ್ತಿಗಳಿಗೆ ದೇಶಕಾಲಗಳ ಪರಿಮಿತಿ ಇಲ್ಲದೇ ಇರುವುದು. ದೇಶಕಾಲಗಳು ಅವನದೇ ಶಕ್ತಿಗಳ ಸೃಷ್ಟಿಯಾಗಿರುವುದರಿಂದ, ಅವನ ಶಕ್ತಿಗಳು ಅವನೆಂದೇ ಗುರುತಿಸಲ್ಪಡುತ್ತವೆ. ಐಹಿಕ ಜೀವನದಲ್ಲಿ ಒಬ್ಬ ವ್ಯಕ್ತಿ ಮತ್ತು ಅವನ ಶಕ್ತಿಗಳ ಮಧ್ಯೆ ಅಂತರವಿರುತ್ತದೆ, ಒಂದು ವಸ್ತು ಮತ್ತು ಅದರ ಗುಣಲಕ್ಷಣಗಳು, ನಾಮ, ಆಕಾರ ಮತ್ತು ಅದರ ಚಟುವಟಿಕೆಗಳ ನಡುವೆ ಅಂತರವಿರುವುದು; ಆದರೆ ಆತ್ಮದ ವಿಚಾರದಲ್ಲಿ ಒಬ್ಬ ವ್ಯಕ್ತಿಯು ತನ್ನ ನಾಮ, ರೂಪ, ಗುಣ ಮತ್ತು ಚಟುವಟಿಕೆಗಳೊಂದಿಗೆ ಸಮಾನತೆಯನ್ನು ಹೊಂದಿರುತ್ತಾನೆಂಬುದು ಆಧ್ಯಾತ್ಮಿಕ ಸತ್ಯ. ಸತ್ತ್ವಹೀನ ಜಡದ್ರವ್ಯಗಳೊಂದಿಗೆ ಮಾತ್ರ ವ್ಯವಹರಿಸಬಲ್ಲ ಒಣ ತರ್ಕಗಳಿಂದ ಈ ಸತ್ಯವನ್ನು ಜಯಿಸಲಾಗದು. ಕೃಷ್ಣನು ಸ್ವತಃ ಪರಮ ಸಂಕಲ್ಪವಾಗಿದ್ದು, ಯಾವುದೇ ನಿಬಂಧನೆಗೊಳಪಡದ ತನ್ನ ಪರಾತ್ಪರ ಶಕ್ತಿಗಳನ್ನು ತನ್ನ ಸ್ವ ಇಚ್ಛೆಯಂತೆ ಪ್ರಯೋಗಿಸುತ್ತಾನೆ. ಏಕೆಂದರೆ ಎಲ್ಲಾ ನಿಯಮ ನಿಬಂಧನೆಗಳು ಅವನ ಸಂಕಲ್ಪಶಕ್ತಿಯಿಂದಲೇ ಉಂಟಾಗಿರುತ್ತವೆ.

ಶಕ್ತಿಯನ್ನು ಅದರ ಪ್ರಯೋಗದಿಂದ ತಿಳಿದುಕೊಳ್ಳಬಹುದು. ಈ ಜಗತ್ತಿನಲ್ಲಿ ನಮಗೆ ಭಗವಂತನ ಶಕ್ತಿಯ ಕೇವಲ ಮೂರು ಗುಣಲಕ್ಷಣಗಳ ಅನುಭವ ಉಂಟಾಗುತ್ತದೆ. ಈ ಭೌತಿಕ ಜಗತ್ತಿನ ಅದ್ಭುತವನ್ನು ನೋಡುತ್ತ ಅವನ ಶಕ್ತಿಗೆ ಭೌತದ್ರವ್ಯ ಸೃಷ್ಟಿಸುವ ಗುಣಲಕ್ಷಣಗಳಿವೆ ಎಂದು ಅರ್ಥ

ಮಾಡಿಕೊಳ್ಳುತ್ತೇವೆ. ವೇದಗಳಲ್ಲಿ ಈ ಲಕ್ಷಣವನ್ನು ಮಾಯಾಶಕ್ತಿಯೆಂದು ಕರೆಯಲಾಗಿದೆ. ಒಬ್ಬ ಮನುಷ್ಯನನ್ನು ನೋಡಿ ಆ ಪರಮ ಶಕ್ತಿಗೆ ಪರಿಮಿತವಾದ ಮತ್ತು ದೋಷಯುತ ಆತ್ಮಗಳನ್ನು ಉತ್ಪತ್ತಿಸುವ ಲಕ್ಷಣಗಳಿವೆ ಎಂದು ಅರ್ಥ ನಾವು ಮಾಡಿಕೊಳ್ಳುತ್ತೇವೆ. ಶಾಸ್ತ್ರವು ಈ ಲಕ್ಷಣವನ್ನು ಜೀವ ಶಕ್ತಿಯೆಂದು ಕರೆಯುತ್ತದೆ. ಶಾಶ್ವತವಾಗಿ ತನ್ನ ಶಕ್ತಿಗಳಿಂದ ಸಂಪನ್ನನಾಗಿ ತನ್ನ ಆಧ್ಯಾತ್ಮಿಕ ಧಾಮದಲ್ಲಿ ಪರಾತ್ಪರನಾಗಿರುವಂತಹ ಒಬ್ಬ ಭಗವಂತನನ್ನು ನಾವು ಕಲ್ಪಿಸಿಕೊಳ್ಳುತ್ತೇವೆ; ಈ ಮೂಲಕ ಅವನ ಶಕ್ತಿಗೆ ಪರಿಪೂರ್ಣವಾದ ಆಧ್ಯಾತ್ಮಿಕ ಅಸ್ತಿತ್ವಗಳನ್ನು ದೋಷರಹಿತವಾಗಿ ಪ್ರದರ್ಶಿಸುವ ಲಕ್ಷಣವಿದೆ ಎಂದು ಅರ್ಥಮಾಡಿಕೊಳ್ಳುತ್ತೇವೆ.

ವೇದಗಳು ಆ ಲಕ್ಷಣವನ್ನು ಆತ್ಮಶಕ್ತಿ ಅಥವಾ ಚಿತ್ ಶಕ್ತಿಯೆಂಬ ಹಸರಿನಲ್ಲಿ ಕರೆಯುತ್ತವೆ. ಈ ಎಲ್ಲ ಲಕ್ಷಣಗಳು ಒಟ್ಟಾಗಿ ವೇದಗಳು ಪರಾ ಶಕ್ತಿಯೆಂದು ಹೆಸರಿಸುವ ಒಂದು ಪರಾತ್ಪರ ಶಕ್ತಿಯ ರೂಪ ತಾಳುತ್ತವೆ. ನಿಜವಾದ ಅರ್ಥದಲ್ಲಿ ಭಗವಂತನ ಶಕ್ತಿಗಳು ಅವನ ವ್ಯಕ್ತಿತ್ವದಿಂದ ಪ್ರತ್ಯೇಕಿಸಿ ನೋಡಲಾಗದು. ಆದರೂ ಭಗವಂತನಿಂದ ತನ್ನ ಶಕ್ತಿಗಳು ತಮ್ಮ ಪ್ರತ್ಯೇಕ ಕ್ರಿಯೆಗಳಲ್ಲಿ ಪ್ರತ್ಯೇಕವಾಗಿ ಪ್ರದರ್ಶಿಸಲ್ಪಟ್ಟಿವೆ. ಏಕಕಾಲದಲ್ಲಿ ಭಗವಂತನ ಶಕ್ತಿಗಳು ಪ್ರತ್ಯೇಕವಾಗಿ ಪ್ರದರ್ಶಿಸಲ್ಪಡುವ ಮತ್ತು ಅವನಿಂದ ಪ್ರತ್ಯೆಕಿಸಲಾಗದಿರುವ ಕಲ್ಪನಾತೀತ ಸ್ಥಿತಿಯ ವೈಖರಿಯನ್ನು ಅಚಿಂತ್ಯ ಭೇದಾಭೇದ ಪ್ರಕಾಶ ಎಂದು ಉಲ್ಲೇಖಿಸಲಾಗಿದೆ.

ನಿಬಂಧನೆಗಳಿಗೆ ಅತೀತನಾಗಿದ್ದು, ಸ್ವಯಂ ಪರಮ ಸಂಕಲ್ಪನಾಗಿರುವ ಹರಿಯು ತನ್ನ ಅಪರಿಮಿತ ಶಕ್ತಿಗಳನ್ನು ಪ್ರಯೋಗಿಸಿಯೂ, ತಾನು ಅವುಗಳ ಪರಿಣಾಮದಿಂದ ಹೊರತಾಗಿರುತ್ತಾನೆ. ಇದನ್ನು ಸ್ವಜನಿತ ಸತ್ಯವಾಗಿ ಆತ್ಮಸಾಕ್ಷಾತ್ಕಾರದಿಂದ ಅನುಭವಿಸಬಹುದೇ ಹೊರತು ತಾರ್ಕಿಕವಾಗಿ ಅರ್ಥಮಾಡಿಕೊಳ್ಳುವುದು ಅಸಾಧ್ಯ.

## ೩. ಅವನು ಮಾಧುರ್ಯದ ಸಾಗರ

ರಸವು; ಸ್ಥಾಯಿ ಭಾವ, ವಿಭಾವ, ಅನುಭಾವ, ಸಾತ್ವಿಕ ಮತ್ತು ಸಂಚಾರಿ ಇವುಗಳನ್ನು ಒಳಗೊಂಡಿರುವ ಆನಂದಪ್ರದ ತತ್ತ್ವವೆಂದು ವಿವರಿಸಲಾಗಿದೆ. ವಿಭಾವವನ್ನು ಆಲಂಬನ ಮತ್ತು ಉದ್ದೀಪನ ಎಂದು ವಿಭಜಿಸಲಾಗಿದೆ. ಆಲಂಬನವನ್ನು ವಿಷಯ ಮತ್ತು ಆಶ್ರಯ ಎಂದು ಉಪವಿಂಗಡಿಸಲಾಗಿದೆ. ಯಾರೊಬ್ಬನಲ್ಲಿ ಸ್ಥಾಯಿ ಭಾವದ ತತ್ತ್ವವಿರುವುದೊ ಅವನನ್ನು ಆಶ್ರಯ ಎಂದು ಕರೆಯುತ್ತಾರೆ ಮತ್ತು ಯಾರೊಬ್ಬನಿಗೆ ಸ್ಥಾಯಿ ಭಾವವು ನಿರ್ದೇಶಿಸುತ್ತದೊ ಆ ವ್ಯಕ್ತಿಯನ್ನು ವಿಷಯ ಎಂದು ಕರೆಯುತ್ತಾರೆ. ಸ್ಥಾಯಿ ಭಾವವನ್ನು ರತಿ ಅಥವಾ ಶುದ್ಧ ಆಧ್ಯಾತ್ಮಿಕ ಹೃದಯದ ಪ್ರವೃತ್ತಿಯೆಂದು ವಿವರಿಸಲಾಗಿದೆ. ಆಶ್ರಯ ಮತ್ತು ವಿಷಯದ ಸಂಪರ್ಕದಿಂದ ಸ್ಥಾಯಿ ಭಾವವು ತನ್ನ ಕ್ರಿಯೆಯ ಸ್ಥಿತಿಗೆ ತಲುಪುತ್ತದೆ. ತನ್ನ ಕ್ರಿಯಾಶೀಲ ಹಂತ ತಲುಪಿದಾಕ್ಷಣ ಒಬ್ಬ ವ್ಯಕ್ತಿಯಲ್ಲಿ ಅನುಭಾವಗಳೆಂದು ಕರೆಯಲ್ಪಡುವ ಕೆಲವು ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಒಟ್ಟು ೧೩ ಅನುಭಾವಗಳಿವೆ. ಕಣ್ಣೀರು, ಕಂಪನ, ಇತ್ಯಾದಿ ಶಾರೀರಿಕವಾಗಿ ಪ್ರದರ್ಶಿತಗೊಳ್ಳುವ ಎಂಟು ಭಾವಗಳನ್ನು ಸಾತ್ವಿಕ ಭಾವಗಳೆಂದು ಕರೆಯುತ್ತಾರೆ. ಹರುಷ, ವಿಷಾದ ಇತ್ಯಾದಿಗಳನ್ನು

ತೋರುವ ಇತರ ೩೩ ಭಾವಗಳನ್ನು ಸಂಚಾರಿ ಭಾವಗಳಾಗಿರುತ್ತವೆ. ಆತ್ಮದಲ್ಲಿ ಇವೆಲ್ಲವು ಒಟ್ಟುಸೇರಿ ರಸವಾಗುತ್ತದೆ.

ರಸದ ಈ ಪ್ರಕ್ರಿಯೆಯು ಲೌಕಿಕತೆಯ ಮೋಹಕ್ಕೊಳಗೊಂಡ ಪುರುಷನು ತೋರುವ ರಸವನ್ನು ಹೋಲುತ್ತದೆ. ಆದರೆ ರಸವು ತಾನಾಗಿ ಪರಾತ್ಪರನಾದ ಹರಿಯೊಂದಿಗೆ ಗುರುತಿಸಲ್ಪಡುವ ಒಂದು ನಿತ್ಯ ತತ್ವ. ಹರಿಯು ರಸದ ಸಾಗರ ಮತ್ತು ಜೀವಾತ್ಮದಲ್ಲಿ ಈ ಸಾಗರದ ಒಂದು ಹನಿಯಷ್ಟು ರಸ ಇರಬಹುದೆಂದು ಊಹಿಸಬಹುದು. ಸಹಜವಾಗಿ ರಸ ಆಧ್ಯಾತ್ಮಿಕವಾದದ್ದು, ಆದರೆ ಭೌತಿಕ ವಸ್ತುಗಳೊಂದಿಗೆ ಸತತ ಸಂಪರ್ಕವನ್ನಿಟ್ಟುಕೊಂಡಿರುವ, ಭೌತದ್ರವ್ಯದ ಮೂಲ ಜನಕವಾಗಿರುವ ಮಾಯೆಯ ಆಧೀನಕ್ಕೊಳಪಟ್ಟಿರುವ ಮನುಷ್ಯನಲ್ಲಿ, ಇಂದ್ರಿಯ ಸುಖಗಳ ರೂಪದಲ್ಲಿ ವಿಕೃತವಾಗಿ ಗುರುತಿಸಲಾಗಿದೆ. ಈ ಪರಿಸ್ಥಿತಿಯಲ್ಲಿ ಆತ್ಮವು ತನ್ನನ್ನು ತಾನು ಮನಸ್ಸಿನೊಳಗೆ ಕಳೆದುಕೊಳ್ಳುತ್ತದೆ ಮತ್ತು ಇಂದ್ರಿಯಗಳ ಮೂಲಕ ಕಾರ್ಯನಿರ್ವಹಿಸುವ ಮನಸ್ಸು ಪಂಚೇಂದ್ರಿಯಗಳ ಐದು ವಿವಿಧ ಬಗೆಯ ವಿಷಯಗಳನ್ನು ಆನಂದಿಸುತ್ತಾ ರಸದ ವಿಕೃತ ಪ್ರತಿರೂಪವನ್ನು ಅನುಭೋಗಿಸುತ್ತದೆ. ಇದು ಅವಿದ್ಯೆ ಅಥವಾ ಅಜ್ಞಾನದೊಡನೆ ಆತ್ಮನ ಬಾಹ್ಯಜಗತ್ತಿನ ಪಯಣ. ಯಾವಾಗ ಆತ್ಮವು ಅಂತರಂಗದಲ್ಲಿ ನೋಡುತ್ತದೆಯೊ ಆಗ ಅದು ತನ್ನ ಆಧ್ಯಾತ್ಮಿಕ ರಸವನ್ನು ಪಡೆಯುತ್ತದೆ ಮತ್ತು ಆಧ್ಯಾತ್ಮಿಕ ರಸದ ಬೆಳವಣಿಗೆಯೊಂದಿಗೆ ಸಮಾನಾಂತರವಾಗಿ ವಿಕೃತ ರಸ ಕ್ಷೀಣಿಸುತ್ತದೆ.

ಆಧ್ಯಾತ್ಮಿಕ ರಸದಲ್ಲಿ ಆತ್ಮಗಳು ಪರಸ್ಪರ, ಮತ್ತು ಸರ್ವಾಂಗಸುಂದರನಾದ ಭಗವಂತನೊಂದಿಗೆ, ವೃಂದಾವನದಲ್ಲಿ, ಭೌತಿಕ ಕಾಲದ ಎಲ್ಲೆಯನ್ನು ಮೀರಿ ನಿರ್ಬಂಧವಿಲ್ಲದ ತಮ್ಮ ಕ್ರಿಯೆಯಲ್ಲಿ ತೊಡಗುತ್ತವೆ. ಅಪರಿಮಿತವಾದ ಪರಾತ್ಪರ ಪರಮ ಸಂಕಲ್ಪದೊಂದಿಗೆ ಹರಿಯು ತನ್ನ ಆಧ್ಯಾತ್ಮಿಕ ಶಕ್ತಿಯಲ್ಲಿ ಅಥವಾ ಚಿತ್ ಶಕ್ತಿಯಲ್ಲಿ ನಿತ್ಯವಾದ

ಹರ್ಷೋನ್ಮಾದವನ್ನು ಹೊಂದಿರುತ್ತಾನೆ. ಚಿತ್ ಶಕ್ತಿಯ ಸಂವಿತ್(ಆಧ್ಯಾತ್ಮಿಕ ಜ್ಞಾನದ) ಲಕ್ಷಣವು, ಎಲ್ಲ ಭಾವಗಳನ್ನು, ಸಂಬಂಧಗಳನ್ನು ಮತ್ತು ವಾತ್ಸಲ್ಯವನ್ನು ಉಂಟುಮಾಡುತ್ತದೆ. ಚಿತ್ ಶಕ್ತಿಯ ಸಂಧಿನಿ ಲಕ್ಷಣವು ಧಾಮಗಳು, ಪ್ರತ್ಯೇಕ ವ್ಯಕ್ತಿತ್ತ್ವಗಳನ್ನೊಳಗೊಂಡಂತೆ ಆಧ್ಯಾತ್ಮಿಕ ರಸಕ್ರಿಯೆಗೆ ಸಂಬಂಧಿಸಿದ ಇತರ ಎಲ್ಲಾಆಸ್ತಿತ್ತ್ವ (ಮುಕ್ತ ಸಂಕಲ್ಪವನ್ನು ಹೊರತುಪಡಿಸಿ) ಗಳನ್ನು ಉಂಟುಮಾಡುತ್ತದೆ. ಈ ಎಲ್ಲವು ಚಿತ್ ಶಕ್ತಿ ಅಥವಾ ಆಧ್ಯಾತ್ಮಿಕ ಶಕ್ತಿಯಿಂದ ಪ್ರದರ್ಶಿಸಲ್ಪಡುತ್ತವೆ.

ಕಾಲ, ದೇಶ (ಅವಕಾಶ) ಮತ್ತು ಸ್ಥೂಲ ವಸ್ತುಗಳನ್ನೊಳಗೊಂಡ ಮಾಯೆ ಅಥವಾ ಐಹಿಕ ಸೃಷ್ಟಿಗೆ ವೃಂದಾವನಕ್ಕೆ ಸಮನಾದ ಚಿತ್ ಜಗತ್ ಅಥವಾ ಆಧ್ಯಾತ್ಮಿಕ ಜಗತ್ತಿನಲ್ಲಿ ಯಾವ ಸ್ಥಾನವೂ ಇರುವುದಿಲ್ಲ. ಮಾಯಾ ಶಕ್ತಿಯು ಚಿತ್ ಶಕ್ತಿಯ ವಿಕೃತ ಪ್ರತಿಬಿಂಬ. ಹಾಗಾಗಿ, ಮಾಯಾ (ಭೌತಿಕ) ಜಗತ್ತಿನ ಗುಣಗಳು ಚಿತ್ (ಆಧ್ಯಾತ್ಮಿಕ) ಜಗತ್ತಿನ ಗುಣಗಳೊಂದಿಗೆ ಗುಣಾತ್ಮಕವಾಗಿ ಹೋಲುತ್ತವಾದರೂ ಪ್ರಮಾಣದಲ್ಲಿ ಸಮಾನವಲ್ಲ. ಚಿತ್ ಜಗತ್ತುಮಾಯಾ ಜಗತ್ತಿಗೆ ಮಾದರಿಯಾಗಿದೆಯೇ ಹೊರತು ಅವೆರಡೂ ಅನನ್ಯವಲ್ಲ. ಮಾಯಾ ಜಗತ್ತಿನ

ಅನುಭವದಿಂದ ಮಾನವನಿಗೆ ಚಿತ್ ಜಗತ್ತಿನ ಕಲ್ಪನೆಯುಂಟಾಗಿದೆ ಎನ್ನುವ ವಿಚಾರದಿಂದ ನಮ್ಮನ್ನು ನಾವು ಕಾಪಾಡಿಕೊಳ್ಳತಕ್ಕದ್ದು. ಈ ಕಲ್ಪನೆಯು ನಿರಾಕಾರವಾದದ್ದಾಗಿರುವುದು ಮತ್ತು ಇದನ್ನು ನಾಸ್ತಿಕವಾದವೆಂದು ಹೇಳಬಹುದು. ಆಧ್ಯಾತ್ಮಿಕತೆಯನ್ನೊಳಗೊಂಡಿರದ ತರ್ಕಕ್ಕೆ ಇಂತಹ ಒಂದು ಸಂಶಯವನ್ನು ಸೃಷ್ಟಿಸುವ ಪ್ರವೃತ್ತಿಯಿರುತ್ತದೆ. ಆದರೆ, ಯಾರಿಗೆ ಆಧ್ಯಾತ್ಮಿಕ ಪ್ರೇಮವನ್ನು ಅನುಭವಿಸುವ ಇಚ್ಛೆ ಇರುತ್ತದೆಯೊ ಅವರು ಇದು ದಾರಿ ತಪ್ಪಿಸುವ ವಿಷಯವೆಂದು ತಿಳಿದು ಅದನ್ನು ತ್ಯಜಿಸಬೇಕು. ಕೃಷ್ಣನ ನಿರಂತರ ರಸವು ಚಿತ್ ಜಗತ್ತಿನಲ್ಲಿ ಆಧ್ಯಾತ್ಮಿಕವಾಗಿ ಅಸ್ತಿತ್ತ್ವದಲ್ಲಿರುತ್ತದೆ. ಸಾಪೇಕ್ಷ ಜಗತ್ತಿನಲ್ಲಿರುವ ನಮ್ಮ ಕಣ್ಣುಗಳ ಮತ್ತು ಕೃಷ್ಣ ಲೀಲೆಯ ಶ್ರೇಷ್ಠ ಆಧ್ಯಾತ್ಮಿಕ ದೃಶ್ಯದ ಮಧ್ಯೆ ಒಂದು ಪರದೆಯು ಅಡ್ಡ ಬರುತ್ತದೆ. ಯಾವಾಗ ಕೃಷ್ಣನ ಕೃಪೆಯಿಂದ ಆ ಪರದೆಯು ತೆರೆಯುತ್ತದೆಯೋ ಆವಾಗ ನಮಗೆ ಅವನ ಲೀಲೆಯನ್ನು ನೋಡುವ ಭಾಗ್ಯ ದೊರೆಯುತ್ತದೆ. ಮತ್ತು ಅವನಿಚ್ಛೆಯಂತೆ ಪರದೆಯನ್ನು ಇಳಿಸಿದಾಗ ಆ ದಿವ್ಯ ದೃಶ್ಯ ಮಾಯವಾಗುತ್ತದೆ “ ಸೋದರರೇ! ವಿಷಯವನ್ನು ಆಸ್ವಾದಿಸಿ! ಆಗ ನಿಮ್ಮ ನಂಬಿಕೆಯು ನನ್ನ ನಂಬಿಕೆಗೆ ಸಮಾನವಾಗುತ್ತದೆ. ಇಂತಹ ಬಹುಮುಖ್ಯವಾದ ವಿಷಯವನ್ನು ನಿಷ್ಕಪಟವಾಗಿ ಪರೀಕ್ಷಿಸದೇ ಸುಮ್ಮನೆ ತ್ಯಜಿಸಬೇಡಿ."

## ೪ ಆತ್ಮವು ಅವನ ವಿಭಿನ್ನಾಂಶವಾಗಿದೆ

ಮನುಷ್ಯನಾಗಲಿ, ಪ್ರಾಣಿಯಾಗಿರಲಿ ಅಥವಾ ದಿವ್ಯಾತ್ಮವಾಗಿರಲಿ, ಈ ಎಲ್ಲ ತರಹದ ಆತ್ಮಗಳನ್ನು ವೈದಿಕ ಶಾಸ್ತ್ರವು ಆತ್ಮ ಎಂದು ಉಲ್ಲೇಖಿಸುತ್ತದೆ. ಮಹಾಪ್ರಭುಗಳು ಆತ್ಮದ ಪುನರ್ಜನ್ಮದ ಬಹುಮುಕ್ತವಾದ ತತ್ತ್ವವನ್ನು ಬೋಧಿಸಿದರೆಂದು ಅರ್ಥಮಾಡಿಕೊಳ್ಳಬೇಕು. ಕೆಲವು ನಿರ್ದಿಷ್ಟ ಶ್ರದ್ಧೆಯ ಮತದವರು ಈ ವಿಚಾರವನ್ನು ಬೆಂಬಲಿಸುವುದಿಲ್ಲವೆಂಬ ಆಧಾರದ ಮೇಲೆ ಕೆಲ ನಿರ್ದಿಷ್ಟ ಓದುಗರು ಈ ವಿಚಾರವನ್ನು ತಿರಸ್ಕರಿಸಬಹುದು, ನಿರ್ದಿಷ್ಟ ಮತಾವಲಂಬಿಗಳ ಸಿದ್ಧಾಂತಗಳಿಂದ ಭಿನ್ನವಾಗಿರುವ ಮಾತ್ರಕ್ಕೆ ಇನ್ನೊಂದು ಮತದ ವಿಚಾರವನ್ನು ತಿರಸ್ಕರಿಸುವುದು ಸರಿಯಲ್ಲ. ವಾಸ್ತವವಾಗಿ ತರ್ಕವು ಮಧ್ಯ ಪ್ರವೇಶಿಸುವ ಸಾಹಸವನ್ನು ಮಾಡಲಾಗದ ವಿಷಯವಿದು. ನೇರವಾಗಿ ಪರೀಕ್ಷಿಸಿದರೆ ಪರಕಾಯ ಪ್ರವೇಶ ತತ್ತ್ವವನ್ನು ಸಂದೇಹಿಸಬಲ್ಲ ಯಾವುದೇ ಬಲವಾದ ಕಾರಣ ಕಂಡುಬರುವುದಿಲ್ಲ. ಬದಲಾಗಿ ನಮ್ಮ ನಿಷ್ಪಕ್ಷಪಾತದ ಮನಸ್ಸಿಗೆ ಅದನ್ನು ಸ್ವೀಕರಿಸುವ ಪ್ರವೃತ್ತಿಯಿರುತ್ತದೆ.

ಜೀವಾತ್ಮಕ್ಕೆ ಜೀವನದಲ್ಲಿ ಕೇವಲ ಒಂದೇ ಒಂದು ಪರೀಕ್ಷೆಯಿರುತ್ತದೆಂಬ ನಂಬಿಕೆಯು ಸಾಕ್ಷ್ಯಬದ್ಧವಾಗಿ ಮತಾಂಧತೆಯ, ಅನ್ಯಾಯದ, ಮತ್ತು ಭಗವಂತನು ಸರ್ವಹಿತಚಿಂತಕನು ಎಂಬ ನಂಬಿಕೆಗೆ ವಿರೋಧಾತ್ಮಕವಾಗಿರುವುದು. ಸೃಷ್ಟಿಯ ವಿವಿಧ ಹಂತಗಳಲ್ಲಿ ಆತ್ಮದ ಮುಂದುವರಿದ ಅಸ್ತಿತ್ವವನ್ನು ಉಪದೇಶಿಸುವ ವೈದಿಕ ಉಪಸಂಹಾರಗಳನ್ನು ಯಾವಾಗ ನಮ್ಮ ಆಧ್ಯಾತ್ಮಿಕ ಭಾವನೆ ಬೆಂಬಲಿಸುತ್ತದೊ ಆಗ ನಾವು ಆತ್ಮದ ಪರಕಾಯ ಪ್ರವೇಶ ತತ್ತ್ವವನ್ನು ಸಂದೇಹಿಸುವ ಕಲ್ಪನೆಯನ್ನು ತ್ಯಜಿಸಬೇಕು. ಮಾನವನು ಎಷ್ಟೇ ಸುಶಿಕ್ಷಿತ ಹಾಗೂ ವೈಜ್ಞಾನಿಕಮನೋಭಾವದವ ’ನಾಗಿದ್ದರೂ ಅವನು ಸದಾ ಬೆಳೆಯುತ್ತಿರುವ ಪ್ರಮಾದಕ್ಕೆ ಉತ್ತರದಾಯಿಯಾಗಿರುತ್ತಾನೆ ಮತ್ತು ಆ ಪ್ರಮಾದಾನ್ನು ಒಂದು ಇಡೀ ದೇಶ ಅಥವಾ ಒಂದು ವರ್ಗವೇ ಬೆಂಬಲಿಸುತ್ತಿರಬಹುದು.

ಚೈತನ್ಯ ಮಹಾಪ್ರಭುಗಳ ಪ್ರಕಾರ ಆತ್ಮವು ಪರಮಾತ್ಮನ ಒಂದು ಅಣು ಅಂಶ. ಸ್ವಭಾವದಲ್ಲಿ ಆಧ್ಯಾತ್ಮಿಕರಾಗಿರುವ ಜೀವಿಗಳನ್ನು ಉತ್ಪತ್ತಿಸುವುದು ಭಗವಂತನ ಶಕ್ತಿಯ ಒಂದು ಭಾಗವಾಗಿದೆ ಆದರೆ ಜೀವಗಳು ತಾವು ನಿತ್ಯವಾಗಿ ಭಗವಂತನ ಸೇವಕರೆಂಬ ಸ್ಥಾನವನ್ನು ಮರೆತಾಗ ಭ್ರಮೆಯಿಂದ ಮೋಹಕ್ಕೆ ಗುರಿಯಾಗುವರು. ಭಗವಂತನನ್ನು ಇಲ್ಲಿ ಸೂರ್ಯನಿಗೆ ಹೋಲಿಸಲಾಗಿದೆ ಮತ್ತು ಭಗವಂತನ ಶಕ್ತಿಯ ಇನ್ನೊಂದು ಲಕ್ಷಣದ ಸಹಾಯವಿಲ್ಲದೆ ನಿಲ್ಲಲಾಗದ ಜೀವಿಗಳನ್ನು ಆ ಸೂರ್ಯನ ಕಿರಣಗಳ ಅಣು ಅಂಶವಾಗಿ ಹೋಲಿಸಲಾಗಿದೆ. "ಅಂಶ" ಎಂಬ ಪದವನ್ನು ಒಂದು ಕೊಡಲಿಯಿಂದ ಕತ್ತರಿಸಿದ ಕಲ್ಲಿನ ಒಂದು ತುಂಡನ್ನು ವಿವರಿಸುವ ರೀತಿಯಲ್ಲೇ ಅರ್ಥಮಾಡಿಕೊಳ್ಳದೆ, ಎಲ್ಲ ರಾಸಾಯನಿಕ ಲಕ್ಷಣಗಳುಳ್ಳ ಒಂದು ಕಲ್ಲಿನಿಂದ ಚಿನ್ನವನ್ನು ಉತ್ಪತ್ತಿಸುವ ಹಾಗೆ ಅಥವಾ ಒಂದು ದೀಪದಿಂದ ಇನ್ನೊಂದು ದೀಪವನ್ನು ಬೆಳಗಿಸುವ ಉದಾಹರಣೆಯಿಂದ ಅರ್ಥ ಮಾಡಿಕೊಳ್ಳಬೇಕು.

ಆತ್ಮಗಳನ್ನು ಉರಿಯುತ್ತಿರುವ ಬೆಂಕಿಯ ಪ್ರತ್ಯೇಕವಾದ ಅಣುಗಾತ್ರದ ಕಿಡಿಗಳಿಗೂ ಹೋಲಿಸಲಾಗಿದೆ. ಪ್ರತಿಯೊಂದು ಆತ್ಮವು ಭಗವಂತನಿಂದ ಒಂದು ನಿರ್ದಿಷ್ಟ ಪ್ರಮಾಣದ ಗುಣ ಲಕ್ಷಣಗಳನ್ನು ಪಡೆದುಕೊಂಡಿದ್ದಲ್ಲದೆ ಸ್ವಲ್ಪ ಪ್ರಮಾಣದಲ್ಲಿ ಸ್ವತಂತ್ರ ಸಂಕಲ್ಪವನ್ನೂ ಪಡೆದಿವೆ. ಸ್ವಾಭಾವಿಕವಾಗಿ ಈ ಆತ್ಮಗಳು ಚಿತ್ ಜಗತ್ತು ಮತ್ತು ಮಾಯಾ ಜಗತ್ತಿನ ಮಧ್ಯದಲ್ಲಿ ಸ್ಥಿತವಾಗಿವೆ. ಯಾವ ಆತ್ಮಗಳು ಭಗವಂತನ ಸೇವೆ ಮಾಡಲು ಇಚ್ಛಿಸಿದವೊ ಅವುಗಳು ಭಗವಂತನ ಚಿತ್ ಶಕ್ತಿಯ ಹ್ಲಾದಿನಿ ಲಕ್ಷಣದ ಮಧ್ಯಸ್ತಿಕೆಯಿಂದ ರಕ್ಷಿಸಲ್ಪಟ್ಟಿವೆ. ಅವುಗಳನ್ನು ನಾನಾ ರೀತಿಗಳಲ್ಲಿ ಭಗವಂತನ ನಿತ್ಯ ಸೇವಕರಾಗಿ ಸ್ವೀಕರಿಸಲಾಗಿದೆ. ಮಾಯಾಜಗತ್ತಿನ ಮತ್ತು ಕರ್ಮ ಚಕ್ರದಿಂದುಂಟಾಗುವ ಕಷ್ಟಗಳ ಅಥವಾ ಭೌತಿಕ ಕ್ರಿಯೆಯ ಆವರ್ತಿತ ತತ್ತ್ವಗಳ ಮತ್ತು ಅವುಗಳ ಫಲದ ಬಗ್ಗೆ ಅವುಗಳಿಗೆ ಅರಿವಿರುವುದಿಲ್ಲ. ಅನುಭೋಗಿಸುವ ಆಸೆಯುಳ್ಳವರನ್ನು ಮಾಯೆಯು ಇನ್ನೊಂದೆಡೆಯಿಂದ ಸೆರೆ ಹಿಡಿಯುತ್ತದೆ. ಆ ಆತ್ಮಗಳು ಮಾಯೆಯ ಕರ್ಮ ಚಕ್ರದಲ್ಲಿದ್ದು ಭಗವಂತನ ಸೇವಕರೆಂಬ ತಮ್ಮ ಸ್ವರೂಪ ಸ್ಥಿತಿಯನ್ನು ಕಂಡುಕೊಂಡಾಗಲೇ ಆ ಕರ್ಮ ಚಕ್ರವು ಕೊನೆಗೊಳ್ಳುವುದು. ಈ ಆತ್ಮಗಳು ಮಾಯೆಯಿಂದ ಮುಕ್ತರಾಗುವರೊ ಅಥವಾ ಮಾಯೆಯಿಂದ ಮೋಹಗೊಂಡಿರುವರೋ, ಏನೇ ಇದ್ದರೂ ಭಗವಂತನಾದ ಹರಿಯನ್ನಾಶ್ರಯಿಸಿದ ಪ್ರತ್ಯೇಕ ಜವಾಬ್ದಾರಿಯುತ ಜೀವಿಗಳು.

ಮಾಯೆಯ ಒಡೆಯ ಹರಿ; ಆದ್ದರಿಂದ ಅವಳು ಅವನ ಸಂತೋಷಕ್ಕಾಗಿ ಸೇವೆ ಸಲ್ಲಿಸುತ್ತಾಳೆ. ಭಗವಂತನ ಹ್ಲಾದಿನಿ ಶಕ್ತಿಯ ಸಹಾಯವಿಲ್ಲದಾಗ ಮಾಯೆಯ ಮೋಹಕ್ಕೆ ಗುರಿಯಾಗುವ ಹಾಗೆ ಆತ್ಮ ಅಥವಾ ಜೀವಿಯನ್ನು ಸೃಷ್ಟಿಸಲಾಗಿದೆ. ಭಗವಂತ ಮತ್ತು ಜೀವಿಯ ನಡುವೆ ನಿರಾಕಾರವಾದದ ಯಾವುದೇ ಕೈವಾಡವೂ ನಾಶಪಡಿಸಲಾಗದಂತಹ ಸ್ವಾಭಾವಿಕವಾದ ಮತ್ತು ಅಂತರ್ಜನಿತ ವ್ಯತ್ಯಾಸವಿದೆ. ‘‘ಯಾವಾಗ ಈ ಜೀವಿಗಳನ್ನು ಸೃಷ್ಟಿಸಲಾಯಿತು ಮತ್ತು ಮೋಹಗೊಳಿಸಲಾಯಿತು?" ಎಂಬ ದಾರಿ ತಪ್ಪಿಸುವ ಪ್ರಶ್ನೆಯನ್ನು ಕೇಳಬೇಡಿ. ಆಧ್ಯಾತ್ಮಿಕ ಇತಿಹಾಸದಲ್ಲಿ ಮಾಯೆಯ ಸಮಯಕ್ಕೆ ಯಾವದೇ ಅಸ್ತಿತ್ವವಿಲ್ಲ. ಏಕೆಂದರೆ ಜೀವಿಗಳು ಭೌತಿ–ಕತೆಗೆ ಮೋಹಗೊಂಡ ನಂತರ ಕಾಲವು ಪ್ರಾರಂಭವಾದ ಕಾರಣ ಈ ವಿಷಯಗಳನ್ನು ಭೌತಿಕ ಕಾಲಗಣನೆಯ ಶಾಸ್ತ್ರವನ್ನು ಉಪಯೋಗಿಸಿ ಕಂಡುಕೊಳ್ಳಲಾಗದು.

## ೫. ಭ್ರಮೆಯಲ್ಲಿ ಬಂದಿಯಾದ ಆತ್ಮ

ಪ್ರಕೃತಿ, ಮಾಯಾ, ಪ್ರಧಾನ, ಪ್ರಪಂಚ ಮತ್ತು ಅವಿದ್ಯ ಇವು ವಿವಿಧ ಅವಸ್ಥೆ ಮತ್ತು ಲಕ್ಷಣಗಳ ಪ್ರಕಾರ ಒಂದೇ ತತ್ತ್ವದ ವಿವಿಧ ನಾಮಗಳು. ಮಾಯೆ ಪರಾತ್ಪರನ ಸ್ವರೂಪ ಶಕ್ತಿಯಿಂದ ಸ್ವತಂತ್ರ ಶಕ್ತಿಯಲ್ಲ. ಅವಳು ಭಗವಂತನಿಗೆ ಕೃತಘ್ನರಾಗಿರುವವರೆಲ್ಲರನ್ನೂ ಸನ್ಮಾರ್ಗಕ್ಕೆ ತರುವ ಅವನ ಆಜ್ಞೆಯನ್ನು ಪಾಲಿಸುವ ಒಬ್ಬ ಭಕ್ತಳು ಅಷ್ಟೇ. ಮಾಯೆಯು ತಪ್ಪಿತಸ್ಥ ಜೀವಿಗಳನ್ನು ತಿದ್ದುವ ಮನೆಯ ಹೊಣೆಯನ್ನು ಭಗವಂತನಿಂದ ವಹಿಸಲ್ಪಟ್ಟವಳು ಮತ್ತು ಅವಳ ಶಕ್ತಿಯು ಭಗವಂತನ ಪರಮ ಶಕ್ತಿಯ ಪ್ರತಿಬಿಂಬವಾಗಿದೆ. ತಾವು ಭಗವಂತನ ನಿತ್ಯ ಸೇವಕರೆಂಬುದನ್ನು ಮರೆತು ಅವನಿಂದ ಬೇರ್ಪಟ್ಟು ಸ್ವತಂತ್ರವಾಗಿ ಆನಂದಿಸಲು ಯೋಚಿಸಿ ತಮ್ಮ ಸ್ವತಂತ್ರ ಸಂಕಲ್ಪವನ್ನು ದುರುಪಯೋಗಪಡಿಸಿಕೊಳ್ಳುವ ಎಲ್ಲ ಜೀವಿಗಳು ತಮ್ಮ ದಂಡಾರ್ಹ ದಾಸ್ಯಕ್ಕಾಗಿ ಮತ್ತು ತಿದ್ದುಪಡಿಗಾಗಿ ಮಾಯಾಪ್ರಪಂಚದಲ್ಲಿ ಸೆರೆಯಾಗುತ್ತಾರೆ.

ಮಾಯೆಗೆ ಮೂರು ಲಕ್ಷಣಗಳಿರುವವು. ಸಾತ್ವಿಕ, ರಾಜಸಿಕ ಮತ್ತು ತಾಮಸಿಕ. ಈ ಗುಣಗಳು ಕೃತಘ್ನರಾದ ಆತ್ಮಗಳನ್ನು ಬಂಧನದಲ್ಲಿಡಲು ಉಪಯೋಗಿಸುವ ಸರಪಳಿಗಳ ಹಾಗೆ. ನಂತರ ಮಾಯೆಯು ಆತ್ಮದ ಆಧ್ಯಾತ್ಮಿಕ ರೂಪದ ಮೇಲೆ ಒಂದು ದ್ವಿಗುಣದ ಹೊದಿಕೆಯನ್ನು ಲೇಪಿಸುತ್ತದೆ. ಹೊದಿಕೆಯನ್ನು ಲಿಂಗ ಮತ್ತು ಸ್ಥೂಲ ಎಂಬ ಪದಗಳಲ್ಲಿ ವಿವರಿಸಲಾಗಿದೆ. ಮಾಯೆಯ ಅಸ್ತಿತ್ವಕ್ಕೆ ೨೪ ಧಾತುಗಳಿರುವುದು. ಐದು ಮೂಲಧಾತುಗಳು (ಭೂಮಿ, ನೀರು, ಅಗ್ನಿ, ಗಾಳಿ ಮತ್ತು ಆಕಾಶ), ಐದು ಗುಣಲಕ್ಷಣಗಳು (ಶಬ್ದ, ಸ್ಪರ್ಶ, ದೃಷ್ಟಿ, ರುಚಿ ಮತ್ತು ವಾಸನೆ), ಐದು ಜ್ಞಾನ ಸಂಪಾದಿಸುವ ಇಂದ್ರಿಯಗಳು (ಕಣ್ಣು, ಕಿವಿ, ಮೂಗು, ನಾಲಿಗೆ, ಮತ್ತು ಚರ್ಮ), ಐದು ಕರ್ಮೇಂದ್ರಿಯಗಳು (ಕೈಗಳು, ಕಾಲುಗಳು, ಮಾತು, ಜನನಾಂಗ ಮತ್ತು ವಿಸರ್ಜನಾಂಗ), ಈ ಇಪತ್ತು ಸ್ಥೂಲ ಅಥವಾ ದೇಹದ ಬಾಹ್ಯ ಹೊದಿಕೆಗಳಾಗಿವೆ. ಮನಸ್ಸು ಬುದ್ಧಿ, ಕಲುಷಿತ ಪ್ರಜ್ಞೆ, ಮತ್ತು ಅಹಂಕಾರಗಳು ಲಿಂಗದೇಹ ಅಥವಾ ಒಳ ಹೊದಿಕೆಗಳಾಗಿವೆ. ಆತ್ಮದ ಆಧ್ಯಾತ್ಮಿಕ ರೂಪವನ್ನು ಆವರಿಸಿದ ನಂತರ ಮಾಯೆಯು ಬದ್ಧಾತ್ಮಗಳನ್ನು ವಿವಿಧ ಬಗೆಯ ಕೆಲಸಗಳಲ್ಲಿ ತೊಡಗಿಸುತ್ತದೆ. ಮಾಯೆಯ ಕೆಲಸ ಕರ್ಮ, ಅಕರ್ಮ ಮತ್ತು ವಿಕರ್ಮಗಳಿಂದ ಕೂಡಿದೆ. ಸ್ಮಾರ್ತ ಬ್ರಾಹ್ಮಣರು ವರ್ಣಾಶ್ರಮ ಧರ್ಮದ ನಿಯಮವನ್ನು ಅನುಸರಿಸಿ ಪುಣ್ಯ ಪ್ರಾಪ್ತಿಗಾಗಿ ಸಾಂಪ್ರದಾಯಿಕವಾಗಿ ಮಾಡುವ ಸತ್ಕಾರ್ಯಗಳಂತಹ ಕ್ರಿಯೆಗಳೇ ಕರ್ಮ. ನಿರ್ದೇಶಿಸಿದ ಕರ್ತವ್ಯವನ್ನು ವರ್ಜಿಸುವುದೇ ಅಕರ್ಮ. ಪಾಪ ಅಥವಾ ಅಪರಾಧ ಮಾಡುವುದೇ ವಿಕರ್ಮ. ಒಳ್ಳೆಯ ಕರ್ಮಗಳನ್ನು ಮಾಡುವುದರಿಂದ ಬ್ರಹ್ಮಲೋಕದಂತಹ ಉನ್ನತ ಸ್ಥಾನ ಪ್ರಾಪ್ತಿಯಾಗುತ್ತದೆ, ಅಕರ್ಮವು ಒಬ್ಬನನ್ನು ಭೂಮಿಯ ಮೇಲೆ ಒಂದು ಅನಿಷ್ಟ ಸ್ಥಿತಿಯಲ್ಲಿಡುತ್ತದೆ, ಮತ್ತು ವಿಕರ್ಮವು ಆತ್ಮಗಳನ್ನು ನರಕ ಜೀವನಕ್ಕೆ ಒಗೆಯುತ್ತದೆ. ಪಾಪಾತ್ಮಗಳು ತಮ್ಮ ಲಿಂಗ ದೇಹದೊಂದಿಗೆ ದೇಹದಿಂದ ದೇಹಕ್ಕೆ ಸಂಚರಿಸುತ್ತ ಕರ್ಮ ಮತ್ತು ವಿಕರ್ಮಗಳನ್ನು ಮಾಡುತ್ತ ಸ್ವರ್ಗದವರೆಗೆ ಮೇಲೇರಿ ಮತ್ತೆ ಪುನಃ ತಮ್ಮ ಸತ್ಕರ್ಮವು ತೀರಿದ ನಂತರ ನರಕಕ್ಕೆ ಹೋಗುತ್ತವೆ. ನರಕದಲ್ಲಿ ಶಿಕ್ಷೆ ಅನುಭವಿಸಿದ ನಂತರ ಪುನಃ ಕಾಮ್ಯಕರ್ಮದ ವೇದಿಕೆಗೇರುತ್ತವೆ. ಹೀಗೆ ಕೆಲವು ಬಾರಿ ಸಂಹಾರ ಮತ್ತು ಕೊಲೆಗಳನ್ನು ಅನುಭವಿಸುತ್ತ, ಮತ್ತೆ ಕೆಲವು ಬಾರಿ ರಾಜರಾಣಿಯರಂತೆ ಮೆರೆಯುವ ಪಾಪಾತ್ಮಗಳ ಸ್ಥಿತಿಯು

ತೀವ್ರ ಶೋಚನೀಯವಾಗಿರುತ್ತದೆ. ಆದ್ದರಿಂದ ಈ ಐಹಿಕ ಜಗತ್ತು ಕೆಲವರು ಪ್ರತಿಪಾದಿಸುವ ಹಾಗೆ ಸುಖಾನುಭವದ ನೆಲೆಯಲ್ಲದೇ ಒಂದು ಸೆರೆಮನೆ ಅಥವಾ ತಪ್ಪಿತಸ್ಥರನ್ನು ತಿದ್ದುವ ಮನೆಯಾಗಿದೆ.

## ೬. ಭ್ರಮೆಯಿಂದ ಬಿಡುಗಡೆಗೊಂಡ ಆತ್ಮ

ಜೀವಿಗಳು ಎಲ್ಲ ರೀತಿಯ ಸುಖ ಮತ್ತು ದುಃಖಗಳನ್ನು ಅನುಭವಿಸುತ್ತ ಅನಾದಿ ಕಾಲದಿಂದಲೂ ಮಾಯೆಯ ಅಸ್ತಿತ್ವದ ಹಾದಿಯಲ್ಲಿ ಸಂಚರಿಸುತ್ತಿವೆ. ಒಬ್ಬನು ಈ ಅಹಿತಕರವಾದ ಪರಿಸ್ಥಿತಿಯಿಂದ ಬಿಡುಗಡೆಯಾಗುವುದು ಹೇಗೆ? ಸಾಂಪ್ರದಾಯಿಕ ಧರ್ಮಾಚರಣೆಗಳು, ಕರ್ತವ್ಯ ಪಾಲನೆ, ಯೋಗ, ಶರೀರ ಮತ್ತು ಮನಸ್ಸಿನ ಶಕ್ತಿಗಳ ಅಭಿವೃದ್ಧಿ, ಸಾಂಖ್ಯ(ಶಾಸ್ತ್ರಾಧಾರಿತ ತತ್ತ್ವ ಸಂಬಂಧಿತವಾದ ವಿಶ್ಲೇಷಣೆ), ತಾನು ಒಬ್ಬ ಆಧ್ಯಾತ್ಮಿಕ ಜೀವಿ ಎಂಬ ಸಾಮಾನ್ಯ ಜ್ಞಾನ, ಮತ್ತು ಜಗತ್ತಿನ ಎಲ್ಲ ಸುಖವನ್ನು ತ್ಯಜಿಸುವ ವೈರಾಗ್ಯ – ಈ ಎಲ್ಲವೂ ಒಬ್ಬನು ತನಗೆ ನಿಜವಾಗಿಯೂ ಏನು ಬೇಕೆಂಬುದನ್ನು ಪಡೆಯಲು ಸರಿಯಾದ ಮಾರ್ಗವಲ್ಲ. ಹರಿ ಭಕ್ತಿ ರಸದಿಂದ ಹೃದಯ ಕರಗಿದ ಒಬ್ಬ ವೈಷ್ಣವನ ಸಂಪರ್ಕಕ್ಕೆ ಒಬ್ಬ ಮನುಷ್ಯನು ಬಂದಾಗ ಮಾತ್ರ ಅವನಿಗೆ ಭಕ್ತಿಯ ಮಧುರ ತತ್ತ್ವವನ್ನು ಗ್ರಹಿಸುವ ಮತ್ತು ನಿರಂತರವಾಗಿ ಕೃಷ್ಣ ಭಕ್ತಿಯನ್ನು ಅಭ್ಯಾಸ ಮಾಡುತ್ತ ಭಕ್ತನ ಹೆಜ್ಜೆಯನ್ನು ಅನುಸರಿಸುವ ಅಭಿಲಾಷೆ ಮೂಡುತ್ತದೆ. ಅವನು ನಿಧಾನವಾಗಿ ತನ್ನ ಮಾಯೆಯ ಸ್ಥಿತಿಯನ್ನು ಶುದ್ಧೀಕರಿಸಿ ಅಂತಿಮವಾಗಿ ತನ್ನ ನೈಜ ಸ್ವಭಾವವನ್ನು ಪಡೆದ ನಂತರ ಆತ್ಮದ ಅಂತಿಮ ಪ್ರಾಪ್ತಿಯಾದ ಅತಿ ಮಧುರ ಪರಿಶುದ್ಧವಾದ ರಸವನ್ನನುಭವಿಸುತ್ತಾನೆ. ಸತ್ಸಂಗ ಅಥವಾ ಆಧ್ಯಾತ್ಮಿಕ ಜನರ ಸಂಗವೊಂದೇ ಜೀವನದ ಅಂತಿಮ ಗುರಿಯನ್ನು ಪಡೆಯುವ ಏಕೈಕ ಮಾರ್ಗ. ಭಕ್ತಿಯು ಆತ್ಮದಿಂದ ಆತ್ಮಕ್ಕೆ ಬರುವ ಒಂದು ತತ್ತ್ವ ಮತ್ತು ಜಡಜಗತ್ತಿನಲ್ಲಿ ವಿದ್ಯುಚ್ಛಕ್ತಿ ಅಥವಾ ಲೋಹಚುಂಬಕ ಇರುವ ಹಾಗೆ ಅದು ಸ್ವಯಂ ಒಂದು ಹಿತಕರ ಮೂಲದಿಂದ ಇನ್ನೊಂದಕ್ಕೆ ಪ್ರವಹಿಸುತ್ತದೆ. ಭಕ್ತಿಯ ತತ್ತ್ವವು ನಿಷ್ಠೆಯದ್ದಾಗಿದ್ದು, ಜೀವನದ ಎಲ್ಲ ಹಂತಗಳಲ್ಲಿ ಸಂಪೂರ್ಣವಾಗಿ ಭಗವಂತನನ್ನು ಅವಲಂಬಿಸಿರುತ್ತದೆ. ಮಾಡಿದ ಉಪಕಾರಕ್ಕೆ ಕೃತಜ್ಞತೆಯನ್ನು ಯಾಚಿಸುವ ಕರಾರಿಗೆ ಒಳಪಡುವ ಕರ್ತವ್ಯವು ಸ್ವಾಭಾವಿಕ ಪ್ರೀತಿಗೆ ವಿರುದ್ಧವಾಗಿದ್ದು ಭಕ್ತಿಯೆನಿಸುವುದಿಲ್ಲ.

ಈ ಭೌತಿಕ ಜಗತ್ತಿನಲ್ಲಿ ನೀತಿಯ ತತ್ತ್ವವು ತನ್ನದೇ ಆದ ರೀತಿಯಲ್ಲಿ ಒಳ್ಳೆಯದಾಗಿದ್ದರೂ ಕೊನೆಗೆ ಆಧ್ಯಾತ್ಮಿಕ ಫಲಿತಾಂಶಗಳನ್ನು ನೀಡುವುದು ಅಪರೂಪ. ಭಗವಂತನ ಪರಮ ಸೌಂದರ್ಯದಲ್ಲಿನ ಶ್ರದ್ಧೆ, ಆ ಪರಾತ್ಪರನನ್ನು ನಿಸ್ವಾರ್ಥವಾಗಿ ನಿರಂತರ ಸೇವಿಸುವ ಅಭಿಲಾಷೆ, ಮತ್ತು, ಸುಖ ಮತ್ತು ಸ್ವಹಿತಕ್ಕೆ ಸಂಬಂಧಿಸಿದ ಇತರ ಎಲ್ಲ ಭೌತಿಕ ಹಿತಾಸಕ್ತಿಗಳಲ್ಲಿ ಪರಿಣಾಮಕಾರಿ ತಿರಸ್ಕಾರ, ಈ ಮೂರು ಶ್ರದ್ಧೆಯ ಪ್ರಧಾನ ಅಂಗಗಳು ಅಥವಾ ಭಕ್ತಿಯ ನಿಜವಾದ ಹಂಬಲ. ಭಕ್ತಿಯು ಸ್ವಭಾವತಃ ಅನನ್ಯವಾಗಿರುವುದು. ಹಾಗಾದರೆ ಭಕ್ತಿಯ ಕಾರಣ ಸಂಭಾವ್ಯತೆಯೇ? ಇಲ್ಲ, ಸುಕೃತಿ ಅಥವಾ ಸತ್ಕಾರ್ಯಗಳೇ ಅದರ ಚಾಲನೆಯ ಮೂಲ ತತ್ತ್ವ.

ಸತ್ಕಾರ್ಯವು ಎರಡು ಬಗೆ. ಸದ್ಗುಣ ಮತ್ತು ಉನ್ನತಿ ತರುವಂತಹ ಕಾರ್ಯಗಳನ್ನೊಳಗೊಂಡ ಸದಾಚಾರ ಮಾಡುವಂತಹದ್ದು ಒಂದು. ಆಧ್ಯಾತ್ಮಿಕ ಏಳಿಗೆಯನ್ನು ತರುವ ಪ್ರವೃತ್ತಿ ಇರುವ ಎಲ್ಲ ಚಟುವಟಿಕೆಗಳನ್ನೊಳಗೊಂಡ ಸತ್ಕಾರ್ಯ ಇನ್ನೊಂದು ಬಗೆ. ಈ ಎರಡನೆಯ ಬಗೆ–ಯ ಸತ್ಕಾರ್ಯವು ಅಥವಾ ಸುಕೃತಿಯು ಒಬ್ಬನನ್ನು ಒಬ್ಬ ನಿಷ್ಠೆಯುಳ್ಳ ವೈಷ್ಣವನ ಸಂಪರ್ಕಕ್ಕೆ ತರುತ್ತದೆ ಮತ್ತು ಅವರಿಂದ ಒಬ್ಬನು ಮೊದಮೊದಲು ಆತ್ಮದಲ್ಲಿ ಶ್ರದ್ಧೆಯನ್ನು ಗ್ರಹಿಸಬಹುದು; ನಂತರ ಭಕ್ತಿಯನ್ನು ಸ್ವೀಕರಿಸಲು ಶಕ್ತನಾದ ಒಬ್ಬನು ವಾಸ್ತವದಲ್ಲಿ ತನ್ನ ಗುರುಗಳಾದ ಆ ವೈಷ್ಣವರಿಂದ ಭಕ್ತಿಪೂರ್ವಕ ಸೇವೆಯ ಬೀಜವನ್ನು ಪಡೆಯುತ್ತಾನೆ.

## ೭. ಪ್ರತ್ಯೇಕತೆಯಲ್ಲಿ ಏಕತೆ

ಅನುಭಾವಿಕ ಚರ್ಚೆಗಳು ಸರ್ವಥಾ ವ್ಯರ್ಥ. ವೇದಗಳು ಕೆಲವು ಬಾರಿ ಜೀವಿಯು ಭಗವಂತನಿಂದ ಭಿನ್ನನಾಗಿರುವುದಾಗಿ ಮತ್ತು ಕೆಲವು ಬಾರಿ ಭಗವಂತನಿಗೆ ಸಮನಾಗಿರುವುದೆಂದು ಹೇಳುತ್ತವೆ. ವಾಸ್ತವವಾಗಿ ವೇದಗಳು ಎಂದೆಂದೂ ಸತ್ಯವನ್ನೇ ಹೇಳುತ್ತವೆ. ಜೀವಿಯು ಏಕಕಾಲದಲ್ಲಿ ಭಗವಂತನಿಂದ ಭಿನ್ನವಾಗಿ ಮತ್ತು ಅವನಿಗೆ ಸಮನಾಗಿರುತ್ತವೆ(ಅಚಿಂತ್ಯ ಭೇದಾಭೇದ ಪ್ರಕಾಶ).

ಇದನ್ನು ವಿಚಾರವಾದಿಗಳಿಂದ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಹಾಗಾಗಿ ಮಾನವನ ಗ್ರಹಿಕೆಗೆ ಮೀರಿ ತನ್ನ ಶಕ್ತಿಗಳನ್ನು ಪ್ರಯೋಗಿಸುವಲ್ಲಿ ಭಗವಂತನು ಜೀವಿಯಿಂದ ಮತ್ತು ಪ್ರಪಂಚದಿಂದ ಭಿನ್ನನಾಗಿರುವನು ಮತ್ತು ಹೀಗಿದ್ದೂ ಎಲ್ಲ ಕಾಲದಲ್ಲಿ ಅವುಗಳೊಂದಿಗೆ ಸಮನಾಗಿರುತ್ತಾನೆ ಎಂದು ಹೇಳಬಹುದು. ವೇದಾಂತವು ನಮಗೆ ಶಕ್ತಿ ಪರಿಣಾಮವಾದವನ್ನು ಬೋಧಿಸುತ್ತದೆ ವಿನಃ ಶಂಕರಾಚಾರ್ಯರು ಬೋಧಿಸಿದ ಅಸತ್ ಶಾಸ್ತ್ರವಾದ ವಿವರ್ತವಾದವನ್ನಲ್ಲ. ಶಂಕರರ ಬೋಧನೆಗಳು ವಿವಿಧ ರೀತಿಗಳಲ್ಲಿ ವಿವರಿಸಲ್ಪಟ್ಟಿವೆ. ಕೆಲವರು ಜೀವ ಮತ್ತು ಜಗತ್ತು ಭಗವಂತನಿಂದ ಹೊರಬಂದಿರುವದೆಂದು ಹೇಳುತ್ತಾರೆ ಮತ್ತೆ ಕೆಲವರು ಜೀವ ಮತ್ತು ಜಗತ್ತು ಭಗವಂತನ ವಿಸ್ತರಣೆಗಳೆಂದು ಸಿದ್ಧಪಡಿಸುತ್ತಾರೆ. ಶಂಕರರು ಬ್ರಹ್ಮಪರಿಣಾಮವನ್ನು (ಪ್ರಪಂಚದೊಳಗೆ ಭಗವಂತನ ಪರಿವರ್ತನೆಯ) ನಿವಾರಿಸುವ ಸಲುವಾಗಿ ಯಾವುದೇ ಸ್ಥಿತಿಯಲ್ಲಿ ಭಗವಂತನು ಪರಿವರ್ತನೆ ಹೊಂದುವುದಿಲ್ಲ, ಆದರೆ ಒಂದು ಮಡಿಕೆ ಹೇಗೆ ಅವಕಾಶದ ಒಂದು ಭಾಗವನ್ನು ಮರೆ ಮಾಡುತ್ತದೊ ಹಾಗೆ ಮಾಯೆಯು ಭಗವಂತನ ಒಂದು ಭಾಗವನ್ನು ಮರೆ ಮಾಡುತ್ತದೆ; ಅಥವಾ ಭಗವಂತನನ್ನಲ್ಲದೆ ಬೇರೇನೂ ಅಸ್ತಿತ್ವದಲ್ಲಿರದ ಕಾರಣ ಅವಿದ್ಯೆ ಅಥವಾ ಅಜ್ಞಾನದಮೇಲೆ ಭಗವಂತ ಪ್ರತಿಬಿಂಬಿತವಾಗಿದ್ದಾನೆ, ಎಂಬ ವಿವರ್ತವಾದವನ್ನು ಶ್ರೀಪಾದ ವ್ಯಾಸದೇವರು ಬೋಧಿಸಿದ್ದಾರೆ ಎಂದು ವಾದಿಸಿರುವರು.

ಇವೆಲ್ಲವು ನಿಷ್ಪ್ರಯೋಜಕ ಮತ್ತು ಅಸ್ಪಷ್ಟವಾದ ವಾದಗಳು. ಭಗವಂತನು ಸ್ಥಿರ ಮತ್ತು ಎಂದಿಗೂ ಬದಲಾವಣೆಗೆ ಒಳಪಡುವುದಿಲ್ಲ ಎಂಬ ವೇದಾಂತದ ಬೋಧನೆಯು ಇಲ್ಲಿ ಸ್ಪಷ್ಟವಾಗುತ್ತದೆ. ಅವನ ಶಕ್ತಿಯೊಂದೇ ಜೀವಿಗಳನ್ನು ಮತ್ತು ಐಹಿಕ ಜಗತ್ತನ್ನು ತನ್ನದೇ ಆದ ಪರಿಣಾಮದಿಂದ ಸೃಷ್ಟಿಸುತ್ತದೆ. ಉದಾಹರಣೆಯನ್ನು ಚಿನ್ನವನ್ನು ತಯಾರಿಸುವವನು ಕಲ್ಲಿನಿಂದ ಚಿನ್ನ ತಯಾರಿಸುವ ಕ್ರಿಯೆಯಲ್ಲಿ ಕಾಣಬಹುದು, ಕಲ್ಲಿನಿಂದ ಶಕ್ತಿಯು ಚಿನ್ನದರೂಪದಲ್ಲಿ ಬಂದು ಕಲ್ಲು ಯಾವುದೇ

ಬದಲಾವಣೆಯನ್ನು ಹೊಂದುವುದಿಲ್ಲ. ಹೀಗೆ ಚಿತ್ ಶಕ್ತಿ ನಿತ್ಯ ರಸದ ತನ್ನೆಲ್ಲ ವೈಶಿಷ್ಟ್ಯಗಳಿಂದ ಚಿತ್ ಜಗತ್ತಾಗಿ ಮೂಡುತ್ತದೆ ಮತ್ತು ಜೀವಶಕ್ತಿಯು ಅನೇಕಾನೇಕ ಜೀವಿಗಳಾಗಿ ಮೂಡುತ್ತದೆ, ಕೆಲ ಜೀವಿಗಳು ವೈಕುಂಠದಲ್ಲಿ ದೇವದೂತರಾಗಿ ಉಳಿಯುತ್ತವೆ ಮತ್ತೆ ಇನ್ನುಕೆಲವು ಈ ಪ್ರಪಂಚದಲ್ಲಿ ವಿವಿಧ ಪರಿಸ್ಥಿತಿಯಲ್ಲಿ ಅನೇಕ ಆಕಾರಗಳು ಮತ್ತು ರೂಪಗಳಲ್ಲಿ ಸಂಚರಿಸುತ್ತವೆ. ಮಾಯಾ ಶಕ್ತಿಯು ಬದ್ಧಾತ್ಮಗಳ ನಿವಾಸಕ್ಕಾಗಿ ಮತ್ತು ಮನರಂಜನೆಗಳಿಗಾಗಿ ಅನೇಕ ಲೋಕಗಳನ್ನು ಸೃಷ್ಟಿಸುತ್ತದೆ.

ವಿವರ್ತವಾದವು ಒಂದು ದೋಷ ಎಂಬುದರ ಬಗ್ಗೆ ಸಂಶಯವಿಲ್ಲ ಮತ್ತು ವೇದಗಳ ಬೋಧನೆಗಳಿಗೆ ಬಹುಪಾಲು ವಿರುದ್ಧವಾಗಿದೆ. ಆ ಕಾರಣವಾಗಿ ಆಧ್ಯಾತ್ಮಿಕ ಪ್ರೇಮವು ನಿತ್ಯ ಎಂಬ ಸತ್ಯಾಂಶವನ್ನು ಬೆಂಬಲಿಸುವ ಶಕ್ತಿಪರಿಣಾಮವೊಂದೇ ಸತ್ಯ. ವಿವರ್ತವಾದವು ನಿಜವಾದಲ್ಲಿ ಇದರ ಸ್ವಾಭಾವಿಕ ಪರಿಣಾಮವು ಆಧ್ಯಾತ್ಮಿಕ ಪ್ರೇಮವು ಒಂದು ಅಶಾಶ್ವತವಾದ ತತ್ತ್ವವೆಂದು ಘೋಷಿಸುವುದಾಗುತ್ತದೆ.

## ೮. ಭಕ್ತಿಯೊಂದೇ ಏಕೈಕ ಮಾರ್ಗ

ಕರ್ಮವೊಂದೇ ನೇರವಾಗಿ ಮತ್ತು ತುರ್ತಾಗಿ ಒಂದು ಆಧ್ಯಾತ್ಮಿಕ ಫಲಿತಾಂಶವನ್ನು ಉತ್ಪಾದಿಸುವುದಿಲ್ಲ. ಹಾಗಾಗುವುದೇ ಆದರೆ ಅದು ಭಕ್ತಿಯ ಮೂಲಕ ಮಾತ್ರ. ಹಾಗಾಗಿ ಭಕ್ತಿಯು ಸ್ವತಂತ್ರವಾಗಿದ್ದು ಕರ್ಮ ಮತ್ತು ಜ್ಞಾನ ಪರಾವಲಂಬಿ ತತ್ತ್ವಗಳು. ಮನುಷ್ಯ ಆಧ್ಯಾತ್ಮಿಕ ಜೀವಿ ಎಂಬ ಜ್ಞಾನವು ನೇರವಾಗಿ ಅಂತಿಮ ಪರಿಣಾಮವನ್ನು ತರಲು ಸಾಧ್ಯವಿಲ್ಲ. ಹಾಗೇನಾದರೂ ಆದರೆ ಅದು ಭಕ್ತಿಯ ನೆರವಿನಿಂದ ಆಗುತ್ತದೆ. ಆದ್ದರಿಂದ ಅಂತಿಮ ಗುರಿಯನ್ನು ಸಾಧಿಸಲು ಭಕ್ತಿಯೇ ಏಕೈಕ ಮಾರ್ಗ. ಕರ್ಮ ಮತ್ತು ಜ್ಞಾನ ಇತ್ಯಾದಿಗಳಿಂದ ಮಿಶ್ರಿತವಾಗದೆ, ತನಗಿರುವ ಭಾವನೆಗಳನ್ನು ವೃದ್ಧಿಸುವುದನ್ನು ಬಿಟ್ಟು ಇನ್ನೆಲ್ಲ ಬಯಕೆಗಳಿಂದ ಮುಕ್ತನಾಗಿ ಕೃಷ್ಣನಲ್ಲಿ ಒಬ್ಬ ಸಖನ ಭಾವನೆ ಬೆಳೆಸಿಕೊಳ್ಳುವುದೇ ಭಕ್ತಿ. ಭಕ್ತಿಯು ಸ್ವತಃ ತಾನು ಒಂದು ಭಾವನೆ ಮತ್ತು ಒಂದು ಕ್ರಿಯೆ ಎಂಬುದನ್ನು ನೋಡಬಹುದು. ಭಕ್ತಿಯಲ್ಲಿ ಮೂರು ಹಂತಗಳು: ಸಾಧನ ಭಕ್ತಿ, ಭಾವ ಭಕ್ತಿ ಮತ್ತು ಪ್ರೇಮ ಭಕ್ತಿ. ಕೃಷ್ಣನಲ್ಲಿ ಇನ್ನೂ ಪ್ರೇಮಪೂರ್ವಕ ಭಾವನೆ ಜಾಗೃತವಾಗದ ಹಂತವೇ ಸಾಧನ ಭಕ್ತಿ. ಭಾವ ಭಕ್ತಿಯಲ್ಲಿ ಭಾವನೆಯು ಜಾಗೃತವಾಗುತ್ತದೆ ಮತ್ತು ಪ್ರೇಮ ಭಕ್ತಿಯಲ್ಲಿ ಭಾವನೆಯು ಸಂಪೂರ್ಣವಾಗಿ ಕ್ರಿಯೆಯಲ್ಲಿ ಪ್ರಕಟವಾಗುತ್ತದೆ. ಪ್ರೇಮದ ಆಧ್ಯಾತ್ಮಿಕ ಧ್ಯೇಯದೆಡೆಗೆ ಆಧ್ಯಾತ್ಮಿಕ ಭಾವನೆಯೇ ಭಕ್ತಿ.

ಸಾಧನ ಭಕ್ತಿಯಲ್ಲಿ ಎರಡು ವಿಧ: ಒಂದು ವೈಧಿ ಸಾಧನ ಭಕ್ತಿ ಮತ್ತೊಂದು ರಾಗಾನುಗ ಸಾಧನ ಭಕ್ತಿ. ವೈಧಿ ಎಂಬ ಪದವನ್ನು "ವಿಧಿ" ಅಥವಾ "ನಿಯಮ" ಎಂಬ ಪದದಿಂದ ತೆಗೆದುಕೊಳ್ಳಲಾಗಿದೆ. ವೈಧಿ ಭಕ್ತಿಯನ್ನು ಶಾಸ್ತ್ರಗಳ ನಿಯಮಗಳಿಂದ ಜಾಗೃತಗೊಳಿಸಬೇಕಾಗುತ್ತದೆ, ಆದರೆ ರಾಗಾನುಗ ಭಕ್ತಿಯಲ್ಲಿ ಒಬ್ಬನು ಸ್ವಾಭಾವಿಕ ಒಲವಿನಿಂದ ಕೃಷ್ಣನನ್ನು ಪ್ರೀತಿಸುತ್ತಾನೆ ಮತ್ತು ಹೃದಯದೊಡೆಯನಾದ ಭಗವಂತನಿಗೆ ಸೇವೆ ಸಲ್ಲಿಸುವ ಬಲವಾದ ಆಸೆಯಿರುತ್ತದೆ. ಈ ಪ್ರಕ್ರಿಯೆಯ ಸೊಗಸಿನಿಂದ ಆಕರ್ಷಿತನಾದವನು ಬಹು ಬೇಗ ಕೃಷ್ಣನಲ್ಲಿ ತನ್ನ ಭಾವನೆಯನ್ನು

ಬೆಳೆಸಿಕೊಳ್ಳುವಲ್ಲಿ ಸಫಲನಾಗುತ್ತಾನೆ; ಆದರೆ ಇವೆರಡರಲ್ಲಿ ರಾಗಾನುಗ ಭಕ್ತಿಯು ವೈಧಿ ಭಕ್ತಿಗಿಂತಲು ಬಲವಾದದ್ದು. ಕೃಷ್ಣನಲ್ಲಿ ಸ್ನೇಹಭಾವವನ್ನು ಬೆಳೆಸಿಕೊಳ್ಳುವುದನ್ನು ಒಂಭತ್ತು ವಿಧದಲ್ಲಿ ಮಾಡಬಹುದು:

೧. ಕೃಷ್ಣನ ಆಧ್ಯಾತ್ಮಿಕ ನಾಮ, ರೂಪ, ಗುಣಗಳು ಮತ್ತು ಲೀಲೆಗಳನ್ನು ಶ್ರವಣ ಮಾಡುವುದು

೨. ಈ ಎಲ್ಲದರ ಬಗ್ಗೆ ಮಾತನಾಡುವುದು ಮತ್ತು ಗುಣಗಾನ ಮಾಡುವುದು

೩. ಈ ಎಲ್ಲವನ್ನು ಧ್ಯಾನಿಸುವುದು ಮತ್ತು ಸ್ಮರಣೆ ಮಾಡುವುದು

೪. ಅವನ ಪವಿತ್ರ ಪಾದ ಕಮಲಗಳ ಸೇವೆ ಮಾಡುವುದು

೫. ಅವನನ್ನು ಪೂಜಿಸುವುದು

೬. ಅವನಿಗೆ ಪ್ರಣಾಮವನ್ನು ಅರ್ಪಿಸುವುದು

೭. ಅವನಿಗೆ ತೃಪ್ತಿಯಾಗುವುದೆಲ್ಲವನ್ನು ಮಾಡುವುದು

೮. ಅವನಲ್ಲಿ ಸ್ನೇಹಭಾವವನ್ನು ಬೆಳೆಸಿಕೊಳ್ಳುವುದು

೯. ಅವನಿಗೆ ಪರಿಪೂರ್ಣವಾಗಿ ಶರಣಾಗುವುದು

ಈ ಎಲ್ಲ ಪ್ರಕ್ರಿಯೆಗಳಲ್ಲಿ ಕೃಷ್ಣನ ಕೀರ್ತನೆ ಅಥವಾ ನಾಮದ ಗುಣಗಾನ ಮಾಡುವ ಪ್ರಕ್ರಿಯೆ ಅತ್ಯುತ್ತಮವಾದದ್ದು.

ಈ ಬಗೆಯ ಪ್ರಕ್ರಿಯೆಯಲ್ಲಿ ವಿನಮ್ರ ಜ್ಞಾನದ ಅಗತ್ಯವಿರಬೇಕು ಮತ್ತು ವ್ಯರ್ಥವಾದ ಚರ್ಚೆಗಳನ್ನು ತ್ಯಜಿಸಬೇಕು. ಶ್ರೀ ಮೂರ್ತಿಯ (ಕೃಷ್ಣನ ಮೂರ್ತಿ ರೂಪ) ಪೂಜೆಯನ್ನು ವಿರೋಧಿಸುವವರು ಕೆಲವರಿದ್ದಾರೆ. ಅವರು ಹೇಳುತ್ತಾರೆ ‘‘ಶ್ರೀ ಮೂರ್ತಿಯನ್ನು ಪೂಜಿಸುವುದು ವಿಗ್ರಹರಾಧನೆ. ಶ್ರೀ ಮೂರ್ತಿಯು ಒಬ್ಬ ಕಲಾವಿದನಿಂದ ಮಾಡಲ್ಪಟ್ಟ ವಿಗ್ರಹ ಮತ್ತು ಅದನ್ನು ಪರಿಚಯಿಸಿದವನು ಬೇರೆ ಯಾರೂ ಅಲ್ಲ; ಪಾಪಪುರುಷನೇ (ಸೈತಾನ್)! ಅಂತಹ ಒಂದು ವಸ್ತುವನ್ನು ಪೂಜಿಸುವುದರಿಂದ ದೇವರ ಬಗ್ಗೆ ಅಸೂಯೆ ಜಾಗೃತವಾಗುತ್ತದೆ ಮತ್ತು ಅವನು ಸರ್ವಶಕ್ತ, ಸರ್ವಜ್ಞ ಮತ್ತು ಸರ್ವವ್ಯಾಪಿಯೆಂಬುದನ್ನು ಮಿತಿಗೊಳಿಸುತ್ತದೆ!"

ಇದಕ್ಕೆ ನಮ್ಮ ಉತ್ತರ, ‘‘ಸಹೋದರರೆ! ನಿಮ್ಮನ್ನು ನೀವು ದಾರಿತಪ್ಪಿಸುವ ಮತಾಭಿಪ್ರಾಯಗಳಿಗೆ

ಬಲಿಗೊಳಿಸದೇ ಪ್ರಶ್ನೆಯನ್ನು ನೇರವಾಗಿ ಅರ್ಥಮಾಡಿಕೊಳ್ಳಿರಿ. ಭಗವಂತನು ಒಬ್ಬನೇ ಆದ ಕಾರಣ ಅವನು ಅಸೂಯೆಪಡುವುದಿಲ್ಲ. ಸತಾನನು (ಪಾಪಪುರುಷ) ಒಂದು ಪರೋಕ್ಷ ಕಥೆಯ ವಿಷಯವಾಗಿದ್ದು ಕಲ್ಪನೆಯ ಒಂದು ವಸ್ತುವಾಗಿದ್ದಾನೆ. ಕಾಲ್ಪನಿಕವಾದದ್ದು ಭಕ್ತಿಗೆ ಅಡಚಣೆಯಾಗಬಾರದು."

ವಾಸ್ತವವಾಗಿ ಭಗವಂತನು ಪ್ರಕೃತಿಗೆ, ಅವಳ ನಿಯಮಗಳಿಗೆ ಅತೀತನಾಗಿದ್ದರೂ ಅವನನ್ನು ನಿರಾಕಾರ ಎಂದು ನಂಬುವವರೆಲ್ಲರು ಅವನನ್ನು ಪ್ರಕೃತಿಯ ಶಕ್ತಿ ಅಥವಾ ಗುಣಲಕ್ಷಣದೊಂದಿಗೆ ಗುರುತಿಸುತ್ತಾರೆ. ಅವನ ದಿವ್ಯ ಬಯಕೆಯೇ ನಿಯಮವಾಗಿದ್ದು, ಸಮಯ, ಅವಕಾಶ ಇತ್ಯಾದಿಗಳಂತಹ ಸೃಷ್ಟಿಯ ವಸ್ತುಗಳಲ್ಲಿ ಕಂಡುಬರಬಹುದಾದ ಗುಣಲಕ್ಷಣಗಳೊಂದಿಗೆ ಅವನನ್ನು ಗುರುತಿಸುವುದು ಅವನ ಅಪರಿಮಿತ ಶ್ರೇಷ್ಠತೆಯನ್ನು ಸೀಮಿತಗೊಳಿಸುವ ಧರ್ಮದ್ರೋಹವೆಸಗಿದಂತೆಯೇ ಸರಿ. ಸ್ವತಃ ತನ್ನ ಪರಾತ್ಪರ ಶಕ್ತಿಯಿಂದ ಆಳಲ್ಪಟ್ಟು ಪರಸ್ಪರ ವಿರೋಧಾಭಾಸವನ್ನು ತೋರುವ ಶಕ್ತಿಗಳು ಮತ್ತು ಗುಣಲಕ್ಷಣಗಳನ್ನು ತನ್ನಲ್ಲಿ ಹೊಂದಿರುವುದರಲ್ಲೇ ಅವನ ಪರಮ ಶ್ರೇಷ್ಠತೆಯು ಅಡಗಿದೆ.

ಸರ್ವವ್ಯಾಪಿ, ಸರ್ವಜ್ಞ ಹಾಗೂ ಸರ್ವಶಕ್ತ ಎಂಬ ಇನ್ನೆಲ್ಲಿಯೂ, ಇನ್ಯಾರಲ್ಲಿಯೂ ಕಾಣಲಾಗದ ಪರಮ ವೈಶಿಷ್ಟ್ಯತೆಗಳನ್ನು ಹೊಂದಿರುವ ಶ್ರೀ ಹರಿಯು ತನ್ನ ಸರ್ವಾಂಗಸುಂದರ ವ್ಯಕ್ತಿತ್ವಕ್ಕೆ ಅನ್ವರ್ಥನಾಗಿರುತ್ತಾನೆ. ಅವನ ಪವಿತ್ರ ಮತ್ತು ಪರಿಪೂರ್ಣವಾದ ವ್ಯಕ್ತಿತ್ವವು ಆಧ್ಯಾತ್ಮಿಕ ಜಗತ್ತಿನಲ್ಲಿ ನಿತ್ಯವಾಗಿ ಇರುತ್ತದೆ ಮತ್ತು ಏಕಕಾಲದಲ್ಲಿ ಪ್ರತಿಯೊಂದು ಸೃಷ್ಟಿಯಾದ ವಸ್ತು ಮತ್ತು ಸ್ಥಳದಲ್ಲಿ ತನ್ನ ಪರಿಪೂರ್ಣತೆಯಲ್ಲಿರುತ್ತದೆ. ಈ ಕಲ್ಪನೆಯು ಶ್ರೀ ಮೂರ್ತಿಯ ಎಲ್ಲ ಇತರ ಕಲ್ಪನೆಗಳನ್ನು ಮೀರುತ್ತದೆ. ಮಹಾಪ್ರಭುಗಳು ವಿಗ್ರಹರಾಧನೆಯನ್ನು ತಿರಸ್ಕರಿಸುತ್ತಾರೆ, ಆದಾಗ್ಯೂ ಶ್ರೀ ಮೂರ್ತಿಯ ಪೂಜೆಯನ್ನು ಆಧ್ಯಾತ್ಮಿಕ ಸಂಸ್ಕೃತಿಯ ಏಕೈಕ ನಿರ್ದೋಷವಾದ ಮಾರ್ಗವೆಂದು ಪರಿಗಣಿಸುತ್ತಾರೆ.

ಭಗವಂತನು ವ್ಯಕ್ತಿತ್ವವುಳ್ಳವನು ಮತ್ತು ಸರ್ವಾಂಗಸುಂದರನೆಂದು ತೋರಿಸಲಾಗಿದೆ. ವ್ಯಾಸದೇವರಂತಹವರು ಮತ್ತು ಇನ್ನಿತರರು ಆ ಸೌಂದರ್ಯವನ್ನು ತಮ್ಮ ಆತ್ಮಗಳ ಕಣ್ಣುಗಳಿಂದ ನೋಡಿದ್ದು ಅದರ ವಿವರಣೆಗಳನ್ನು ನೀಡಿದ್ದಾರೆ. ಪದಗಳು ಭೌತದ್ರವ್ಯದ ಒಟ್ಟಾದ ವಿವರಣೆಯನ್ನು ನೀಡುತ್ತದೆ ನಿಜ, ಆದಾಗ್ಯೂ ಆ ವಿವರಗಳಲ್ಲಿ ಸತ್ಯವನ್ನು ಗ್ರಹಿಸಬಹುದಾಗಿದೆ. ಆ ವಿವರಣೆಗಳ ಪ್ರಕಾರ ಒಬ್ಬನು ಶ್ರೀ ಮೂರ್ತಿಯನ್ನು ಚಿತ್ರಿಸಿ ಅದರಲ್ಲಿ ನಮ್ಮೆಲ್ಲರ ಹೃದಯದ ಭಗವಂತನನ್ನು ಅತ್ಯಾನಂದದಲ್ಲಿ ಕಾಣುತ್ತಾನೆ. ಸಹೋದರರೆ! ಇದು ತಪ್ಪೇ ಅಥವಾ ಪಾಪಪೂರಿತವಾದದ್ದೇ?

ಯಾರು ಭಗವಂತನಿಗೆ ಆಧ್ಯಾತ್ಮಿಕವಾದ ಅಥವಾ ಐಹಿಕವಾದ ಯಾವದೇ ಆಕಾರವಿಲ್ಲವೆಂದು ಹೇಳುತ್ತಾರೂ ಮತ್ತು ಅದೇ ಸಮಯದಲ್ಲಿ ಒಂದು ಅಸತ್ಯವಾದ ರೂಪವನ್ನು ಕಲ್ಪಿಸಿಕೊಂಡು ಪೂಜಿಸುತ್ತಾರೊ ಅವರು ನಿಜವಾಗಿಯು ವಿಗ್ರಹರಾಧಕರು. ಆದರೆ ಯಾರು ಮೂರ್ತಿಯ ಆಧ್ಯಾತ್ಮಿಕ ರೂಪವನ್ನು ತಮ್ಮ ಆತ್ಮಗಳ ಕಣ್ಣುಗಳಲ್ಲಿ ನೋಡುತ್ತ ಅವರು ಆ ಭಾವನೆಯನ್ನು ಮನಸ್ಸಿನವರೆಗೂ ಕೊಂಡೊಯ್ಯುತ್ತಾರೊ, ಮತ್ತು ಉತ್ತಮ ಭಾವನೆಯ ನಿರಂತರ ಅಧ್ಯಯನಕ್ಕಾಗಿ

ಐಹಿಕ ಕಣ್ಣುಗಳ ತೃಪ್ತಿಗೋಸ್ಕರವಾಗಿ ಒಂದು ಚಿತ್ರಣವನ್ನು ರೂಪಿಸುತ್ತಾರೊ ಅವರು ಯಾವ ರೀತಿಯಲ್ಲೂ ವಿಗ್ರಹರಾಧಕರಲ್ಲ. ಶ್ರೀ ಮೂರ್ತಿಯನ್ನು ನೋಡುವಲ್ಲಿ ಬರಿ ಒಂದು ಆಕಾರವನ್ನು ನೋಡುವುದಲ್ಲ, ಬದಲಾಗಿ ಆ ಆಕಾರದ ಆಧ್ಯಾತ್ಮಿಕ ರೂಪವನ್ನು ನೋಡಬೇಕು ಆಗ ನೀವು ಪರಿಶುದ್ಧ ಆಸ್ತಿಕರಾಗುವಿರಿ. ವಿಗ್ರಹರಾಧನೆ ಮತ್ತು ಶ್ರೀ ಮೂರ್ತಿಯ ಪೂಜೆ ಇವೆರಡು ವಿಭಿನ್ನವಾದದ್ದು! ಆದರೆ ನನ್ನ ಸಹೋದರರೆ ನೀವು ಸುಮ್ಮನೆ ಮುಂದಾಲೋಚನೆಯಿಲ್ಲದೆ ಒಂದಕ್ಕೊಂದನ್ನು ಹೋಲಿಸಿ ಗೊಂದಲದಲ್ಲಿ ಸಿಕ್ಕಿಕೊಂಡಿರುರುವಿರಿ.

ನಿಜ ಹೇಳುವುದಾದರೆ ಶ್ರೀ ಮೂರ್ತಿಯ ಆರಾಧನೆಯೆ ವಿಗ್ರಹದ ನಿಜವಾದ ಆರಾಧನೆ, ಅದನ್ನು ಬಿಟ್ಟು ನೀವು ನಿಮ್ಮ ಧಾರ್ಮಿಕ ಭಾವನೆಗಳನ್ನು ಸಮರ್ಪಕವಾಗಿ ಬೆಳೆಸಿಕೊಳ್ಳಲು ಆಗುವುದಿಲ್ಲ. ಪ್ರಪಂಚವು ನಿಮ್ಮನ್ನು ನಿಮ್ಮ ಇಂದ್ರಿಯಗಳ ಮೂಲಕ ಆಕರ್ಷಿಸುತ್ತದೆ ಮತ್ತು ಎಲ್ಲಿಯತನಕ ನೀವು ಭಗವಂತನನ್ನು ನಿಮ್ಮ ಇಂದ್ರಿಯಗಳ ವಸ್ತುಗಳಲ್ಲಿ ಕಾಣುವುದಿಲ್ಲವೊ, ನಿಮ್ಮ ಆಧ್ಯಾತ್ಮಿಕ ಔನ್ನತ್ಯವನ್ನು ಸಂಪಾದಿಸುವಲ್ಲಿ ಅಪರೂಪವಾಗಿ ಸಹಾಯವಾಗುವ ಒಂದು ಎಡವಟ್ಟಿನ ಸ್ಥಿತಿಯಲ್ಲಿರುತ್ತೀರ. ಒಂದು ಶ್ರೀ ಮೂರ್ತಿಯನ್ನು ನಿಮ್ಮ ಮನೆಯಲ್ಲಿಡಿ. ಸರ್ವಶಕ್ತನಾದ ಭಗವಂತನು ನಿಮ್ಮ ಮನೆಯ ಸಂರಕ್ಷಕನೆಂದು ಭಾವಿಸಿ. ನೈವೇದ್ಯವನ್ನು ಮಾಡಿ ಅದನ್ನು ಅವನ ಪ್ರಸಾದವೆಂದು ಸ್ವೀಕರಿಸಿ. ಹೂವುಗಳು ಮತ್ತು ಸುಗಂಧಗಳನ್ನು ಕೂಡಾ ಅರ್ಪಿಸಿ ಮತ್ತು ಪ್ರಸಾದವಾಗಿ ಸ್ವೀಕರಿಸತಕ್ಕದ್ದು. ಕಣ್ಣು, ಕಿವಿ, ಮೂಗು, ಚರ್ಮ ಮತ್ತು ನಾಲಿಗೆ ಇವೆಲ್ಲದಕ್ಕೂ ಒಂದು ಆಧ್ಯಾತ್ಮಿಕ ಸಂಸ್ಕಾರವಿದೆ. ನೀವು ಒಂದು ಪವಿತ್ರ ಹೃದಯದಿಂದ ಸೇವೆ ಮಾಡಿದರೆ ಅದು ಭಗವಂತನಿಗೆ ತಿಳಿದಿದ್ದು ನಿಮ್ಮನ್ನು ನಿಮ್ಮ ಶ್ರದ್ಧೆಯಿಂದ ತೀರ್ಮಾನಿಸುತ್ತಾನೆ. ಆ ವಿಷಯದಲ್ಲಿ ಪಾಪಪುರುಷನಿಗೆ ನಿಮ್ಮೊಂದಿಗೆ ಮಾಡುವದೇನೂ ಇರುವುದಿಲ್ಲ!

ಎಲ್ಲ ತರಹದ ಆರಾಧನೆಯು ಶ್ರೀ ಮೂರ್ತಿಯ ತತ್ತ್ವದ ಮೇಲೆ ಆಧರಿತವಾಗಿವೆ. ಧರ್ಮದ ಇತಿಹಾಸದಲ್ಲಿ ನೋಡಿದರೆ ನಿಮಗೆ ಈ ಉದಾತ್ತ ಸತ್ಯದ ಬಗ್ಗೆ ತಿಳಿಯುತ್ತದೆ. ಭಗವಂತನು ಯಜಮಾನನು ಎಂಬುದನ್ನು ಹೀಬ್ರು, ಅರಬ್ಬೀಗಳ ಕಲ್ಪನೆಯಲ್ಲಿ, ಯಹೂದಿ ಧರ್ಮವನ್ನು ಆಚರಿಸುವ ಕ್ರೈಸ್ತಪೂರ್ವ ಕಾಲದಲ್ಲಿ ಮತ್ತು ಕ್ರೈಸ್ತ ಧರ್ಮದ ನಂತರದ ಕಾಲದಲ್ಲೂ ಮತ್ತು ಮಹಮ್ಮದ ಪೈಗಂಬರರ ತತ್ತ್ವದಲ್ಲೂ ಬೇರೇನಲ್ಲದೆ ಶ್ರೀ ಮೂರ್ತಿಯ ಒಂದು ಪರಿಮಿತ ಕಲ್ಪನೆಯನ್ನು ಕಾಣಬಹುದು. ಗ್ರೀಕರಲ್ಲಿ ಒಬ್ಬ ಬೃಹಸ್ಪತಿ ರಾಜನ ಕಲ್ಪನೆ ಮತ್ತು ಆರ್ಯ ಕರ್ಮಕಾಂಡಿಗಳ ಒಬ್ಬ ಇಂದ್ರನ ಕಲ್ಪನೆ, ಇವೆರಡು ಅದೇ ತತ್ತ್ವದ ಒಂದು ದೂರದ ದೃಷ್ಟಿಕೋನ. ಧ್ಯಾನಾಸಕ್ತರ ಒಂದು ಶಕ್ತಿಯ ಮತ್ತು ಜ್ಯೋತಿರ್ಮಯ ಬ್ರಹ್ಮನ ಕಲ್ಪನೆ ಮತ್ತು ಶಕ್ತರ ನಿರಾಕಾರ ಶಕ್ತಿ ಕೂಡಾ ಶ್ರೀ ಮೂರ್ತಿಯ ಒಂದು ಅಸ್ಪಷ್ಟ ಕಲ್ಪನೆ.

ವಾಸ್ತವದಲ್ಲಿ ಶ್ರೀ ಮೂರ್ತಿಯ ತತ್ತ್ವವು ವಿವಿಧ ಜನರು ತಮ್ಮ ಕಲ್ಪನೆಯ ವಿವಿಧ ಹಂತಗಳಲ್ಲಿ ವಿವಿಧ ವಿಚಾರಗಳ ಪ್ರಕಾರ ವಿವಿಧ ರೀತಿಯಲ್ಲಿ ಪ್ರದರ್ಶಿಸಲ್ಪಟ್ಟ ಸತ್ಯವಾಗಿರುತ್ತದೆ. ಒಬ್ಬ ಸೃಷ್ಟಿಕರ್ತ ದೇವರನ್ನು ಸ್ವೀಕರಿಸಲು ಸಿದ್ದರಿಲ್ಲದ ಜೈಮಿನಿ ಮತ್ತು ಕಾಮ್‌ಟೆ ಕೂಡಾ ಆತ್ಮದ ಕ್ರಿಯೆಯಿಂದ ಪ್ರಚೋದಿತರಾಗಿ ಶ್ರೀ ಮೂರ್ತಿಯ ಕೆಲ ನಿರ್ದಿಷ್ಟ ಅಂಶಗಳನ್ನು ಏಕಾಗ್ರತೆಯನ್ನು

ಹೊಂದುವಂತೆ ನಿರ್ದೇಶಿಸುತ್ತಾರೆ. ಇಷ್ಟಲ್ಲದೆ ಶಿಲುಬೆ, ಸಾಲಗ್ರಾಮ ಶಿಲೆ, ಶಿವ ಲಿಂಗವನ್ನು ಮತ್ತು ಇನ್ನಿತರ ಅಂತಹ ಸಂಕೇತಗಳನ್ನು ಶ್ರೀ ಮೂರ್ತಿಯ ಅಂತಸ್ಥ ಕಲ್ಪನೆಯ ಸೂಚಕಗಳಾಗಿ ಅಳವಡಿಸಿಕೊಂಡಿರುವ ಜನರನ್ನು ಕೂಡಾ ನೋಡುತ್ತೇವೆ.

ಇನ್ನೂ ಮುಂದಕ್ಕೆ, "ದಿವ್ಯ ಕರುಣೆ, ಪ್ರೇಮ ಮತ್ತು ನ್ಯಾಯ ಸೀಸಕಡ್ಡಿಯ ಮೂಲಕ ವರ್ಣಿಸಿ ಚಾಣದಿಂದ ತಿಳಿಯಪಡಿಸಬಹುದಾದರೆ, ಮಾನವನ ಒಳಿತಿಗಾಗಿ ಮೂರ್ತಿಯ ವೈಯಕ್ತಿಕ ಸೌಂದರ್ಯವನ್ನು ಕವಿತೆಯಲ್ಲಿ, ಚಿತ್ರದಲ್ಲಿ ಅಥವಾ ಚಾಣದಿಂದ ಏಕೆ ಬಣ್ಣಿಸಬಾರದು? ಪದಗಳು ಭಾವನೆಗಳನ್ನು ವ್ಯಕ್ತಪಡಿಸಿದರೆ, ಒಂದು ಗಡಿಯಾರ ಸಮಯವನ್ನು ಸೂಚಿಸಿದರೆ ಮತ್ತು ಒಂದು ಚಿನ್ಹೆ ಒಂದು ಇತಿಹಾಸವನ್ನು ಹೇಳುವುದಾದರೆ ಒಂದು ಚಿತ್ರ ಅಥವಾ ಒಂದು ಆಕೃತಿ ಭಗವಂತನ ದಿವ್ಯ ಸೌಂದರ್ಯಕ್ಕೆ ಸಂಬಂಧಿಸಿದ ಉನ್ನತ ಭಾವನೆಗಳ ಮತ್ತು ಕಲ್ಪನೆಗಳ ಯೋಚನೆಗಳನ್ನು ತರಬಾರದೇಕೆ?"

ಶ್ರೀ ಮೂರ್ತಿಯ ಆರಾಧಕರನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದು: ಆದರ್ಶದ ಮತ್ತು ಪ್ರಾಕೃತಿಕ. ಪ್ರಾಕೃತಿಕ ವರ್ಗಕ್ಕೆ ಸೇರಿದವರು ತಮ್ಮ ಬದುಕಿನ ಪರಿಸ್ಥಿತಿ ಮತ್ತು ಮನಸ್ಸಿನ ಸ್ಥಿತಿಗತಿಗಳಿಗೆ ಕಟ್ಟುಬಿದ್ದು ದೇವಾಲಯಗಳನ್ನು ಅಥವಾ ಅಧ್ಯಾತ್ಮಿಕಸಂಸ್ಥೆಗಳನ್ನು ಸ್ಥಾಪಿಸುತ್ತಾರೆ. ತಮ್ಮ ಪರಿಸ್ಥಿತಿ ಮತ್ತು ಸ್ಥಾನಮಾನಕ್ಕನುಗುಣವಾಗಿ ಮನಸ್ಸಿನಲ್ಲೇ ಶ್ರೀಮೂರ್ತಿಯನ್ನು ಆರಾಧಿಸುವ ಅರ್ಹತೆಯುಳ್ಳ, ದೇವಾಲಯ ಹಾಗೂ ಆಧ್ಯಾತ್ಮಿಕ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಅಭಿಪ್ರಾಯಭೇದ ಹೊಂದಿರುವವರು ಶ್ರವಣ ಮತ್ತು ಕೀರ್ತನೆಯ ಮೂಲಕ ಶ್ರೀ ಮೂರ್ತಿಯನ್ನು ಆರಾಧಿಸುವ ಒಲವುಳ್ಳವರಾಗಿರುತ್ತಾರೆ. ಅವರ ಧಾರ್ಮಿಕ ಸಭೆಗಳು ಸಾರ್ವತ್ರಿಕವಗಿದ್ದು ಜಾತಿ ಮತ್ತು ವರ್ಣಸಂಬಂಧಿ ವಿಚಾರಗಳಿಂದ ಮುಕ್ತವಾಗಿರುತ್ತವೆ . ಮಹಾಪ್ರಭುಗಳು ಈ ಎರಡನೆಯ ವರ್ಗಕ್ಕೆ ಆದ್ಯತೆ ನೀಡಿದರು ಮತ್ತು ಅವರ ಆರಾಧನೆಯನ್ನು ಶಿಕ್ಷಾಷ್ಟಕದಲ್ಲಿ ಮಾದರಿಯಾಗಿ ತೋರಿಸಿದ್ದಾರೆ. ಶರಣಾಗತಿಯ ಮನೋಭಾವದಲ್ಲಿ ಯಾವ ಅಡ್ಡಿಯಿಲ್ಲದೆ ಆರಾಧನೆ ಮಾಡಿದಾಗ ಶಿಘ್ರದಲ್ಲೇ ಪ್ರೇಮದ ಅನುಗ್ರಹವಾಗುತ್ತದೆ.

## ೯. ಕೃಷ್ಣ ಪ್ರೇಮವೇ ಜೀವನದ ಪರಮಗುರಿ

ಈ ಭೌತಿಕ ಜಗತ್ತಿನ ಮತ್ತು ಅನಂತರದ ಸ್ವರ್ಗದ ಸುಖಾನುಭವವೇ ಒಬ್ಬ ಮನುಷ್ಯನಿಗೆ ಅಗತ್ಯವಿರುವುದೆಂದು ಕರ್ಮಮಾರ್ಗಿಗಳು ಹೇಳುತ್ತಾರೆ. ಕರ್ಮ ಅಥವಾ ಕ್ರಿಯೆ ಇರುವುದು ಎರಡು ಬಗೆ: ಐಹಿಕ ಪ್ರಾಪ್ತಿ ಪಡೆಯುವ ದೃಷ್ಟಿಯಿಂದ ಮಾಡುವ ಕರ್ಮ, ಮತ್ತು ಭಗವಂತನನ್ನು ತೃಪ್ತಿಪಡಿಸಲೆಂದು ಮಾಡುವ ಕರ್ಮ. ಕರ್ಮ ಮಾರ್ಗಿಗಳಿಗೆ ಈ ಎರಡು ಬಗೆಯ ಕರ್ಮದ ಉದ್ದೇಶ ಐಹಿಕ ಸುಖದ ಪ್ರಾಪ್ತಿ. ಭಗವಂತನನ್ನು ಕೇವಲ ಐಹಿಕ ಸುಖದ ಪ್ರಾಪ್ತಿಗಾಗಿ ಪೂಜಿಸುತ್ತಾರೆ. ಇಲ್ಲಿ ನಾವು ಭಕ್ತಿ ಮತ್ತು ಕರ್ಮವನ್ನು ಬೇರ್ಪಡಿಸುವ ಅಂಶವನ್ನು ಕಾಣಬಬುದು. ಎಲ್ಲ ಕ್ರಿಯೆಗಳ ಅಂತಿಮ ಫಲವಾಗಿ ಪ್ರೀತಿ ಅಥವಾ ದಿವ್ಯ ಪ್ರೇಮದ ತತ್ತ್ವದ ಪ್ರಾಪ್ತಿಯೇ ಭಕ್ತಿಯ ಗುರಿಯಾಗಿದ್ದರೆ, ಕ್ರಿಯೆಯ ಅಂತಿಮ ಗುರಿಯಾಗಿ ಸ್ವಾರ್ಥ ಸುಖವೇ ಕರ್ಮದ ಉದ್ದೇಶ.

ಜ್ಞಾನ ಮಾರ್ಗಿಗಳು ಇನ್ನೊಂದೆಡೆ ತಮ್ಮ ಕೃಷಿಯ ಅಂತಿಮ ಗುರಿಯಾಗಿ ಮುಕ್ತಿಯ ಪ್ರಾಪ್ತಿಗಾಗಿ ಜ್ಞಾನ ಅಥವಾ ಆಧ್ಯಾತ್ಮಿಕ ಜ್ಞಾನವನ್ನು ಬೆಳೆಸಿಕೊಳ್ಳುತ್ತಾರೆ. ಮುಕ್ತಿಯನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ಭಗವಂತನಿಂದ ಪ್ರತ್ಯೇಕವಾದ ಆತ್ಮದ ಅಸ್ತಿತ್ವವನ್ನು ವಿನಾಶಗೊಳಿಸಿ ಭಗವಂತನಲ್ಲಿ ಸಂಪೂರ್ಣವಾಗಿ ವಿಲಿನವಾಗುವ ಒಂದು ತರಹದ ಮುಕ್ತಿ. ಇದನ್ನು ಸಾಯುಜ್ಯವೆಂದು ಕರೆಯುತ್ತಾರೆ. ಇನ್ನೊಂದು ತರಹದ ಮುಕ್ತಿಯಲ್ಲಿ ಆತ್ಮವು ಭಗವಂತನಿಂದ ಭಿನ್ನವಾಗಿರುತ್ತದೆ ಮತ್ತು ಮುಕ್ತಿ ದೊರೆತಾಗ ಆತ್ಮವು; ಸಾಲೋಕ್ಯ ಎಂದು ಕರೆಯುವ ಭಗವಂತನ ದಿವ್ಯ ಧಾಮದ ನಿವಾಸಿಯಾಗುತ್ತದೆ; ಸಾಮೀಪ್ಯ ಎಂದು ಕರೆಯಲ್ಪಡುವ ಮೋಕ್ಷದಲ್ಲಿಭಗವಂತನೊಂದಿಗೆ ನಿಕಟವಾದ ಸಂಗವನ್ನು ಪಡೆಯುತ್ತದೆ; ಸಾರೂಪ್ಯ ಎಂದು ಕರೆಯಲ್ಪಡುವ ಮೋಕ್ಷದಲ್ಲಿ ಭಗವಂತನ ಹಾಗೆ ಆಧ್ಯಾತ್ಮಿಕ ರೂಪವನ್ನು ಪಡೆಯುತ್ತದೆ ಅಥವಾ ಸಾರ್ಷ್ಟಿ ಎಂದು ಕರೆಯಲ್ಪಡುವ ಮೋಕ್ಷದಲ್ಲಿ ಭಗವಂತನ ಶಕ್ತಿಗಳಿಗೆ ಸಮಾನವಾದ ಶಕ್ತಿಯನ್ನು ಪಡೆಯುತ್ತದೆ.

ಭಗವಂತನನ್ನು ಸಂತುಷ್ಟಗೊಳಿಸಿದಾಗ ಅವನು ಪ್ರದಾನಿಸುವ ಎರಡನೆಯ ವರ್ಗದ ಮುಕ್ತಿಯು ಅನಿವಾರ್ಯವಾಗುತ್ತದೆ. ಆ ಮುಕ್ತಿಯ ಪ್ರಾಪ್ತಿಯಾದ ನಂತರ ನಾವು ಭಗವಂತನನ್ನು ಪ್ರೀತಿ ಅಥವಾ ಶುದ್ಧ ಪ್ರೇಮದಿಂದ ಸೇವೆ ಮಾಡುತ್ತೇವೆ. ಪ್ರೇಮದ ಅತಿ ಉನ್ನತವಾದ ತತ್ತ್ವವನ್ನು ನಶಿಸುವ ಪ್ರವೃತ್ತಿಯನ್ನು ಇದು ಹೊಂದಿರುವುದರಿಂದ ಭಕ್ತರು ಮೊದಲ ಬಗೆಯ ಮುಕ್ತಿಯನ್ನು ತಿರಸ್ಕರಿಸುತ್ತಾರೆ. ಎರಡನೆ ತರಹದ ಮುಕ್ತಿಯು ಅಂತಿಮ ಗುರಿಯಾಗಲು ಸಾಧ್ಯವಿಲ್ಲ ಏಕೆಂದರೆ ಅದು ಆತ್ಮದ ಮಾಧ್ಯಮಿಕ ಸ್ಥಿತಿಯಾಗಿ ವರ್ತಿಸುತ್ತದೆ. ಅಲ್ಲಿ ಪ್ರೀತಿಯು ಅಂತಿಮ ಗುರಿಯಾಗಿ ವರ್ತಿಸುತ್ತದೆ. ಹಾಗಾಗಿ ಮುಕ್ತಿಯನ್ನು ನಮ್ಮ ಆಧ್ಯಾತ್ಮಿಕ ಭ್ರಮನಿರಸನತೆಯ ಮಾಧ್ಯಮಿಕ ಫಲಿತಾಂಶವಾಗಿ ಪರಿಗಣಿಸಬೇಕು.

ಇದನ್ನು ಬಿಟ್ಟು, ಮುಕ್ತಿಯನ್ನು ಹಂಬಲಿಸುವುದರಿಂದ ಆಧ್ಯಾತ್ಮಿಕ ಬೆಳವಣಿಗೆಯ ಕ್ರಿಯೆಯು ಹಾಳಾಗುತ್ತದೆ ಏಕೆಂದರೆ ಅದು ಭಕ್ತಿಯನ್ನು ವೃದ್ಧಿಸುವುದನ್ನು ಬಿಟ್ಟು ಬೇರೆ ವಸ್ತುವಿನತ್ತ ಒಂದು ಬಲವಾದ ಆಸೆಯಿದ್ದಂತೆ. ಆದ್ದರಿಂದ ಭಕ್ತಿಯನ್ನು–ಸ್ವಾರ್ಥ ಸುಖಾನುಭವದ ಆಸೆ ಮತ್ತು ಮುಕ್ತಿಯ ಆಸೆ, ಈ ಎರಡರಿಂದ ಮುಕ್ತವಾಗಿ ಬೆಳೆಸಬೇಕು. ಕೃಷ್ಣನು ನಮಗೆ ಮುಕ್ತಿಯನ್ನು ನೀಡಲಿ ಅಥವಾ ನೀಡದೇಇರಲಿ, ನಾವು ಅವನನ್ನು ಅವಲಂಬಿಸಲೇಬೇಕು. ನಾವು ಧಾರ್ಮಿಕ ಭಾವನೆಯ ನಿರಂತರ ಏಳಿಗೆಗಾಗಿ ಪ್ರಾರ್ಥಿಸಬೇಕು. ಪ್ರೀತಿ ಅಥವಾ ಶುದ್ಧ ಪ್ರೇಮದೊಂದಿಗೆ ಭಕ್ತಿ ನಮ್ಮೆಲ್ಲರ ಅಸ್ತಿತ್ವದ ಏಕೈಕ ಅಂತಿಮ ಧ್ಯೇಯ.

ರತಿ(ಆಕರ್ಷಣೆ) ಉಲ್ಲಾಸದೊಂದಿಗೆ(ಉತ್ಸಾಹ) ಬೆರೆತಾಗ ಅದು ಪ್ರೀತಿಯಾಗುತ್ತದೆ. ಪ್ರೀತಿಯು ಕೃಷ್ಣನಿಗಾಗಿ ಪ್ರತ್ಯೇಕವಾದ, ಉತ್ಸಾಹಭರಿತ ಪ್ರೇಮವನ್ನು ಹುಟ್ಟಿಸುತ್ತದೆ ಮತ್ತು ಕೃಷ್ಣ ಮತ್ತು ಅವನ ಪರಿವಾರವನ್ನು ಬಿಟ್ಟು ಬೇರೆ ವಸ್ತುಗಳು ಮತ್ತು ವ್ಯಕ್ತಿಗಳಿಗೆ ವಿಕರ್ಷಣೆ ಉಂಟುಮಾಡುತ್ತದೆ. ''ಕೃಷ್ಣ ನನಗೆ ಸೇರಿದ್ದು" ಎಂಬ ಭಾವನೆಯನ್ನು ಸೇರಿಸಿದಾಗ ಅದು ಪ್ರೇಮವಾಗುತ್ತದೆ. ''ಕೃಷ್ಣನು ನನ್ನ ಒಡೆಯ ಮತ್ತು ನಾನು ಅವನ ಸೇವಕ"ಎಂಬ ಭಾವನೆಯು ಇಲ್ಲಿ ಪ್ರಾರಂಭವಾಗುತ್ತದೆ.

ಪ್ರೇಮಕ್ಕೆ ವಿಶ್ವಾಸವನ್ನು ಬೆರೆಸಿದಾಗ ಅದು ಪ್ರಣಯವಾಗುತ್ತದೆ. ಪ್ರಣಯದಲ್ಲಿ ಗೌರವದ ಭಾವನೆ ತನ್ನ ಹಿಡಿತವನ್ನು ಕಳೆದುಕೊಳ್ಳುತ್ತದೆ. ಪ್ರಣಯದಲ್ಲಿ "ಕೃಷ್ಣ ನನ್ನ ಪ್ರೇಮದ ಪ್ರತ್ಯೇಕವಾದ ಮತ್ತು ಆತ್ಮೀಯವಾದ ವಸ್ತು" ಎಂಬ ಭಾವನೆಯು ಕುತೂಹಲಕಾರವಾಗಿ ಮನದೊಳಕ್ಕೆ ತಿರುಗುತ್ತದೆ. ಆವಾಗ ಕೃಷ್ಣನು ತನ್ನ ಎಲ್ಲ ಹಿರಿತನ ಮತ್ತು ಶಕ್ತಿಯೊಂದಿಗೆ ಒಂದು ರೀತಿಯ ಅಧೀನತೆಯನ್ನು ಪ್ರದರ್ಶಿಸುತ್ತಾನೆ.

ಅತಿಯಾಗಿ ಹೃದಯ ಕರಗುವ ಭಾವವನ್ನು ಸೇರಿಸಿದಾಗ ಪ್ರೇಮವು ಸ್ನೇಹವಾಗುತ್ತದೆ. ಇಲ್ಲಿ ಕೃಷ್ಣ ಮತ್ತು ಅವನ ಭಕ್ತನ ನಡುವೆ ಒಬ್ಬ ಮಗ ಮತ್ತು ತಂದೆ ತಾಯಿಯರ ಸಂಬಂಧವು ಉಂಟಾಗುತ್ತದೆ. ಈ ಹಂತದಲ್ಲಿ ಕೃಷ್ಣನಿಗೋಸ್ಕರ ಅಳುವುದು, ಸಂಯೋಗದಲ್ಲಿ ಪರಿಪೂರ್ಣ ಸಂತೃಪ್ತಿ ಇಚ್ಛಿಸುವುದು ಮತ್ತು ಕೃಷ್ಣನ ಹಿತಾಸಕ್ತಿಯನ್ನು ಕಾಪಾಡುವ ಇಚ್ಛೆ ಸ್ವಾಭಾವಿಕವಾಗಿ ಬರುತ್ತದೆ. ನಂತರ ಆಸೆಯಲ್ಲಿನ ಹೆಚ್ಚಳವನ್ನು ಸ್ನೇಹಕ್ಕೆ ಬೆರೆಸಿದಾಗ ಅದು ರಾಗವಾಗುತ್ತದೆ. ಈ ಸ್ಥಿತಿಯಲ್ಲಿ ಒಂದು ಕ್ಷಣದ ವಿರಹವು ಸಹಿಸಲಸಾಧ್ಯವಾದದ್ದು. ಇಲ್ಲಿ ಕೃಷ್ಣ ಮತ್ತು ತನ್ನ ಭಕ್ತನ ನಡುವೆ ಪತಿ ಪತ್ನಿಯರ ಸಂಬಂಧ ಪ್ರಾರಂಭವಾಗುತ್ತದೆ. ಪರಸ್ಪರ ಸಂದರ್ಶನದ ಬೇಡಿಕೆಗೆ ವ್ಯಥೆ ಪಡುವುದೇ ಆನಂದ. ರಾಗ ಭಾವದಲ್ಲಿ ತನ್ನ ವಿಷಯವನ್ನು ಪ್ರತಿ ಕ್ಷಣದಲ್ಲೂ ಹೊಸದಾಗಿ ನೋಡುತ್ತ ಮತ್ತು ಪ್ರತಿ ಕ್ಷಣದಲ್ಲೂ ತಾನು ಹೊಸದಾಗುತ್ತಾ ತನ್ನನ್ನು ತಾನು ಅನುರಾಗಕ್ಕೆ ಪರಿವರ್ತಿಸಿಕೊಳ್ಳುತ್ತದೆ. ಈ ಸ್ಥಿತಿಯಲ್ಲಿ ಪರಸ್ಪರ ಅಧಿಪತ್ಯ ಮತ್ತು ಪ್ರಿಯನೊಂದಿಗೆ ಎಲ್ಲಿಹೋದರಲ್ಲಿ ಜೊತೆಯಿರಲು ಬಲವಾದ ಆಸೆ, ಈ ಎಲ್ಲವೂ ಇದರ ಪ್ರಧಾನ ಲಕ್ಷಣಗಳು. ಅನುರಾಗವು ಅಚ್ಚರಿಗೊಳ್ಳುವ ಸ್ಥಿತಿಯಲ್ಲಿ ಅಪರಿಮಿತವಾಗಿ ಹರಿದು ಮತಿಭ್ರಮಣೆಯ ಪರಮಾವಧಿಯೋ ಎಂಬಂತೆ ಮಹಾಭಾವವಾಗುತ್ತದೆ. ಇದು ವಿವರಿಸಲಾಗದಂತಹದು! ರತಿಯಿಂದ ಮಹಾಭಾವ, ಈ ಪೂರ್ಣ ತತ್ವವೇ ಸ್ಥಾಯಿಭಾವ ಅಂದರೆ ನಿತ್ಯಾನಂದ ಮತ್ತು ದಿವ್ಯಾನಂದದ ಸ್ಥಿತಿ.

ಹೇಗೆ ಮಾಯೆಯ ಜಗತ್ತಿನಲ್ಲಿನ ಜೀವನವು ಆಧ್ಯಾತ್ಮಿಕ ಜೀವನದ ವಕ್ರ ಪ್ರತಿಬಿಂಬವಾಗಿರುವುದೊ ಹಾಗೆಯೇ ಉತ್ತಮ ರಸದ ವಕ್ರ ಚಿತ್ರಣವು ನಮ್ಮ ಮಾನವ ಜನ್ಮದಲ್ಲಿದೆ. ಆತ್ಮವು ತನ್ನ ಏಕೈಕ ಗುರಿಯಾದ, ಪರಮ ಪ್ರಭು ಕೃಷ್ಣನೆಡೆಗೆ ಹೋಗಲು ಶ್ರಮಿಸಿದಾಗ ರಸವು ಶುದ್ಧವಾಗಿರುತ್ತದೆ; ಮನಸ್ಸು ಮತ್ತು ಇಂದ್ರಿಯಗಳು ಒಂದು ತಪ್ಪು ಗುರಿಯತ್ತ ಶ್ರಮಿಸಿದಾಗ ರಸವು ಕೆಳಮಟ್ಟದ ಸ್ಥಿತಿಗಿಳಿದು ಶೋಚನೀಯವಾಗುತ್ತದೆ. ವಿಕೃತ ರಸವು ಉತ್ತಮ ಆಧ್ಯಾತ್ಮಿಕ ರಸದ ಸ್ವಭಾವದ ಕುರಿತು ಸೂಚನೆ ನೀಡುತ್ತದೆ; ಹಾಗಾಗಿ ವಿಕೃತ ರಸದ ಲಕ್ಷಣಗಳನ್ನು ವಿವರಿಸಲು ಉಪಯೋಗಿಸಬಹುದಾದ ಪದಗಳಮೂಲಕ ಈ ವಿವರಣೆಗಳನ್ನು ನೀಡಲು ಪ್ರಯತ್ನಿಸಲಾಗಿದೆ. ನಮ್ಮ ಓದುಗರಲ್ಲಿ ವಿನಂತಿಯೇನೆಂದರೆ, ಆತ್ಮ ಮತ್ತು ಭೌತಿಕ ದ್ರವ್ಯಗಳ ನಡುವೆ ಸರಿಯಾಗಿ ವ್ಯತ್ಯಾಸ ಕಾಣುವಲ್ಲಿ ಎಚ್ಚರವಹಿಸಬೇಕು, ಇಲ್ಲವಾದರೆ ತಪ್ಪುತಿಳುವಳಿಕೆ ಬರುವುದು ಅನಿವಾರ್ಯವಾಗಬಹುದು.

ಯಾರೊಬ್ಬನು ಶುದ್ಧ ಹೃದಯದಿಂದ, ಒಬ್ಬ ಆತ್ಮ ಸಾಕ್ಷಾತ್ಕಾರ ಪಡೆದುಕೊಂಡ ವ್ಯಕ್ತಿಯ

ಆಶ್ರಯದಲ್ಲಿ ಶ್ರೀಮದ್ ಭಾಗವತದಲ್ಲಿ ವಿವರಿಸುರುವ ಹಾಗೆ ಕೃಷ್ಣನ ನಾಮಗಳ, ರೂಪಗಳ, ಗುಣಲಕ್ಷಣಗಳ ಮತ್ತು ಲೀಲೆಗಳ ಅಧ್ಯಯನ ಮಾಡುವನೊ, ಅವನು ಭಕ್ತಿಯ ಪ್ರಭಾವದಿಂದ ಉತ್ತಮೋತ್ತಮ ಸ್ಥಾನಕ್ಕೇರುವನು. ಯಾರೊಬ್ಬ ಎಲ್ಲವನ್ನು ತನ್ನಲ್ಲಿರುವ ಪಾಂಡಿತ್ಯದಿಂದ ವಿಶ್ಲೇಷಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವನೊ, ಅವನು ಆತ್ಮದ ವಿಚಾರದಲ್ಲಿ ಬಹಳ ಅಪರೂಪವಾಗಿ ಸತ್ಯಾಂಶವನ್ನು ಅರಿತುಕೊಳ್ಳುವನು. ಭಗವಂತನ ಶಾಸನದಲ್ಲಿ ತರ್ಕವು ತನ್ನ ಈಗಿನ ಸ್ಥಿತಿಯಲ್ಲಿ ಆತ್ಮದ ವಲಯವನ್ನು ಎಂದಿಗೂ ತಲುಪುವುದಿಲ್ಲ.

ಇಲ್ಲಿಯವರೆಗೆ ಹೇಳಿದ ಹಂತದವರೆಗೆ ಹೋಗುವ ಅವಕಾಶ ದೊರೆಯಬೇಕಾದರೆ ಒಬ್ಬನು ಹೃದಯದಿಂದ ಇನ್ನೂ ಅನ್ವೇಷಿಸಬೇಕು ಆಗ ಸಕಲ ಸೌಂದರ್ಯವನ್ನೊಳಗೊಂಡ ಭಗವಂತನು ಆತ್ಮವನ್ನು ಸಾಕ್ಷಾತ್ಕರಿಸಲು ಮತ್ತು ಅದರ ಕ್ಷೇತ್ರಕ್ಕೆ ಪ್ರವೇಶಿಸಲು ಸಹಾಯ ಮಾಡುತ್ತಾನೆ. ಆದರೆ ಎಲ್ಲಿಯವರೆಗೆ ಮನಸ್ಸು ಐಹಿಕ ಆಕರ್ಷಣೆಗಳಿಂದ ಭ್ರಮಿತವಾಗಿರುವುದೊ ಅಲ್ಲಿಯವರೆಗೆ ತನ್ನ ಅನೇಕ ರೂಪಗಳೊಡನೆ ಐಹಿಕ ಜಗತ್ತನ್ನು ಮೀರಿ ಏರಲು ಸಾಧ್ಯವಿಲ್ಲ. ಪಾಶ್ಚಾತ್ಯ ತತ್ತ್ವಜ್ಞಾನಿಗಳು ಮಾಡಿರುವ ದೊಡ್ಡ ತಪ್ಪೆಂದರೆ ಮನಸ್ಸು ಮತ್ತು ಅಹಂಕಾರವನ್ನು ಆತ್ಮದೊಂದಿಗೆ ಗುರುತಿಕೊಂಡಿರುವುದು. ಇದು ಬಹಳ ದುರದೃಷ್ಟಕರವಾದದ್ದು.

ಸಂಕ್ಷಿಪ್ತವಾಗಿ ಹೇಳುವುದಾದರೆ ಮನುಷ್ಯನಲ್ಲಿ ತನ್ನ ಈಗಿನ ಸ್ಥಿತಿಯಲ್ಲಿ ಮೂರು ಬಗೆಯ ತತ್ತ್ವಗಳಿವೆ:

೧. ಸ್ಥೂಲ ತತ್ತ್ವ ಅಥವಾ ಜಡ ವಸ್ತುಗಳಿಂದ ಕೂಡಿದ ತನ್ನ ಶರೀರ

೨. ಲಿಂಗ ತತ್ತ್ವ ಅಥವಾ ಈ ಐಹಿಕ ಪ್ರಪಂಚದೊಳಗೆ ಸಂಸ್ಕರಿಸಿದ ಜಡವಸ್ತುಗಳಿಂದುಂಟಾದ ಮನಸ್ಸು, ಬುದ್ಧಿ, ಕುಲುಷಿತಗೊಂಡ ಪ್ರಜ್ಞೆ ಮತ್ತು ಈ ಐಹಿಕ ಪ್ರಪಂಚದಲ್ಲಿಗೊಂದಲಮಯ ಸ್ಥಿತಿಗೆ ಕಾರಣವಾದ ಅಹಂಕಾರ. ಆತ್ಮವು ತಾನು ಭಗವಂತನ ಸೇವಕನೆಂಬ ತನ್ನ ಸ್ವಭಾವವನ್ನು ಮರೆತು ತಪ್ಪು ಉದ್ದೇಶದಿಂದ ಸುಖವನ್ನು ಅನುಭವಿಸುವ ಪ್ರವೃತ್ತಿಯನ್ನು ಸರಿಪಡಿಸುವ ದೃಷ್ಟಿಯಿಂದ ಮಾಯೆಯ ಪ್ರಭಾವವು ಸೃಷ್ಟಿಸಿದ ಸ್ಥಿತಿಯಿದು.

೩. ವಾಸ್ತವದಲ್ಲಿ ಮನುಷ್ಯನು ಮಾಯಾ ಮತ್ತು ಅವಳ ಸಂಪರ್ಕದಿಂದ ಸಂಪೂರ್ಣವಾಗಿ ಸ್ವತಂತ್ರನಾಗಿರುವನು. ಈ ಸಂಕಷ್ಟದಿಂದ ಪಾರಾಗಲು ಏಕೈಕ ಮಾರ್ಗವೆಂದರೆ ಒಬ್ಬ ಶುದ್ಧ ಭಕ್ತನಿಂದ ಗ್ರಹಿಸಿದ ಶುದ್ಧ ಭಕ್ತಿಯಿಂದ ಮಾತ್ರ ಸಾಧ್ಯ. ಭಕ್ತಿಯು ಏಕೈಕ ಸಾಧನವಾಗಿ, ಮಾನವನನ್ನು ಎಲ್ಲ ಸೌಂದರ್ಯವನ್ನೊಳಗೊಂಡ ಕೃಷ್ಣನ ಧಾಮಕ್ಕೆ ಕರೆದೊಯ್ಯುತ್ತದೆ ಮತ್ತು ಅಂತಿಮವಾಗಿ ಅವನನ್ನು ನಿತ್ಯ ಕೃಷ್ಣ ಪ್ರೇಮದಲ್ಲಿ ಮುಳುಗಿಸುತ್ತದೆ.ಮಾಯಾ ಜಗತ್ತಿನಲ್ಲಿರುವಾಗ ಮನುಷ್ಯನು ಆತ್ಮವನ್ನು ಉದ್ಧರಿಸುವ ಉದ್ದೇಶದಿಂದ ಶಾಂತಿಯಿಂದ ಜೀವನ ನಡೆಸಬೇಕು. ಈ ಸಮಾಜದಲ್ಲಿ ಶುದ್ಧ ಜೀವನ ನಡೆಸುತ್ತ, ಪಾಪಗಳನ್ನು ತಡೆಗಟ್ಟುತ್ತ ತನ್ನ ಸಂಗಡಿಗರಿಗೆ ಆದಷ್ಟು ಮಟ್ಟಿಗೆ ಉಪಕಾರಿಯಾಗಿರಬೇಕು. ಅವನು ಪರಾಕ್ರಮದಿಂದ ಜೀವನದ ಕಷ್ಟಗಳನ್ನು ಸಹಿಸುತ್ತ ನಮ್ರನಾಗಿರಬೇಕು. ಅವನು ತನ್ನಲ್ಲಿರುವ ಯಾವ

> ಸದ್ಗುಣಗಳಾಗಲಿ ಅಥವಾ ದೊಡ್ಡಸ್ತಿಕೆಯನ್ನಾಗಲಿ ಕುರಿತು ಜಂಭಕೊಚ್ಚಿಕೊಳ್ಳಬಾರದು ಮತ್ತು ಎಲ್ಲರನ್ನು ಗೌರವದಿಂದ ನೋಡಿಕೊಳ್ಳಬೇಕು. ಮದುವೆಯನ್ನು ಒಂದು ಶಾಂತಿಯುತ ಪವಿತ್ರ ಜೀವನ ಸಾಗಿಸಲು ಮತ್ತು ಭಗವಂತನ ಸೇವಕರನ್ನು ಉತ್ಪಾದಿಸುವ ಉದ್ದೇಶದ ದೃಷ್ಟಿಯಿಂದ ಮಾಡುವುದೇ ಒಬ್ಬ ವೈಷ್ಣವನಿಗಿರುವ ಒಳ್ಳೆಯ ವ್ಯವಸ್ಥೆ. ಆಧ್ಯಾತ್ಮಿಕ ಕೃಷಿಯೇ ಜೀವನದ ಮುಖ್ಯ ಉದ್ದೇಶ. ಅದಕ್ಕೆ ನೆರವಾಗುವುದನ್ನೆಲ್ಲವನ್ನು ಮಾಡಿ ಮತ್ತು ಆತ್ಮದ ಬೆಳವಣಿಗೆಯನ್ನು ಭಂಗ ಮಾಡುವುದೆಲ್ಲದರಿಂದ ದೂರವಿರಿ.

ಕೇವಲ ಕೃಷ್ಣನೊಬ್ಬನೇ ನಿಮ್ಮನ್ನು ರಕ್ಷಿಸುವನೆಂಬುದರ ಮೇಲೆ ಬಲವಾದ ನಂಬಿಕೆಯಿಡಿ. ಅವನನ್ನು ನಿಮ್ಮ ಏಕಮಾತ್ರ ಸಂರಕ್ಷಕನೆಂದು ಒಪ್ಪಿಕೊಳ್ಳಿರಿ. ಕೃಷ್ಣನಿಗೆ ನಿಮ್ಮಿಂದ ಆಗಬಹುದಾದುದೆಲ್ಲವನ್ನು ಮಾಡಿ ಮತ್ತು ಎಂದಿಗೂ ಕೃಷ್ಣನ ಪವಿತ್ರ ಇಚ್ಛೆಗೆ ವಿರುದ್ಧವಾಗಿ ನಡೆಯಬೇಡಿ. ನೀವು ಮಾಡುವುದೆಲ್ಲವನ್ನು ನಮ್ರತೆಯಿಂದ ಮಾಡಿರಿ. ಈ ಪ್ರಪಂಚದಲ್ಲಿ ನೀವು ಎಂದಿಗೂ ಒಬ್ಬ ಪರದೇಶಿ ಎಂಬುದನ್ನು ನೆನಪಿನಲ್ಲಿಡಿ ಮತ್ತು ನಿಮ್ಮ ಸ್ವಂತ ಮನೆಯಾದ ಭಗವಂತನ ಧಾಮಕ್ಕೆ ಹಿಂದಿರುಗಲು

ಸಿದ್ಧರಾಗಿರಿ. ನಿಮ್ಮ ಕರ್ತವ್ಯಗಳನ್ನು ಮಾಡಿರಿ ಮತ್ತು ಜೀವನದ ಪರಮ ಗುರಿಯಾದ ''ಕೃಷ್ಣ ಪ್ರೇಮ"ವನ್ನು ಪಡೆಯಲು ಭಕ್ತಿಯನ್ನು ಸಾಧನವಾಗಿ ಬಳಸಿರಿ. ನಿಮ್ಮ ದೇಹ, ಮನಸ್ಸು ಮತ್ತು ಆತ್ಮವನ್ನು ಭಗವಂತನ ಸೇವೆಯಲ್ಲಿ ತೊಡಗಿಸಿ. ನಿಮ್ಮ ಎಲ್ಲ ಕ್ರಿಯೆಗಳಲ್ಲಿ ಭಗವಂತನನ್ನು ಆರಾಧಿಸಿ.

ಹೀಗೆ ನಾವು ಶ್ರೀಮನ್ ಮಹಾಪ್ರಭುಗಳ ಜೀವನ ಮತ್ತು ಬೋಧನೆಗಳ ಸಾರಾಂಶವನ್ನು ನಿರೂಪಿಸಿದ್ದೇವೆ. ಚೈತನ್ಯ ಮಹಾಪ್ರಭುಗಳು ವಿಗ್ರಹಾರಾಧನೆಯನ್ನು ತಿರಸ್ಕರಿಸಿ ಶುದ್ಧ ಏಕೇಶ್ವರವಾದವನ್ನು ಬೋಧಿಸಿದರೆಂಬುದನ್ನು ಈಗ ನಮ್ಮ ಓದುಗರು ಕಂಡುಕೊಳ್ಳುತ್ತಾರೆ. ಸ್ವಯಂ ಭಗವಂತನಲ್ಲದ ವ್ಯಕ್ತಿಗಳನ್ನು ಮತ್ತು ವಸ್ತುಗಳನ್ನು ಪೂಜಿಸುವುದೇ ವಿಗ್ರಹಾರಾಧನೆ ಎಂದು ಅವರು ಬೋಧಿಸಿದರು. ವಾರಾಣಾಸಿಯ ಸನ್ಯಾಸಿಗಳು ಅವರನ್ನು ಸರ್ವಶಕ್ತನಾದ ಭಗವಂತನೆಂದು ಸಂಬೋಧಿಸಿದಾಗ, ಒಂದು ಜೀವಿಯನ್ನು ಭಗವಂತನೆಂದು ಸಂಬೋಧಿಸುವುದು ಪಾಪಗಳಲ್ಲಿ ಅತಿಹೀನವಾದದ್ದೆಂದು ಮಹಾಪ್ರಭುಗಳು ಅವರಿಗೆ ತಿಳಿಯಪಡಿಸಿದರು. ಮತ್ತು ಭಗವಂತನ ನಿಜವಾದ ಪ್ರತಿಮೆಯನ್ನು ಬಿಟ್ಟು ಇನ್ನಾವುದೇ ರೂಪ ಅಥವಾ ಪ್ರತಿಮೆಯ ಆರಾಧನೆಯನ್ನು ಬಹಿರಂಗವಾಗಿ ಖಂಡಿಸಿದರು. ಭಗವಂತನು ಅದ್ವಿತೀಯ. ''ಅವನೊಂದಿಗೆ ಸ್ಪರ್ಧಿಸಲು ಯಾರೂ ಇಲ್ಲ", ಇದೇ ಮಹಾಪ್ರಭುಗಳ ಧರ್ಮದ ಧ್ಯೇಯ ವಾಕ್ಯ.

ಅಲ್ಲದೇ ಮಹಾಪ್ರಭುಗಳು ಶುದ್ಧವಾದ ಸದಾಚಾರವು ಆಧ್ಯಾತ್ಮಿಕ ಉತ್ಕರ್ಷದ ಜೊತೆಬರುವುದಾಗಿ ತಮ್ಮ ನಡತೆಯಲ್ಲಿ ಮತ್ತು ಬೋಧನೆ ಇವೆರಡರಲ್ಲೂ ತೋರಿಸಿಕೊಟ್ಟರು. ನೀತಿಯು ಒಬ್ಬ ಭಕ್ತನ ನಡತೆಯನ್ನು ಶೋಭಾಯಮಾನಗೊಳಿಸುತ್ತದೆ. ಇದನ್ನು ಒಬ್ಬ ಕೃಷ್ಣ ಭಕ್ತನಾಗಿ ಕಾಣಿಸಿಕೊಳ್ಳುವವನ ನಡತೆಯಲ್ಲಿ ಕಾಣದಿದ್ದರೆ ಅವನ ನಿಷ್ಠೆಯನ್ನು ಸಂದೇಹಿಸಬೇಕಾಗುತ್ತದೆ.

ನಾಲ್ಕು ಬಗೆಯ ವಿಚಾರಗಳಿವೆ: ನಾಸ್ತಿಕವಾದ, ಅದ್ವೈತವಾದ, ಅಜ್ಞೇಯತಾವಾದ ಮತ್ತು ಆಸ್ತಿಕವಾದ. ಮೊದಲ ಮೂರು ಧರ್ಮಕ್ಕೆ ಹಾನಿಕರವೆಂದು ಚೈತನ್ಯರ ಧರ್ಮವು ತಿರಸ್ಕರಿಸುತ್ತದೆ. ಇನ್ನಿತರ ಮೂರನ್ನು ದೂರವಿರಿಸಿ ಎಂದು ಮನುಜರಿಗೆ ಬುದ್ಧಿಹೇಳುತ್ತ ಶುದ್ಧ ಆಸ್ತಿಕವಾದವನ್ನು ಬೋಧಿಸುತ್ತಾರೆ.

ಜಾತಿ ಪದ್ಧತಿಯ ಜೊತೆ ವರ್ಣಾಶ್ರಮ ಧರ್ಮವನ್ನು ಋಷಿಗಳು ಸಮಾಜದಲ್ಲಿ ಮಾನವನಿಗೆ ಹಿತವಾಗಲೆಂದು ಮಾಡಿದ ಕೇವಲ ಒಂದು ಸಾಮಾಜಿಕ ವ್ಯವಸ್ಥೆಯೆಂದು ಅವರು ಬೋಧಿಸಿದರು. ಎಲ್ಲಿಯವರೆಗೆ ಇಂತಹ ಸಾಮಾಜಿಕ ವ್ಯವಸ್ಥೆಗಳು ಆಧ್ಯಾತ್ಮಿಕ ಬೆಳವಣಿಗೆಯನ್ನು ವಿರೋಧಿಸುವುದಿಲ್ಲವೋ ಅಲ್ಲಿಯವರೆಗೆ ಅವುಗಳು ಭಗವದ್ಭಕ್ತರನ್ನು ಅಲಂಕರಿಸಲು ಸಮ್ಮತಿಸಬೇಕು. ಆಧ್ಯಾತ್ಮಿಕ ಸಾಕ್ಷಾತ್ಕಾರಕ್ಕೆಂದು ರಾಮನಂದ ರಾಯರ ಹತ್ತಿರ ಪ್ರದ್ಯುಮ್ನ ಮಿಶ್ರನೆಂಬ ಒಬ್ಬ ಒರಟ ಬ್ರಾಹ್ಮಣನನ್ನು ಕಳುಹಿಸಿ ಶೂದ್ರ, ಬ್ರಾಹ್ಮಣ ಅಥವಾ ಸನ್ಯಾಸಿ ಯಾರೇ ಆಗಿರಲಿ, ಕೃಷ್ಣ ತತ್ತ್ವದಲ್ಲಿರುವವನು ಗುರುವಾಗಬಹುದು ಎಂದು ತೋರಿಸಿಕೊಟ್ಟಿದ್ದಾರೆ.

ಆಧ್ಯಾತ್ಮಿಕ ಪೂರ್ಯೈಕೆಯ ಸುಖಾನುಭವದಲ್ಲಿ ಮನುಜರೆಲ್ಲರ ಸಮಾನತೆಯನ್ನು ಮಹಾಪ್ರಭುಗಳು ಬೋಧಿಸಿದರು. ಅವರು ಮನುಜರಲ್ಲಿ ಸಾರ್ವತ್ರಿಕ ಭ್ರಾತೃತ್ವವನ್ನು ಬೋಧಿಸಿದರು ಮತ್ತು ಅವರ ಪ್ರಕಾರ ಆಧ್ಯಾತ್ಮಿಕ ಉತ್ಕರ್ಷದ ಶ್ರೇಷ್ಠ ಪ್ರವರ್ತಕರಾಗಿರುವ ವೈಷ್ಣವರಲ್ಲಿ ವಿಶೇಷ ಭ್ರಾತೃತ್ವವನ್ನು ಬೋಧಿಸಿದರು. ಮಾನವನ ಭಾವನೆ ಎಂದಿಗೂ ಮತಾಭಿಪ್ರಾಯಗಳಿಗೆ ಸೀಮಿತವಾಗಲು ಬಿಡಬಾರದೆಂದು ಅವರು ಬೋಧಿಸಿದರು. ಒಬ್ಬ ಮನುಷ್ಯನು ಹಣವನ್ನು ದುರ್ಮಾರ್ಗದಿಂದ ಸಂಪಾದಿಸದೆ ಇನ್ನಿತರರೊಂದಿಗಿನ ಯೋಗ್ಯವಾದ ವ್ಯವಹಾರದ ಮೂಲಕ ಸಂಪಾದಿಸಬೇಕೆಂದು ಅವರು ಹೇಳುತ್ತಾರೆ. ರಾಮನಂದ ರಾಯರ ಸಹೋದರನಾದ ಗೋಪಿನಾಥ ಪಟ್ಟನಾಯಕ ದುರ್ಮಾರ್ಗದಿಂದ ಧನಸಂಪಾದಿಸಿದ್ದಕ್ಕಾಗಿ ರಾಜನಿಂದ ಶಿಕ್ಷೆಗೊಳಪಟ್ಟಾಗ ಶ್ರೀ ಚೈತನ್ಯರು ತಮ್ಮೆಲ್ಲ ಸಂಗಾತಿಗಳಿಗೆ ಪ್ರಾಪಂಚಿಕ ವ್ಯವಹಾರಗಳಲ್ಲಿ ನೀತಿವಂತರಾಗಿರುವಂತೆ ಎಚ್ಚರಿಸಿದರು. ಮಹಾಪ್ರಭುಗಳು ನಿರ್ಗತಿಕರಿಗೆ ಮತ್ತು ದುರ್ಬಲರಿಗೆ ಎಲ್ಲ ರೀತಿಯ ಸಹಾಯ ನೀಡಬೇಕೆಂದು ತಾವು ಹಿಂದೆ ಗೃಹಸ್ಥಾಶ್ರಮದಲ್ಲಿದ್ದಾಗ ಗೃಹಸ್ಥರೆಲ್ಲರಿಗೂ ಬೋಧಿಸಿದ್ದರು, ಮತ್ತು ಇದನ್ನು ಮಾಡಲು ಶಕ್ತಿಯಿರುವ ಜನರು ಶಿಕ್ಷಣದಲ್ಲಿ ನೆರವಾಗಬೇಕು, ಅದರಲ್ಲೂ ವಿಶೇಷವಾಗಿ ಮಾನವ ಜ್ಞಾನದ ಉನ್ನತ ವಿಷಯಗಳನ್ನು ಅಧ್ಯಯನ ಮಾಡಬೇಕಾದ ಬ್ರಾಹ್ಮಣರು ನೆರವಾಗಬೇಕು.

ಶ್ರೀ ಚೈತನ್ಯದೇವರು ಒಬ್ಬ ಶಿಕ್ಷಕರಾಗಿ ತಮ್ಮ ಪವಿತ್ರ ಜೀವನದ ಮೂಲಕ ಮತ್ತು ಬೋಧನೆಗಳ ಮೂಲಕ ಮನುಜರಿಗೆ ಶಿಕ್ಷಣವನ್ನು ನೀಡಿದ್ದಾರೆ. ಅವರ ಜೀವನದಲ್ಲಿ ಟೀಕಿಸಬಹುದಾದಂತಹ ಒಂದೂ ವಿಷಯವೂ ಇಲ್ಲ. ಅವರ ಸನ್ಯಾಸ ಸ್ವೀಕಾರವಾಗಲಿ, ಕಿರಿಯ ಹರಿದಾಸನಿಗಾದ ಕಠೋರ ಶಿಕ್ಷೆಯಾಗಲಿ ಮತ್ತು ಇನ್ನಿತರ ಕೃತ್ಯಗಳನ್ನು ಕೆಲ ವ್ಯಕ್ತಿಗಳಿಂದ ಆಕ್ಷೇಪಾರ್ಹವಾಗಿ ನೋಡಲಾಗಿದೆ. ಆದರೆ ಆ ವ್ಯಕ್ತಿಗಳು ಪಕ್ಷಾಭಿಮಾನದಿಂದ ಒಂದು ಆತುರದ ತೀರ್ಮಾನಕ್ಕೆ ಈಡಾಗಿದ್ದಾರೆಂದು ನಾವು ನಂಬಿರುತ್ತೇವೆ. ಮಹಾಪ್ರಭು ತಮ್ಮ ಸಂಕಲ್ಪಗಳನ್ನು ನಿರ್ವಹಿಸುವುದರಲ್ಲಿ ಧೈರ್ಯವುಳ್ಳ ಮಹಾಪುರುಷರಾಗಿದ್ದರು; ತಮ್ಮ ಕರ್ತವ್ಯ ಪಾಲನೆಯಲ್ಲಿ ಕಟ್ಟುನಿಟ್ಟಾಗಿದ್ದ ಅವರು ಅತಿ ಮಧುರ ಸ್ವಭಾವದವರಾಗಿದ್ದರು.

ಒಂದು ಬಾರಿ ಮಹಾಪ್ರಭುಗಳ ಸನ್ಯಾಸ ಗುರುಗಳಾದ ಕೇಶವ ಭಾರತಿಯವರ ಗುರುಸೋದರರಾದ ಬ್ರಹ್ಮಾನಂದ ಭಾರತಿಗಳು ಹುಲಿಯ ಚರ್ಮದ ಉಡುಪನ್ನು ಧರಿಸಿ ಅವರನ್ನು ನೋಡಲು ಬಂದರು. ಅವರು ಹುಲಿಯ ಚರ್ಮವನ್ನು ತ್ಯಜಿಸಿ ನಾರು ಬಟ್ಟೆಯನ್ನುಡುವವರೆಗೂ ಮಹಾಪ್ರಭುಗಳು ಅವರಿಗೆ ನಮಿಸಲು ಒಪ್ಪಲಿಲ್ಲ. ಅವರು ಹೇಳಿದರು, ''ನನ್ನ ಎದುರು ಇರುವ ವ್ಯಕ್ತಿ ಭಾರತಿಯವರಲ್ಲ. ನನ್ನ ಗುರುಗಳಿಗೆ ಸಮಾನರಾದವರು ಒಂದು ಪ್ರಾಣಿಯ ಚರ್ಮವನ್ನು ಧರಿಸಲು ಹೇಗೆ ಸಾಧ್ಯ? ಸನ್ಯಾಸಿಗಳು ತಮ್ಮ ಸ್ವಂತ ಸುಖಕ್ಕಾಗಿ ಪ್ರಾಣಿಗಳ ಹತ್ಯೆಯನ್ನು ಉತ್ತೇಜಿಸುವುದಿಲ್ಲ". ಮಹಾಪ್ರಭುಗಳಿಗೆ ಅದು ಒಪ್ಪಿಗೆಯಾಗಲಿಲ್ಲವೆಂದು ತಿಳಿದ ಭಾರತಿ ತಮ್ಮ ಉಡುಗೆಯನ್ನು ಬದಲಾಯಿಸಿದರು. ನಂತರ ಶ್ರೀ ಚೈತನ್ಯರು ತಮ್ಮ ಗುರುಗಳ ಗುರುಸೋದರರಿಗೆ ಯುಕ್ತವಾದ ಗೌರವವನ್ನು ಸಲ್ಲಿಸಿ ಅವರಿಗೆ ನಮಿಸಿದರು.

ಇನ್ನೊಂದು ಬಾರಿ, ವಲ್ಲಭ ಭಟ್ಟನೆಂಬ (ಒಬ್ಬ ಪ್ರಸಿದ್ಧ) ವಿದ್ವಾಂಸ ಶ್ರೀಮದ್ ಭಾಗವತದ ಕುರಿತು ತನ್ನ ಭಾಷ್ಯ ಉತ್ತಮವೆಂದು ತಿಳಿದು, ಅದನ್ನು ಶ್ರೀಧರ ಸ್ವಾಮಿಗಳಿಗೆ ಅರ್ಪಿಸುವುದಿಲ್ಲವೆಂದು ಹೇಳುತ್ತ ಮಹಾಪ್ರಭುಗಳಿಗೆ ತೋರಿಸಿದರು. ಅವರ ಈ ಕ್ರಿಯೆ ಒಬ್ಬಳು ಪರಿಶುದ್ಧತೆಯಿಲ್ಲದ ಸ್ತ್ರೀಯು ತನ್ನ ಪತಿಯನ್ನು ಅಲಕ್ಷ್ಯ ಮಾಡಿದ ಹಾಗೆಂದು ಮಹಾಪ್ರಭುಗಳು ಉತ್ತರಿಸಿದರು. ಈ ಟೀಕೆಯು ವಲ್ಲಭ ಭಟ್ಟನ ಗರ್ವ ಮುರಿಯಿತು ಮತ್ತು ಅವನು ಭಾಗವತದ ಮೊದಲ ವ್ಯಾಖ್ಯಾನಕರ್ತರಾದ ಶ್ರೀಧರ ಸ್ವಾಮಿಗಳ ಕುರಿತು ಇನ್ನಷ್ಟು ಅನಾದರದ ಅಭಿಪ್ರಾಯಗಳನ್ನು ವ್ಯಕ್ತಪಡಿಸದಹಾಗೆ ಮಾಡಿತು.

ಪದಗಳಿಂದ ಪ್ರತಿಬಂಧಗೊಳ್ಳದೇ ಶಾಸ್ತ್ರಗಳ ಅಂತರಾರ್ಥವನ್ನು ಪ್ರವೇಶಿಸಬೇಕೆಂದು ಮಹಾಪ್ರಭುಗಳು ತಮ್ಮ ಶಿಷ್ಯರುಗಳಿಗೆ ಒತ್ತಿ ಹೇಳಿದರು. ದೇವಾನಂದ ಪಂಡಿತನು ಭಾಗವತವನ್ನು ಓದುವಾಗ ಭಕ್ತಿಯ ಅಂತರಾರ್ಥವನ್ನು ಅರ್ಥಮಾಡಿಕೊಳ್ಳಲಿಲ್ಲವಾದ್ದರಿಂದ ಭಗವತ್ ಭಕ್ತರೊಂದಿಗಿನ ವ್ಯವಹಾರಗಳಲ್ಲಿ ಅಪರಾಧಗಳನ್ನು ಮಾಡಿದರು. ಆದರೆ ಯಾವಾಗ ಅವರು ಭಕ್ತಿಯ ಅಂತರಾರ್ಥವನ್ನು ಗ್ರಹಿಸಿದರೊ ಆಗ ಶ್ರೀ ಚೈತನ್ಯರು ಅವರನ್ನು ಅಪ್ಪಿಕೊಂಡು ಅವರು ಹಿಂದೆ ಮಾಡಿದ ಅಪರಾಧಗಳೆಲ್ಲವನ್ನು ಕ್ಷಮಿಸಿದರು.

ಮಹಾಪ್ರಭುಗಳು ಬೋಧಿಸಿದ ಧರ್ಮವು ಸಾರ್ವತ್ರಿಕವಾದದ್ದು ಮತ್ತು ಯಾವುದೇ ಒಂದು ಪಂಥಕ್ಕೆ ಸೀಮಿತವಾದದ್ದಲ್ಲ. ಅತಿ ಬುದ್ಧಿವಂತರು ಮತ್ತು ಅತಿ ಅಜ್ಞಾನಿಗಳಿಬ್ಬರೂ ಸಮಾನವಾಗಿ ಇದನ್ನು ಸ್ವೀಕರಿಸಲು ಅರ್ಹರು. ಶಿಕ್ಷಿತ ಜನರು ಮಹಾನ್ ಆಚಾರ್ಯರುಗಳು ಬಿಟ್ಟು ಹೋಗಿರುವ ಗ್ರಂಥಗಳನ್ನು ಅಧ್ಯಯನ ಮಾಡಿ ಸ್ವೀಕರಿಸಬಹುದು. ಅದೇ ಸೌಕರ್ಯವನ್ನು ಅಜ್ಞಾನಿಗಳು ಕೇವಲ ಭಗವಂತನ ನಾಮ ಜಪದಿಂದ ಮತ್ತು ಶುದ್ಧ ವೈಷ್ಣವರ ಸಂಗದಲ್ಲಿ ಬೆರೆತು ಪಡೆಯಬಹುದು. ಕೀರ್ತನೆಯ ಆಂದೋಲನವು ಆತ್ಮವನ್ನು ಉನ್ನತವಾದ ಅಭಿವೃದ್ಧಿಯಲ್ಲಿ ತೊಡಗಿಸಿ ಜಾತಿ ಮತ್ತು ಕುಲ ಎಂಬ ಭೇದಭಾವ ಮಾಡದೆ ಎಲ್ಲ ವರ್ಗದ ಜನರನ್ನು ಆಹ್ವಾನಿಸುತ್ತದೆ. ಈ ಆಂದೋಳನವು ವಿಶ್ವದೆಲ್ಲೆಡೆ ಪಸರಿಸಿ ದೇವಾಲಯ, ಇಗರ್ಜಿ ಅಥವಾ ಮಸೀದಿಗಳ ಎಲ್ಲೆಕಟ್ಟುಗಳನ್ನು ಮೀರಿ ಎಲ್ಲ ವರ್ಗಗಳ ಸಂಸ್ಥೆಗಳಿಂದ ಉನ್ನತ ಸ್ಥಾನವನ್ನು ಪಡೆಯುವಂತೆ ಕಂಡುಬರುತ್ತದೆ.

ಈ ಪುಸ್ತಕವನ್ನು ಓದಿದ ನಂತರ ನೀವು ಶ್ರೀ ಚೈತನ್ಯರನ್ನು ಭಗವಂತನೆಂದು ಗುರುತಿಸುವ ಇಂಗಿತವನ್ನು ಹೊಂದಿದ್ದರೆ, ನಾವು ನಿಮ್ಮಲ್ಲಿ ಬೇಡಿಕೊಳ್ಳುವುದಿಷ್ಟೇ, ಬದ್ಧ ಜೀವಿಗಳ ಹಾಗೆ ದೇವರು ಇಂದ್ರಿಯ ಸುಖದ ಸುರುಳಿಗೆ ಪ್ರವೇಶಿಸಿರುವನೆಂದು ಯೋಚಿಸಬೇಡಿ. ಅವನ ಪರಮ ಶಕ್ತಿಯು ಅವನನ್ನು ಮಾಯೆಯ ಕೆಳವರ್ಗದ ಶಕ್ತಿಯಿಂದ ಸ್ಪರ್ಶಿಸಗೊಡದೆ ತನ್ನ ಎಲ್ಲ ವೈಭವ ಮತ್ತು ಗುಣಲಕ್ಷಣಗಳೊಂದಿಗೆ ಐಹಿಕ ಜಗತ್ತಿಗೆ ತರಲು ಶಕ್ತವಾಗಿರುತ್ತದೆ. ಇದನ್ನು ಬೇರೆ ರೀತಿಯಾಗಿ ನಂಬುವುದರಿಂದ ಅವನ ನಿಜವಾದ ಸ್ಥಾನವನ್ನು ಕ್ಷೀಣಗೊಳಿಸಿದ ಪಾಪಕ್ಕೆ ಗುರಿಯಾಗುತ್ತೇವೆ.

ಓದುಗರು ಅವರ ಚಮತ್ಕಾರಗಳನ್ನು ನಂಬದಿದ್ದಲ್ಲಿ ನಾವು ಯಾವ ಆಕ್ಷೇಪಣೆಯನ್ನೂ ಮಾಡುವುದಿಲ್ಲ ಏಕೆಂದರೆ ಕೇವಲ ಚಮತ್ಕಾರಗಳೊಂದೇ ಭಗವಂತನನ್ನು ಪ್ರತಿನಿಧಿಸುವುದಿಲ್ಲ. ರಾವಣ ಮಾತ್ತು ಅವನಂತಹ ಇನ್ನಿತರ ರಾಕ್ಷಸರುಗಳು ಕೂಡಾ ಚಮತ್ಕಾರಗಳನ್ನು ಮಾಡಿದ್ದರೂ ಅವುಗಳು ಅವರನ್ನು ದೇವರೆಂದು ಪ್ರಮಾಣಿಸುವುದಿಲ್ಲ. ಅಪರಿಮಿತ ಪ್ರೇಮ ಮತ್ತು ಅದರ ಬಲವಾದ ಪ್ರಭಾವ ಸಾಕ್ಷಾತ್ ಭಗವಂತನಲ್ಲಲ್ಲದೆ ಇನ್ಯಾರಲ್ಲೂ ಕಾಣಲಾಗುವುದಿಲ್ಲ.

ಅಂತಿಮವಾಗಿ, ಶ್ರೀ ಚೈತನ್ಯ ಮಹಾಪ್ರಭುಗಳನ್ನು ಯಾವ ದೃಷ್ಟಿಯಿಂದ ನೋಡಬೇಕೆಂಬುದನ್ನು ನಮ್ಮ ಓದುಗರಿಗೆ ಬಿಡುತ್ತೇವೆ. ವೈಷ್ಣವರು ಅವರನ್ನು ಪರಮ ಪ್ರಭುವಾದ ಶ್ರೀ ಕೃಷ್ಣನೇ ಎಂದು ಒಪ್ಪಿಕೊಂಡಿದ್ದಾರೆ. ಇನ್ನಿತರರು ಅವರನ್ನು ಭಕ್ತಾವತಾರವೆಂದು ಗೌರವಿಸುತ್ತಾರೆ(ಭಗವತ್ ಪ್ರೇಮವನ್ನು ಹಂಚಲು ಬಂದ ಒಂದು ದಿವ್ಯ ಅವತಾರ). ಯಾರಿಗೆ ಆಗಿರಲಿ ಅವರನ್ನು ಅದೇ ರೂಪದಲ್ಲಿ ಸ್ವೀಕರಿಸಲು ಸಾಧ್ಯವಾಗದಿದ್ದಲ್ಲಿ ನಿಮಾಯ್ ಪಂಡಿತರನ್ನು ಒಬ್ಬ ಆಢ್ಯ ಮತ್ತು ಪವಿತ್ರ ಬೋಧಕರಾಗಿ ಸ್ವೀಕರಿಸಬಹುದು. ಇಷ್ಟನ್ನು ನಾವು ನಮ್ಮ ಓದುಗರಿಗೆ ವಿಶ್ವಾಸದಿಂದ ಸ್ವೀಕರಿಸಲು ಕೇಳಿಕೊಳ್ಳುತ್ತೇವೆ.

ಅಂತಿಮವಾಗಿ ನಾವು ಕೋರಿಕೊಳ್ಳುವುದೇನೆಂದರೆ, ಓದುಗರು ಈ ಪುಸ್ತಕದ ಮುಖ್ಯ ವಿಷಯಗಳನ್ನು ಕುರಿತು ಕೇಳುವ ಯಾವ ಪ್ರಶ್ನೆಗಳಿಗಾದರೂ ಉತ್ತರಿಸಲು ನಮಗೆ ಆನಂದವಾಗುತ್ತದೆ. ನಮ್ಮ ಸ್ನೇಹಿತರಿಗೆ ಆಧ್ಯಾತ್ಮಿಕ ಪ್ರೀತಿಗೆ ದಾರಿಯನ್ನು ಪಡೆಯುವ ಪ್ರಯತ್ನದಲ್ಲಿ ಸಹಾಯ ಮಾಡುವುದು ನಮ್ಮ ಮಹದಾಸಕ್ತಿಯ ವಿಷಯವಾಗಿರುತ್ತದೆ.



ಭಾರತದ ಒಂದು ಪ್ರತ್ಯೇಕ ವರ್ಗದ ಮನುಜರನ್ನು ಮುಕ್ತಗೊಳಿಸಲು ಮಹಾಪ್ರಭು ಈ ಲೋಕದಲ್ಲಿ ಅವತರಿಸಲಿಲ್ಲ, ನಿಜವಾಗಿ ಹೇಳುವುದಾದರೆ ಪ್ರಪಂಚದ ಎಲ್ಲ ದೇಶಗಳ ಎಲ್ಲ ಜೀವಿಗಳನ್ನು ಅವರ ಸನಾತನ ಧರ್ಮವಾದ ಭಗವತ್ ಪ್ರೇಮದ ಭಾವೋನ್ಮಾದದ ಶುದ್ಧ ಮತ್ತು ಶ್ರೇಷ್ಠ ಮಟ್ಟಕ್ಕೆ ಉದ್ಧರಿಸುವ ಉದ್ದೇಶ ಅವರದಾಗಿತ್ತು.

GOSAI
PUBLISHERS